ಸಂಗ್ರಹರಾಮಾಯಣಮ್

ಬಾಲಕಾಂಡ

ಕನ್ನಡ ಅನುವಾದ ಸಹಿತ

ಸಂಗ್ರಾಹಕರು ಮತ್ತು ಅನುವಾದಕರು
ವ್ಯಾಕರಣ ಸಾಹಿತ್ಯ ವಿದ್ವಾನ್
ಎನ್. ಟಿ. ಶ್ರೀನಿವಾಸ ಅಯ್ಯಂಗಾರ್

ಶ್ರೀರಾಮ ಪ್ರೆಸ್
ಬೆಂಗಳೂರು
೧೯೫೮

ಶ್ರೀರಾಮಮಿಶ್ರ ಗ್ರಂಥಮಾಲಾ ೧

ಸಂಗ್ರಹರಾಮಾಯಣಮ್

ಬಾಲಕಾಂಡ

ಕನ್ನಡ ಅನುವಾದ ಸಹಿತ

ಸಂಗ್ರಾಹಕರು ಮತ್ತು ಅನುವಾದಕರು

ವ್ಯಾಕರಣ ಸಾಹಿತ್ಯ ವಿದ್ವಾನ್

ಎನ್. ಟಿ. ಶ್ರೀನಿವಾಸ ಅಯ್ಯಂಗಾರ್

(ವ್ಯಾ. ಪ್ರೊ. ಆಸ್ಥಾನ ವಿದ್ವಾನ್
ನು. ಸೋ. ತಿರುನಾರಣ ಅಯ್ಯಂಗಾರ್ಯರ ಪುತ್ರರು)

ಶ್ರೀ ರಾಮ ಪ್ರೆಸ್

ಬೆಂಗಳೂರು

೧೯೪೪

ಬೆಲೆ 1 1 0

PRINTED AT
SRI RAMA PRESS
BANGALORE CITY
1948

ಪುಸ್ತಕ ದೊರೆಯುವ ಸ್ಥಳ:—

ಶ್ರೀರಾಮ ಪ್ರೆಸ್,
ಶಂಕರಪುರಂ, ರಂಗರಾವ್ ರೋಡ್
ಬೆಂಗಳೂರು 4.

ಮುನ್ನುಡಿ

ಮನುಷ್ಯಲೋಕ ಈ ಹೊತ್ತು ರೋಗದಿಂದ ನರಳುತ್ತಿರುವುದು ಎಲ್ಲರಿಗೂ ಪ್ರತ್ಯಕ್ಷವಾಗಿ ಕಾಣುತ್ತಿದೆ. ಎಲ್ಲಿ ನೋಡಿದರೂ ಜನಕ್ಕೆ ತಲ್ಲಣ, ಭಯ, ಚಿಂತೆ,ರೋಷ, ಹಟ, ವೀರ ವೈಪರೀತ್ಯ, ಪೂರ್ವದುಃಖಸ್ಮರಣೆ, ಸಂತತವಾದ ಚಿತ್ತೋದ್ವೇಗ. ಈ ರೋಗ ಹಿಂದೆ ಎಂದೂ ಇಷ್ಟು ಉತ್ಕಟ ವಾಗಿ ಇಷ್ಟು ಸಾರ್ವತ್ರಿಕವಾಗಿ, ಜಗತ್ತನ್ನು ಆವರಿಸಿದ್ದಂತೆ ಕಾಣುವುದಿಲ್ಲ. ಇದು ದೇಹದ ರೋಗವಲ್ಲ; ಜೀವದ ರೋಗ. ಅದರ ಬೀಜಗಳು ನಮ್ಮ ಅಂತರಾತ್ಮವನ್ನು ಆವರಿಸಿಕೊಂಡಿರುವ ಮನೋಮಯ ಕೋಶದಲ್ಲಿ ಅಡಗಿರತಕ್ಕವು. ಆ ಅಂತರಂಗ ಕೋಶದ ಪರಿಶೋಧನೆಯೇ ಈಗ ಮನುಷ್ಯ ಲೋಕಕ್ಕೆ ಆಗಬೇಕಾಗಿರುವ ಚಿಕಿತ್ಸೆ.

ಅಂತರಂಗ ಚಿಕಿತ್ಸೆಗಾಗಿ ನಮಗೆ ಸಿದ್ಧವಾಗಿರುವ ಸಾಧನಗಳಲ್ಲಿ ಮೊಟ್ಟಮೊದಲನೆಯದು ಮಹಾಕವಿ ವಾಕ್ಯ. ಸಮಸ್ತ ಪ್ರಪಂಚದ ವಾಙ್ಮಯ ಪರ್ವತಕ್ಕೆ ಶಿಖರಪ್ರಾಯವಾದ ಕೃತಿಗಳು ರಾಮಾಯಣ ಭಾರತಗಳು. ಮಾನುಷಜೀವಿಯ ಅಂತರಂಗತತ್ವಗಳ ಸ್ವರೂಪವನ್ನೂ, ಬಹಿರಂಗಾವರಣದ ಚೋದನೆಗಳನ್ನೂ, ಅಂತರಂಗ ಬಹಿರಂಗಗಳ ಚೇಷ್ಟಿತ ಪ್ರತಿಚೇಷ್ಟಿತ ಗಳನ್ನೂ, ಪೂರ್ವವಾಸನೆಗಳ ಬಲಾತಿಶಯವನ್ನೂ, ಕರ್ಮ ಸಂಸ್ಕಾರದ ಆವಶ್ಯಕತೆಯನ್ನೂ, ಪುರುಷಾರ್ಥ ನಿರ್ಣಯದಲ್ಲಿ ಉತ್ತಮಾಧಮವಿವೇಚನೆ ಯ ಪ್ರಕಾರನ್ನೂ ನಮ್ಮ ವಾಲ್ಮೀಕಿ ವ್ಯಾಸ ಮಹರ್ಷಿಗಳು ರೂಪಗೊಳಿ ಸಿರುವಂತೆ ಮರ್ಮಸ್ಪೃಕ್ಕಾದ ಚಿತ್ರಗಳಲ್ಲಿ ಚಿತ್ರಿಸುವ ಪ್ರತಿಭೆಯು ವರ ಪ್ರಪಂಚದಲ್ಲಿ ಇನ್ನಾವ ಕವಿಗೂ ದೊರೆತಿರುವಂತೆ ತೋರುವುದಿಲ್ಲ.

ವೇದಾರ್ಥಗಳ ಸಾಕ್ಷಾನ್ನಿದರ್ಶನಗಳಂತಿರುವ ರಾಮಾಯಣ ಭಾರತ ಗಳ ಸಾರದ್ರವ್ಯವು ನಾನಾ ದೇಶ ನಾನಾ ಜಾನಪದಗಳ ಅಂತರಂಗಕೋಶ ದೊಳಕ್ಕಿಳಿದು ಅಲ್ಲಿ ಆತ್ಮಸಂಸ್ಕಾರ ನಡಸಿದ ಹೊರತು, - ಆತ್ಮಸಂಪತ್ತು ಲೋಕಸಂಪತ್ತಿಗಿಂತ ಉತ್ತಮವಾದದ್ದೆಂಬ ತಿಳಿವಳಿಕೆಯೂ, ಧರ್ಮ

ಮಾರ್ಗವೇ ಆತ್ಮಶ್ರೇಯಸ್ಸಿನ ಮಾರ್ಗವೆಂಬ ತಿಳಿವಳಿಕೆಯೂ ಅವರ ಮನಸ್ಸುಗಳಲ್ಲಿ ಬೇರೂರಿದ ಹೊರತು - ಜಗತ್ತಿಗೆ ಕ್ಷೇಮ ಸಮಾಧಾನಗಳ ಆಶೆ ಎಂದಿಗೂ ಇರಲಾರದು. ಜನಜನಾಂಗಗಳ ಇಂದಿನ ಕಲಹ ಕಾರ್ಪಣ್ಯಗಳು ಕೇವಲ ರಾಜಕೀಯ ಉಪಾಯಗಳಿಂದಲಾಗಲಿ ಆರ್ಥಿಕ ಸಂಧಾನಗಳಿಂದಲಾಗಲಿ ಪರಿಹಾರವಾಗತಕ್ಕುವಲ್ಲ. ನಮ್ಮ ಇಂದಿನ ಉಪದ್ರವಗಳು ಮೂಲದಲ್ಲಿ ಧರ್ಮವಿಚಾರದವು, ನೀತಿ ನಿಷ್ಠೆಯ ವಿಚಾರದವು. ಆದಕಾರಣ ರಾಮಾಯಣ ಭಾರತಗಳಲ್ಲಿರುವ ಆತ್ಮಪಥ ಇಂದು ಸಮಸ್ತ ಮಾನವ ಲೋಕವೂ ಸೇವಿಸಬೇಕಾದದ್ದು.

ಭಾರತೀಯರಿಗಂತೂ ರಾಮಾಯಣ ಭಾರತಗಳು ಪ್ರಾಣವಾಯು ಸಮಾನವಾದವು. ಹರಿಜನರೆನಿಸಿಕೊಂಡಿರುವ ಜನವರ್ಗ ಮೊದಲ್ಗೊಂಡು ಎಲ್ಲಜಾತಿ ಎಲ್ಲಪಂಗಡಗಳ ಹಿಂದೂಗಳಿಗೂ ರಾಮಾಯಣ ಭಾರತಗಳ ನಾಯಕ ನಾಯಿಕೆಯರ ಹೆಸರುಗಳು ಮನೆಮಾತಾಗಿವೆ. ಮಕ್ಕಳಿಗೆ ರಾಮ, ಕೃಷ್ಣ, ಸೀತೆ, ರುಕ್ಮಿಣಿಯರ ಹೆಸರನ್ನಿಡದ ಮನೆಯಿಲ್ಲ. ಆ ಆಖ್ಯಾನಗಳು ನಮ್ಮ ನೈಜಕ್ಕೆ ಪ್ರತಿಬಿಂಬದಂತಿವೆ. ನಮ್ಮಗಳ ಅಂತರಂಗದ ಆಳದಲ್ಲಿ ಅಡಗಿಕೊಂಡಿರುವ ಪ್ರವೃತ್ತಿಬೀಜಗಳೆಂಥವೆಂಬುದನ್ನು ರಾಮಾಯಣ ಭಾರತಗಳು ಎತ್ತಿತೋರಿಸುತ್ತವೆ. ಅವು ಅಂಥವಾಗಿರುವ ಕಾರಣದಿಂದಲೇ ಆ ಕಥೆಗಳನ್ನು ಕೇಳುತ್ತಿರುವಾಗ ಅವು ನಮ್ಮ ಮನಸ್ಸುಗಳನ್ನು ಕಲಕಿ ಕಣ್ಣುಗಳಲ್ಲಿ ನೀರುಕ್ಕಿಸಿ ಆತ್ಮವನ್ನು ಜಾಲಾಡಿಸುತ್ತವೆ. ಅದೇ ಆತ್ಮಸಂಸ್ಕಾರ. ಇಂಥಾ ಆತ್ಮ ಸಂಸ್ಕಾರದಿಂದಲೇ ಜೀವನೋತ್ಕರ್ಷ; ಅದರಿಂದಲೇ ಪರಮಾರ್ಥಸಿದ್ಧಿ.

ಹೀಗೆ ಸಕಲ ಲೋಕ ಸೇವ್ಯವಾಗಿ ಭಾರತಜನ ಪ್ರಿಯವಾಗಿರುವ ಎರಡು ಮಹಾಕಾವ್ಯಗಳಲ್ಲಿ ಆದಿಕಾವ್ಯವೆಂದು ಪೂಜ್ಯವಾಗಿರುವ ಶ್ರೀಮದ್ರಾಮಾಯಣವನ್ನು ವಿದ್ವಾನ್ ಶ್ರೀ|| ಎನ್. ಟಿ. ಶ್ರೀನಿವಾಸ ಅಯ್ಯಂಗಾರ್ಯರವರು ಸಂಗ್ರಹರೂಪದಲ್ಲಿ ಕನ್ನಡಿಗರಿಗೆ ಒದಗಿಸಿಕೊಡಲು ಪ್ರಯತ್ನಮಾಡಿರುವುದು ಎಲ್ಲರಿಗೂ ಸಂತೋಷಕರವಾಗುವ ಸಂಗತಿ. ಕಾವ್ಯದ ಮೂಲ ಸಂಸ್ಕೃತ ಶ್ಲೋಕಗಳಲ್ಲಿ ಸಾರಭೂತವಾಗಿ

ಕಥಾಸರಣಿಗೆ ಅವಶ್ಯವಾಗಿರುವವುಗಳನ್ನು ಆರಿಸಿ ಜೋಡಿಸಿ, ಅವುಗಳ ಕೆಳಗೆ ಕನ್ನಡದಲ್ಲಿ ತಾತ್ಪರ್ಯ ವಚನವನ್ನು ಬರೆದಿರುವುದು ಸಾಧುವಾದ ಏರ್ಪಾಡು. ಶ್ರೀ ಶ್ರೀನಿವಾಸಯ್ಯಂಗಾರ್ಯರವರು ಒಳ್ಳೆಯ ಸಾಹಿತ್ಯಾಭ್ಯಾಸಿಗಳು, ವಿಮರ್ಶನಚತುರರು. ಅವರ ಕನ್ನಡವಚನವನ್ನು ಅಲ್ಲಲ್ಲಿ ನೋಡಿದ್ದೇನೆ. ಅದು ಸರಳವಾಗಿ ಲಲಿತವಾಗಿದೆ. ಗದ್ಯಾನುವಾದವನ್ನು ಕೊಡಿದಮಟ್ಟಿಗೂ ವಾಚಕರಿಗೆ ಸುಲಭವಾಗುವ ಶೈಲಿಯಲ್ಲಿ ಬರೆಯುವುದು ಅವಶ್ಯವೆಂಬುದನ್ನು ಅವರು ಮನಸ್ಸಿಗೆ ತಂದುಕೊಂಡಿದ್ದಾರೆ. ಅವರ ಈ ಪ್ರಕಟನೆ ರಾಮಕಥೆಯನ್ನು ತಿಳಿದುಕೊಳ್ಳುವುದಕ್ಕೂ ಕಾವ್ಯ ಸ್ವಾರಸ್ಯವನ್ನು ಅಸ್ವಿಷ್ಟಾದರೂ ರುಚಿ ನೋಡುವುದಕ್ಕೂ ಮಾತ್ರವಲ್ಲದೆ ಸಂಸ್ಕೃತಭಾಷೆಯ ಪರಿಚಯವನ್ನು ಸಂಪಾದಿಸುವುದಕ್ಕೂ ಉಪಕಾರಿಯಾಗುತ್ತದೆ. ಸಂಸ್ಕೃತ ಎಲ್ಲ ಹಿಂದುಗಳೂ ಕಲಿಯಬೇಕಾದ ಭಾಷೆ.

ಕನ್ನಡ ದೇಶದಲ್ಲಿ ಇದು ಪ್ರತಿಯೊಂದು ಮನೆಯಲ್ಲೂ ಇರಬೇಕಾದ ಗ್ರಂಥ, ಪ್ರತಿಯೊಬ್ಬ ಹುಡುಗನಿಂದಲೂ ಪ್ರತಿಯೊಬ್ಬ ಹುಡುಗಿಯಿಂದಲೂ ಓದಿಸಬೇಕಾದ ಗ್ರಂಥ; ಸಾಮಾನ್ಯಜನರಿಗೆ ಭಗವದ್ಗೀತೆಗಿಂತ ಹೆಚ್ಚು ಉಪಯುಕ್ತವಾಗುವ ಗ್ರಂಥ.

ಇದರ ಉಪಕಾರಕತೆಯನ್ನು ಕನ್ನಡ ಜನ ಕೂಡಲೇ ಕಂಡುಕೊಂಡು ಅದರ ಫಲವನ್ನು ಆದರದಿಂದ ಗಳಿಸಿಕೊಂಡಾರೆಂದು ನಾನು ನಂಬಿಕೆಯಿಂದ ಹಾರಯಿಸುತ್ತೇನೆ.

ಡಿ. ವಿ. ಗುಂಡಪ್ಪ

ಧರ್ಮ, ಅರ್ಥ, ಕಾಮ, ಮೋಕ್ಷವೆಂಬ ನಾಲ್ಕುವಿಧ ಪುರುಷಾರ್ಥಗಳನ್ನು ಪಡೆಯಲು ಯೋಗ್ಯವೂ ಅಗತ್ಯವೂ ಆದ ಸುಲಭದಾರಿಯನ್ನು ತೋರುವ ವಾಲ್ಮೀಕಿ ರಾಮಾಯಣವು ಪರಮಶ್ರೇಷ್ಠವೆಂಬುದು ಸರ್ವವಿದಿತ. ಓದುವವರಿಗೆ ಬೇಕಾದ ಫಲವನ್ನು ಕೊಡುವ ಕಲ್ಪವೃಕ್ಷವಿದು. ಇಂತಹ ರಾಮಾಯಣದ ಪಠನವು ಮನುಷ್ಯಸಾಮಾನ್ಯಕ್ಕೆ ಅತ್ಯಗತ್ಯವೆಂಬುದನ್ನು ಒತ್ತಿ ಹೇಳಬೇಕಾಗಿಲ್ಲ. ಆದರೆ ಸಾಗರದಂತೆ ವಿಸ್ತಾರವಾಗಿರುವ ಇದನ್ನು ಕಂಡು ನಿರಾಶೆಯಿಂದ ದೂರಸರಿದು ಇದರಿಂದಾಗುವ ಪ್ರಯೋಜನವನ್ನು ಪಡೆಯದಿರುವವರಿಗೆ ಇದರಲ್ಲಿ ಅಡಗಿರುವ ರತ್ನಗಳನ್ನು ಆರಿಸಿಕೊಟ್ಟಾದರೂ ಅನುಕೂಲ ಕಲ್ಪಿಸಿಕೊಡಬೇಕಾದುದು ಅಗತ್ಯವೆಂದು ಯೋಚಿಸಿ ೨೪ಸಾವಿರ ಶ್ಲೋಕಗಳುಳ್ಳ ರಾಮಾಯಣವನ್ನು ೪ ಸಾವಿರದಲ್ಲಿ ಅಡಗುವಂತೆ ಸಂಗ್ರಹಿಸಿದೆನು. ಕಥಾಪ್ರವಾಹಕ್ಕೆ ತಡೆಯಿಲ್ಲದ ರೀತಿಯಲ್ಲಿ ಧಾರ್ಮಿಕ, ಸಾಮಾಜಿಕ, ನೈತಿಕ ಮುಂತಾದ ವಿಷಯಗಳನ್ನು ಪ್ರತಿಪಾದಿಸುವ ಶ್ಲೋಕಗಳು ಇದರಲ್ಲಡಕವಾಗಿವೆ. ಇದರ ಬಾಲ, ಅಯೋಧ್ಯಾ, ಅರಣ್ಯ, ಕಿಷ್ಕಿಂಧಾ ಕಾಂಡಗಳು ಶ್ರೀಮಾನ್ ಪಿ. ವಿ. ಸುಬ್ರಹ್ಮಣ್ಯ ಅಯ್ಯರ್ ಅವರ ಉದಾರ ಸಹಾಯದಿಂದ ಸಂಸ್ಕೃತಲಿಪಿಯಲ್ಲಿ ಪ್ರಕಟವಾದವು. ಸಂಸ್ಕೃತಲಿಪಿಯಲ್ಲಿ ಮುದ್ರಿತವಾದ ಆ ಪುಸ್ತಕಗಳಿಂದ ಆ ಲಿಪಿಯನ್ನು ಅರಿಯದ ಕನ್ನಡಿಗರಿಗೆ ಸಾಕಾದಷ್ಟು ಪ್ರಯೋಜನವಾಗದಿರುವುದನ್ನು ಕಂಡು ಅಭಿಮಾನಿಗಳಾದ ಕೆಲ ಮಹನೀಯರಿಂದ ಪ್ರೇರಿತನಾಗಿ ಸಂಸ್ಕೃತಭಾಷೆಯನ್ನು ಅರಿಯದವರಿಗೂ ಸಹ ಸಹಾಯವಾಗುವ ಉದ್ದೇಶದಿಂದ ಕನ್ನಡ ಅನುವಾದದೊಂದಿಗೆ ಕನ್ನಡ ಲಿಪಿಯಲ್ಲಿ ಬಾಲಕಾಂಡ ಭಾಗವನ್ನೀಗ ಪ್ರಕಟಮಾಡಿದ್ದೇನೆ. ಇದರಿಂದ ಕನ್ನಡಿಗರೆಲ್ಲರಿಗೂ ಪ್ರಯೋಜನವಾಗುವುದೆಂದು ನಂಬುತ್ತೇನೆ.

ಮುನ್ನುಡಿಯನ್ನು ಬರೆದು ಕೊಟ್ಟು ಅಲ್ಪನ ಈ ಪುಸ್ತಕಕ್ಕೆ ಹಿರಿಮೆಯನ್ನುಂಟುಮಾಡಿ ತುಂಬ ಉಪಕಾರಮಾಡಿದ ಸುಪ್ರಸಿದ್ಧ ಕನ್ನಡ ಸಾಹಿತಿಗಳಾದ ಮಾನ್ಯ ಶ್ರೀಮಾನ್, ಡಿ. ವಿ. ಗುಂಡಪ್ಪನವರಿಗೆ ನನ್ನ ಕೃತಜ್ಞತಾಪೂರ್ವಕವಾದ ಅನಂತ ವಂದನೆಗಳು.

ಸಂಗ್ರಾಹಕ

ಶ್ರೀಃ

ಶ್ರೀಸೀತಾಲಕ್ಷ್ಮಣಭರತಶತ್ರುಘ್ನಹನುಮತ್ಸಮೇತಶ್ರೀರಾಮಚಂದ್ರ
ಪರಬ್ರಹ್ಮಣೇನಮಃ

ಸಂಗ್ರಹರಾಮಾಯಣಮ್

ಬಾಲಕಾಂಡಃ

ನತ್ವಾ ಸೀತಾಪತಿಂ ರಾಮಂ ರಾಮಾಯಣಮಹೋದಧೇಃ ।
ಸಾರಂ ಸರ್ವೋಪಯೋಗಾಯ ಶ್ರೀನಿವಾಸಃ ಸಮುದ್ಧರೇ ॥

ತಪಸ್ಸ್ವಾಧ್ಯಾಯನಿರತಂ ತಪಸ್ವೀ ವಾಗ್ವಿದಾಂ ವರಮ್ ।
ನಾರದಂ ಪರಿಪಪ್ರಚ್ಛ ವಾಲ್ಮೀಕಿರ್ಮುನಿಪುಂಗವಮ್ ॥ ೧ ॥
ಕೋನ್ವಸ್ಮಿನ್ ಸಾಂಪ್ರತಂ ಲೋಕೇ ಗುಣವಾನ್ ಕಶ್ಚ ವೀರ್ಯವಾನ್ ।
ಧರ್ಮಜ್ಞಶ್ಚ ಕೃತಜ್ಞಶ್ಚ ಸತ್ಯವಾಕ್ಯೋ ದೃಢವ್ರತಃ ॥ ೨ ॥

ಸೀತಾಪತಿಯಾದ ರಾಮನನ್ನು ನಮಸ್ಕರಿಸಿ ರಾಮಾಯಣವೆಂಬ ಮಹಾಸಾಗರದಿಂದ ಸಾರವನ್ನು ಎಲ್ಲರ ಉಪಯೋಗಕ್ಕೋಸ್ಕರ ಶ್ರೀನಿವಾಸನಾದ ನಾನು ಉದ್ಧರಿಸುತ್ತೇನೆ.

೧ ಯಾವಾಗಲೂ ತಪವನ್ನಾಚರಿಸುವ ವಾಲ್ಮೀಕಿಮುನಿಯು, ತಪಸ್ಸು, ವೇದಾಧ್ಯಯನ, ಇವುಗಳನ್ನು ಬಿಡದೇ ಆಚರಿಸುವವನೂ, ಮಾತುಬಲ್ಲವರಲ್ಲಿ ಉತ್ತಮನೂ, ಮುನಿಗಳಲ್ಲಿ ಮೇಲಾದವನೂ, ಆದ ನಾರದನನ್ನು ವಿನಯದಿಂದ ಕೇಳಿದನು.

೨ ಎಲೈ ಮುನಿಯೇ ! ಈಗ ಈ ಲೋಕದಲ್ಲಿ ಎಲ್ಲಾ ವಿಧವಾದ ಗುಣಗಳಿಂದ ಕೂಡಿದವನು ಯಾರು ? ಪರಾಕ್ರಮಶಾಲಿಯು, ಧರ್ಮಗಳನ್ನರಿತವನೂ, ಕೃತಜ್ಞನೂ, ನಿಜವನ್ನೇ ಆಡುವವನೂ, ಮತ್ತು ವ್ರತಗಳನ್ನು ತಪ್ಪದೆ ನಡೆಸುವವನೂ ಯಾರು ?

ಚಾರಿತ್ರೇಣ ಚ ಕೋ ಯುಕ್ತಃ ಸರ್ವಭೂತೇಷು ಕೋ ಹಿತಃ ।
ವಿದ್ವಾನ್ ಕಃ ಕಃ ಸಮರ್ಥಶ್ಚ ಕಶ್ಚೈಕಪ್ರಿಯದರ್ಶನಃ ॥ ೩ ॥
ಆತ್ಮವಾನ್ ಕೋ ಜಿತಕ್ರೋಧೋ ದ್ಯುತಿಮಾನ್ ಕೋಽನಸೂಯಕಃ ।
ಕಸ್ಯ ಬಿಭ್ಯತಿ ದೇವಾಶ್ಚ ಜಾತರೋಷಸ್ಯ ಸಂಯುಗೇ ॥ ೪ ॥
ಏತದಿಚ್ಛಾಮ್ಯಹಂ ಶ್ರೋತುಂ ಪರಂ ಕೌತೂಹಲಂ ಹಿ ಮೇ ।
ಮಹರ್ಷೇ ತ್ವಂ ಸಮರ್ಥೋಽಸಿ ಜ್ಞಾತುಮೇವಂವಿಧಂ ನರಮ್ ॥
ಶ್ರುತ್ವಾ ಚೈತತ್ತ್ರಿಲೋಕಜ್ಞೋ ವಾಲ್ಮೀಕೇರ್ನಾರದೋ ವಚಃ ।
ಶ್ರೂಯತಾಮಿತಿ ಚಾಮಂತ್ರ್ಯ ಪ್ರಹೃಷ್ಟೋ ವಾಕ್ಯಮಬ್ರವೀತ್ ॥
ಬಹವೋ ದುರ್ಲಭಾಶ್ಚೈವ ಯೇ ತ್ವಯಾ ಕೀರ್ತಿತಾ ಗುಣಾಃ ।

---

೩ ಕುಲಾಚಾರವನ್ನು ಬಿಡದವನು ಯಾರು? ಮತ್ತು ಎಲ್ಲಾ ಪ್ರಾಣಿಗಳಿಗೆ ಹಿತವನ್ನು ಬಯಸುವವನು ಯಾರು? ಬಲ್ಲವನು ಯಾರು? ಸಾಮರ್ಥ್ಯವುಳ್ಳವನು ಯಾರು? ಮತ್ತು ಎಲ್ಲರಿಗೂ ಪ್ರಿಯವಾದ ರೂಪವುಳ್ಳವನು ಯಾರು?

೪ ಧೈರ್ಯವುಳ್ಳವನೂ, ತನ್ನ ಕೋಪವನ್ನು, ತನ್ನಧೀನದಲ್ಲಿ ಇಟ್ಟುಕೊಂಡಿರತಕ್ಕವನೂ ಯಾರು? ಶ್ರೇಷ್ಠವಾದ ಕಾಂತಿಯುಳ್ಳವನೂ, ಅಸೂಯೆ ಇಲ್ಲದವನೂ ಯಾರು? ಯುದ್ಧದಲ್ಲಿ ಯಾವನು ಕೋಪಿಸಿಕೊಂಡರೆ ದೇವತೆಗಳೂ ಹೆದರುವರೋ ಅಂತಹವನು ಯಾರು?

೫ ಇದನ್ನು ಕೇಳಲು ನಾನು ಬಹಳ ಕಾತುರನಾಗಿದ್ದೇನೆ. ಮುನಿಯೇ! ಇಂತಹವನನ್ನು ನೀನೇ ತಿಳಿಯಬಲ್ಲವನು.

೬ ವಾಲ್ಮೀಕಿಯ ಈ ಮಾತನ್ನು ಕೇಳಿ ಮೂರುಲೋಕವನ್ನರಿತ ನಾರದಮುನಿಯು ಬಹಳ ಸಂತೋಷಗೊಂಡವನಾಗಿ ಮುನಿಯೇ! ಕೇಳು ಎಂಬುದಾಗಿ ಹೇಳಲು ತೊಡಗಿದನು.

೭ ಮುನಿಯೇ! ನೀನು ಹೇಳಿದ ಒಳ್ಳೆಯ ಗುಣಗಳೆಲ್ಲವೂ

ಮುನೇ ವಕ್ಷ್ಯಾಮ್ಯಹಂ ಬುದ್ಧ್ವಾ ತೈರ್ಯುಕ್ತಃ ಶ್ರೂಯತಾಂ ನರಃ॥
ಇಕ್ಷ್ವಾಕುವಂಶಪ್ರಭವೋ ರಾಮೋ ನಾಮ ಜನೈಃ ಶ್ರುತಃ।
ನಿಯತಾತ್ಮಾ ಮಹಾವೀರ್ಯೋ ದ್ಯುತಿಮಾನ್ ಧೃತಿಮಾನ್ ವಶೀ ॥೮॥
ಬುದ್ಧಿಮಾನ್ನೀತಿಮಾನ್ವಾಗ್ಮೀ ಶ್ರೀಮಾಞ್ಛತ್ರುನಿಬರ್ಹಣಃ।
ಧರ್ಮಜ್ಞಃ ಸತ್ಯಸಂಧಶ್ಚ ಪ್ರಜಾನಾಂ ಚ ಹಿತೇ ರತಃ ॥೯॥
ಯಶಸ್ವೀ ಜ್ಞಾನಸಂಪನ್ನಃ ಶುಚಿರ್ವಶ್ಯಃ ಸಮಾಧಿಮಾನ್।
ರಕ್ಷಿತಾ ಜೀವಲೋಕಸ್ಯ ಧರ್ಮಸ್ಯ ಪರಿರಕ್ಷಿತಾ ॥೧೦॥
ರಕ್ಷಿತಾ ಸ್ವಸ್ಯ ಧರ್ಮಸ್ಯ ಸ್ವಜನಸ್ಯ ಚ ರಕ್ಷಿತಾ।
ವೇದವೇದಾಙ್ಗತತ್ತ್ವಜ್ಞೋ ಧನುರ್ವೇದೇ ಚ ನಿಷ್ಠಿತಃ ॥೧೧॥

ಒಬ್ಬನಲ್ಲಿ ಕಾಣುವುದು ಕಷ್ಟ. ಆದರೂ ನಾನು ತಿಳಿದು ಹೇಳುವೆನು. ಕೇಳು. ಇಷ್ಟು ಗುಣಗಳಿಂದಲೂ ಕೂಡಿದವನು ಒಬ್ಬನಿರುವನು.

೮ - ೧೫ ಅವನು ಇಕ್ಷ್ವಾಕುವಂಶದಲ್ಲಿ ಹುಟ್ಟಿ ರಾಮನೆಂದು ಜನರಲ್ಲಿ ಪ್ರಸಿದ್ಧಿಹೊಂದಿರುವನು. ವಿಕಾರರಹಿತನು. ಬಹಳ ಪರಾಕ್ರಮಶಾಲಿ. ಮೇಲಾದ ಕಾಂತಿಯುಳ್ಳವನು. ಧೈರ್ಯವುಳ್ಳವನು. ಎಲ್ಲರನ್ನೂ ತನ್ನ ವಶದಲ್ಲಿಟ್ಟುಕೊಂಡು ಆಳುವವನು. ಬುದ್ಧಿವಂತನು. ನೀತಿತಪ್ಪದವನು. ಮಾತು ಬಲ್ಲವನು. ತುಂಬಿದ ಸಂಪತ್ತುಳ್ಳವನು. ಶತ್ರುಗಳನ್ನು ಸಂಹರಿಸುವವನು. ಧರ್ಮವನ್ನು ಅರಿತವನು. ಸತ್ಯವನ್ನು ಬಿಡದವನು. ಪ್ರಜೆಗಳಿಗೆ ಹಿತವನ್ನು ಮಾಡುವುದರಲ್ಲಿ ಆಸಕ್ತಿಯುಳ್ಳವನು. ಕೀರ್ತಿಯನ್ನು ಪಡೆದಿರುವವನು. ಜ್ಞಾನಿಯು. ಶುಚಿಯಾಗಿರುವವನು. ತನ್ನನ್ನು ಆಶ್ರಯಿಸಿದವರಿಗೆ ವಶನಾಗಿ ನಡೆಯುವವನು ಮತ್ತು ಅವರನ್ನು ಕಾಪಾಡುವ ಹಂಬಲಿಕೆಯುಳ್ಳವನು. ಎಲ್ಲಾ ಪ್ರಾಣಿಸಮೂಹಗಳನ್ನು, ಮತ್ತು ವರ್ಣಾಶ್ರಮಧರ್ಮಗಳನ್ನು ಚೆನ್ನಾಗಿ ಕಾಪಾಡುವವನು. ತನ್ನ ಕುಲಾಚಾರವನ್ನು ಮತ್ತು ತನ್ನ ಜನಗಳನ್ನು ರಕ್ಷಿಸುವವನು. ವೇದಗಳ ಮತ್ತು ವೇದಾಂಗಗಳ ತತ್ವವನ್ನು ಅರಿತವನು. ಧನುರ್ವೇದದಲ್ಲಿಯೂ ನೈಪುಣ್ಯವನ್ನು ಪಡೆದವನು. ಎಲ್ಲಾ

ಸರ್ವಶಾಸ್ತ್ರಾರ್ಥತತ್ವಜ್ಞಃ ಸ್ಮೃತಿಮಾನ್ಪ್ರತಿಭಾನವಾನ್ ।
ಸರ್ವಲೋಕಪ್ರಿಯಃ ಸಾಧುರದೀನಾತ್ಮಾ ವಿಚಕ್ಷಣಃ ॥ ೧೨ ॥
ಸರ್ವದಾಽಭಿಗತಃ ಸದ್ಭಿಃ ಸಮುದ್ರ ಇವ ಸಿಂಧುಭಿಃ ।
ಆರ್ಯಃ ಸರ್ವಸಮಶ್ಚೈವ ಸದೈವ ಪ್ರಿಯದರ್ಶನಃ ॥ ೧೩ ॥
ಸ ಚ ಸರ್ವಗುಣೋಪೇತಃ ಕೌಸಲ್ಯಾನಂದವರ್ಧನಃ ।
ಸಮುದ್ರ ಇವ ಗಾಂಭೀರ್ಯೇ ಧೈರ್ಯೇಣ ಹಿಮವಾನಿವ ॥ ೧೪ ॥
ವಿಷ್ಣುನಾ ಸದೃಶೋ ವೀರ್ಯೇ ಸೋಮವತ್ಪ್ರಿಯದರ್ಶನಃ ।
ಕಾಲಾಗ್ನಿಸದೃಶಃ ಕ್ರೋಧೇ ಕ್ಷಮಯಾ ಪೃಥಿವೀಸಮಃ ।
ಧನದೇನ ಸಮಸ್ತ್ಯಾಗೇ ಸತ್ಯೇ ಧರ್ಮ ಇವಾಪರಃ ॥ ೧೫ ॥
ನಾರದಸ್ಯ ತು ತದ್ವಾಕ್ಯಂ ಶ್ರುತ್ವಾ ವಾಕ್ಯವಿಶಾರದಃ ।

ಶಾಸ್ತ್ರಗಳ ಗೂಢಾಭಿಪ್ರಾಯವನ್ನು ಸರಿಯಾಗಿ ತಿಳಿದವನು. ಜ್ಞಾಪಕ ಶಕ್ತಿಯುಳ್ಳವನು. ಹೊಸಹೊಸದಾಗಿ ವಿಷಯಗಳನ್ನು ತೋರಿಸುವ ಬುದ್ಧಿಶಕ್ತಿಯುಳ್ಳವನು. ಎಲ್ಲಾ ಜನರಿಗೂ ಇಷ್ಟನಾದವನು. ಬಹಳ ಯೋಗ್ಯನು. ವಂಶಕ್ಕೆ ತಕ್ಕ ಹೆಮ್ಮೆಯುಳ್ಳವನು. ಬಹಳ ಸಮರ್ಥನು. ನದಿಗಳಿಂದ ಸಮುದ್ರವು ಹೇಗೋ ಹಾಗೆ ಯಾವಾಗಲೂ ಒಳ್ಳೆಯವರಿಂದ ಸುತ್ತುವರಿಯಲ್ಪಟ್ಟವನು. ಎಲ್ಲರಿಂದಲೂ ಗೌರವಿಸಲ್ಪಡತಕ್ಕವನು. ಎಲ್ಲರಲ್ಲಿಯೂ ಸಮವಾದ ಭಾವನೆಯುಳ್ಳವನು. ಯಾವಾಗಲೂ ಮನೋಹರವಾದ ನೋಟವುಳ್ಳವನು. ಗಾಂಭೀರ್ಯದಲ್ಲಿ ಸಮುದ್ರಕ್ಕೂ, ಧೈರ್ಯದಲ್ಲಿ ಹಿಮವಂತನಿಗೂ, ಪರಾಕ್ರಮದಲ್ಲಿ ವಿಷ್ಣುವಿಗೂ, ಮತ್ತು ಸಂತೋಷವನ್ನುಂಟುಮಾಡುವುದರಲ್ಲಿ ಚಂದ್ರನಿಗೂ ಸಮಾನನಾದವನು. ಕೋಪದಲ್ಲಿ ಪ್ರಳಯಕಾಲದ ಬೆಂಕಿಯನ್ನೂ, ಸಹನೆಯಲ್ಲಿ ಭೂಮಿಯನ್ನೂ, ದಾನ ಮಾಡುವುದರಲ್ಲಿ ಕುಬೇರನನ್ನೂ, ಹೋಲುವವನು. ಸತ್ಯದಲ್ಲಿ ಅವನು ಧರ್ಮದೇವತೆಯ ಅವತಾರವೆಂತಲೇ ಹೇಳಬಹುದು.

೧೬ ನಾರದನು ಹೇಳಿದ ಆ ಮಾತನ್ನು ಕೇಳಿ ಮಾತುಬಲ್ಲವನೂ,

ಪೂಜಯಾಮಾಸ ಧರ್ಮಾತ್ಮಾ ಸಹಶಿಷ್ಯೋ ಮಹಾಮುನಿಃ ॥ ೧೬ ॥
ಯಥಾವತ್ಪೂಜಿತಸ್ತೇನ ದೇವರ್ಷಿರ್ನಾರದಸ್ತದಾ ।
ಆಪೃಚ್ಛ್ಯೈವಾಭ್ಯನುಜ್ಞಾತಃ ಸ ಜಗಾಮ ವಿಹಾಯಸಮ್ ॥ ೧೭ ॥
ಸ ಮುಹೂರ್ತಂ ಗತೇ ತಸ್ಮಿನ್ ದೇವಲೋಕಂ ಮುನಿಸ್ತದಾ ।
ಜಗಾಮ ತಮಸಾತೀರಂ ಜಾಹ್ನವ್ಯಾಸ್ತು ವಿದೂರತಃ ॥ ೧೮ ॥
ತಸ್ಯಾಭ್ಯಾಶೇ ತು ಮಿಥುನಂ ಚರನ್ತಮನಪಾಯಿನಮ್ ।
ದದರ್ಶ ಭಗವಾಂಸ್ತತ್ರ ಕ್ರೌಞ್ಚಯೋಶ್ಚಾರುನಿಸ್ವನಮ್ ॥ ೧೯ ॥
ತಸ್ಮಾತ್ತು ಮಿಥುನಾದೇಕಂ ಪುಮಾಂಸಂ ಪಾಪನಿಶ್ಚಯಃ ।
ಜಘಾನ ವೈರನಿಲಯೋ ನಿಷಾದಸ್ತಸ್ಯ ಪಶ್ಯತಃ ॥ ೨೦ ॥

ಧರ್ಮಾತ್ಮನೂ, ಆದ ವಾಲ್ಮೀಕಿಮಹಾಮುನಿಯು ಅದನ್ನು ತನಗೆ ಹೇಳಿದುದಕ್ಕಾಗಿ ಶಿಷ್ಯರೊಡನೆ ಕೂಡಿ ನಾರದನನ್ನುಪೂಜಿಸಿದನು.

೧೭ ಈರೀತಿ ವಿಧಿವತ್ತಾಗಿ ಪೂಜಿಸಲ್ಪಟ್ಟ ದೇವರ್ಷಿಯಾದ ನಾರದನು ಬಳಿಕ ವಾಲ್ಮೀಕಿಯ ಅನುಮತಿಯನ್ನು ಪಡೆದು ದೇವಲೋಕವನ್ನು ಸೇರಿದನು.

೧೮ ಅವನು ದೇವಲೋಕಕ್ಕೆ ಹೊರಟು ಮುಹೂರ್ತಕಾಲ ಕಳೆದ ಬಳಿಕ ವಾಲ್ಮೀಕಿಮುನಿಯೂ ಗಂಗಾನದಿಗೆ ಸ್ವಲ್ಪ ದೂರದಲ್ಲಿರುವ ತಮಸಾನದಿಯ ದಡವನ್ನು ಸೇರಿದನು.

೧೯ ಮಹಿಮಾಸಂಪನ್ನನಾದ ವಾಲ್ಮೀಕಿಯು ಅದರ ಸಮೀಪದಲ್ಲಿ ಒಂದನ್ನು ಬಿಟ್ಟು ಒಂದು ಹಿರಿಯದೇ ಇಂಪಾದ ಧ್ವನಿಯೊಡನೆ ವಿಹರಿಸುತ್ತಿರುವ ಕ್ರೌಂಚಪಕ್ಷಿಗಳ ಮಿಥುನವನ್ನು ನೋಡಿದನು.

೨೦ ಅವನು ಅದನ್ನು ನೋಡುತ್ತಿರುವಹಾಗೆಯೇ ಪಾಪಬುದ್ಧಿಯುಳ್ಳವನೂ, ಎಲ್ಲಾಪ್ರಾಣಿಗಳಲ್ಲಿ ಸಹಜ ದ್ವೇಷವುಳ್ಳವನೂ ಆದ ಬೇಡನೊಬ್ಬನು ಆ ಮಿಥುನದಲ್ಲಿ ಒಂದಾದ ಗಂಡುಹಕ್ಕಿಯನ್ನು ಕೊಂದನು.

ತಂ ಶೋಣಿತಪರೀತಾಙ್ಗಂ ವೇಷ್ಟಮಾನಂ ಮಹೀತಲೇ ।
ಭಾರ್ಯಾ ತು ನಿಹತಂ ದೃಷ್ಟ್ವಾ ರುರಾವ ಕರುಣಾಂ ಗಿರಮ್ ॥
ತಥಾವಿಧಂ ದ್ವಿಜಂ ದೃಷ್ಟ್ವಾ ನಿಷಾದೇನ ನಿಪಾತಿತಮ್ ।
ಋಷೇರ್ಧರ್ಮಾತ್ಮನಸ್ತಸ್ಯ ಕಾರುಣ್ಯಂ ಸಮಪದ್ಯತ ॥ ೧೨ ॥
ತತಃ ಕರುಣವೇದಿತ್ವಾದಧರ್ಮೋಽಯಮಿತಿ ದ್ವಿಜಃ ।
ನಿಶಾಮ್ಯ ರುದತೀಂ ಕ್ರೌಂಚೀಮಿದಂ ವಚನಮಬ್ರವೀತ್ ॥ ೧೩ ॥
ಮಾ ನಿಷಾದ ಪ್ರತಿಷ್ಠಾಂ ತ್ವಮಗಮಃ ಶಾಶ್ವತೀಃ ಸಮಾಃ ।
ಯತ್ಕ್ರೌಞ್ಚಮಿಥುನಾದೇಕಮವಧೀಃ ಕಾಮಮೋಹಿತಮ್ ॥ ೧೪ ॥
ತಸ್ಯೈವಂ ಬ್ರುವತಶ್ಚಿಂತಾ ಬಭೂವ ಹೃದಿ ವೀಕ್ಷತಃ ।

---

೧೧ ಬೇಡನಿಂದ ಹೊಡೆಯಲ್ಪಟ್ಟಿದ್ದರಿಂದ ದೇಹವೆಲ್ಲಾ ರಕ್ತದಿಂದ ನೆನೆಸಲ್ಪಟ್ಟು ನೆಲದಮೇಲೆ ಬಿದ್ದು ಒದ್ದಾಡುತ್ತಿರುವ ಅದನ್ನು ನೋಡಿ ಹೆಣ್ಣುಹಕ್ಕಿಯು ಪರಿತಾಪಕರವಾಗಿ ಅರಿಚಿತು.

೧೨ ಬೇಡನಿಂದ ಕೊಲ್ಲಲ್ಪಟ್ಟು ಆ ಅವಸ್ಥೆಯನ್ನು ಹೊಂದಿದ ಪಕ್ಷಿಯನ್ನು ಕಂಡು ಧರ್ಮಾತ್ಮನಾದ ವಾಲ್ಮೀಕಿಮಹರ್ಷಿಗೆ ಕರುಣೆಯು ಉಂಟಾಯಿತು.

೧೩ ಬಳಿಕ ಆ ಬ್ರಾಹ್ಮಣ ಮುನಿಯು ಅಳುತ್ತಿರುವ ಹೆಣ್ಣುಹಕ್ಕಿಯನ್ನು ನೋಡಿ, ಕರುಣೆಯುಂಟಾದ ಕಾರಣದಿಂದ, ಬೇಡನು ಮಾಡಿದ್ದನ್ನು ಅನ್ಯಾಯವಾದ ಕಾರ್ಯವೆಂದು ಭಾವಿಸಿ ಈರೀತಿ ಹೇಳಿದನು.

೧೪ ಎಲೈ ಬೇಡನೆ! ಕಾಮದಿಂದ ಮೈಮರತಿದ್ದ ಕ್ರೌಞ್ಚಮಿಥುನ ಪಕ್ಷಿ ಒಂದನ್ನು ಅನ್ಯಾಯವಾಗಿ ಕೊಂದೆಯಾದುದರಿಂದ ನಿನಗೆ ಯಾವಾಗಲೂ ಒಳ್ಳೆಯ ಗತಿಯಿಲ್ಲದೇ ಹೋಗಲಿ.

೧೫ ಮಿಥುನವನ್ನು ನೋಡುತ್ತಾ ಈ ರೀತಿ ಹೇಳಿದ ಆ ಮುನಿಯು ಹೃದಯದಲ್ಲಿ "ಈ ಪಕ್ಷಿಯ ದುಃಖದಿಂದ ಪೀಡಿತನಾದ ನಾನು ಏನನ್ನು

ಶೋಕಾರ್ತೇನಾಸ್ಯ ಶಕುನೇಃ ಕಿಮಿದಂ ವ್ಯಾಹೃತಂ ಮಯಾ ॥ ೨೫ ॥

ಚಿನ್ತಯನ್ಸ ಮಹಾಪ್ರಾಜ್ಞಶ್ಚಕಾರ ಮತಿಮಾನ್ಮತಿಮ್ ।
ಶಿಷ್ಯಂ ಚೈವಾಬ್ರವೀದ್ವಾಕ್ಯಮಿದಂ ಸ ಮುನಿಪುಙ್ಗವಃ ॥ ೨೬ ॥

ಪಾದಬದ್ಧೋಽಕ್ಷರಸಮಸ್ತನ್ತ್ರೀಲಯಸಮನ್ವಿತಃ ।
ಶೋಕಾರ್ತಸ್ಯ ಪ್ರವೃತ್ತೋ ಮೇ ಶ್ಲೋಕೋ ಭವತು ನಾನ್ಯಥಾ ॥

ಶಿಷ್ಯಸ್ತು ತಸ್ಯ ಬ್ರುವತೋ ಮುನೇರ್ವಾಕ್ಯಮನುತ್ತಮಮ್ ।
ಪ್ರತಿಜಗ್ರಾಹ ಸಂಹೃಷ್ಟಸ್ತಸ್ಯ ತುಷ್ಟೋಽಭವದ್ಗುರುಃ ॥ ೨೮ ॥

ಸೋಽಭಿಷೇಕಂ ತತಃ ಕೃತ್ವಾ ತೀರ್ಥೇ ತಸ್ಮಿನ್ಯಥಾವಿಧಿ ।
ತಮೇವ ಚಿನ್ತಯನ್ನರ್ಥಮುಪಾವರ್ತತ ವೈ ಮುನಿಃ ॥ ೨೯ ॥

ಆಡಿಬಿಟ್ಟೆ" ಎಂಬ ಚಿಂತೆಯು ಹುಟ್ಟಿತು.

೨೬ ಊಹಾಪೋಹಕುಶಲನೂ, ಶಾಸ್ತ್ರಜ್ಞಾನವುಳ್ಳವನೂ ಆದ ಆ ಮುನಿಶ್ರೇಷ್ಠನು, ತಾನು ಹೇಳಿದ ಮಾತುಗಳನ್ನು ಪರಿಶೋಧಿಸಿ ನಿಶ್ಚಯ ಮಾಡಿದನು. ಮತ್ತು ಶಿಷ್ಯನನ್ನು ಕುರಿತು ಇಂತೆಂದನು.

೨೭ ದುಃಖಪೀಡಿತನಾದ ನನ್ನಿಂದ ಹೊರಟ ಮಾತು, ಸಮವಾದ ಅಕ್ಷರಗಳೊಡನೆ ಕೂಡಿ, ನಾಲ್ಕು ಪಾದಗಳಿಂದ ಹೊಂದಿಕೊಂಡು, ವೀಣೆಯ ತಂತಿಯಲ್ಲಿ ವಾದ್ಯಗಳೊಡನೆ ನುಡಿಸಲು ಯೋಗ್ಯವಾದ ಒಂದು ಹಾಡಿನಂತಿರುವುದರಿಂದ, ಇದು ಒಂದು ಹಾಡಾಗಿಯೇ ಇರಲಿ.

೨೮ ಈರೀತಿ ಮುನಿಯು ಹೇಳಲು, ಶಿಷ್ಯನು ಅತ್ಯುತ್ತಮವಾದ ಆ ಶ್ಲೋಕವನ್ನು ಬಹಳ ಸಂತೋಷದಿಂದ ಪಾಠಮಾಡಿದನು. ಅದರಿಂದ ಗುರುವು ಅವನ ವಿಷಯದಲ್ಲಿ ಸಂತೋಷಗೊಂಡನು.

ಬಳಿಕ ಅವನು ಆ ತಮಸಾತೀರ್ಥದಲ್ಲಿ ವಿಧಿವತ್ತಾಗಿ ಮಾಧ್ಯಾಹ್ನಿಕ ಸ್ನಾನವನ್ನುಮಾಡಿ, ಆ ವಿಷಯವನ್ನೇ ಕುರಿತು ಆಲೋಚಿಸುತ್ತಾ ತನ್ನ ಆಶ್ರಮಕ್ಕೆ ಹಿಂತಿರುಗಿದನು.

ಸ ಪ್ರವಿಶ್ಯಾಶ್ರಮಪದಂ ಶಿಷ್ಯೇಣ ಸಹ ಧರ್ಮವಿತ್ ।
ಉಪವಿಷ್ಟಃ ಕಥಾಶ್ಚಾನ್ಯಾಶ್ಚಕಾರ ಧ್ಯಾನಮಾಸ್ಥಿತಃ ॥ ೩೦ ॥
ಆಜಗಾಮ ತತೋ ಬ್ರಹ್ಮಾ ಲೋಕಕರ್ತಾ ಸ್ವಯಂ ಪ್ರಭುಃ ।
ಚತುರ್ಮುಖೋ ಮಹಾತೇಜಾ ದ್ರಷ್ಟುಂ ತಂ ಮುನಿಪುಂಗವಮ್ ॥
ವಾಲ್ಮೀಕಿರಥ ತಂ ದೃಷ್ಟ್ವಾ ಸಹಸೋತ್ಥಾಯ ವಾಗ್ಯತಃ ।
ಪ್ರಾಞ್ಜಲಿಃ ಪ್ರಯತೋ ಭೂತ್ವಾ ತಸ್ಥೌ ಪರಮವಿಸ್ಮಿತಃ ॥ ೩೨ ॥
ಪೂಜಯಾಮಾಸ ತಂ ದೇವಂ ಪಾದ್ಯಾರ್ಘ್ಯಾಸನವನ್ದನೈಃ ।
ಪ್ರಣಮ್ಯ ವಿಧಿವಚ್ಚೈನಂ ಪೃಷ್ಟ್ವಾನಾಮಯಮವ್ಯಯಮ್ ॥ ೩೩ ॥
ಶೋಚನ್ನೇವ ಮುಹುಃ ಕ್ರೌಂಚೀಮುಪಶ್ಲೋಕಮಿಮಂ ಪುನಃ ।

---

೩೦ ಶಿಷ್ಯನೊಡನೆ ಆಶ್ರಮವನ್ನು ಪ್ರವೇಶಿಸಿ ದೇವರ ಪೂಜೆ ಮೊದಲಾದ ಧರ್ಮಗಳನ್ನು ನಡೆಸಿದ, ಆ ಮುನಿಯು ಸುಖವಾಗಿ ಒಂದೆಡೆಯಲ್ಲಿ ಕುಳಿತು ಆ ಶ್ಲೋಕವಿಷಯವಾದ ಚಿಂತೆಯಿಂದ ಕೂಡಿದವನಾಗಿಯೇ ಪುರಾಣಕಥೆಗಳನ್ನು ನಡೆಸಿದನು.

೧೩ ಆ ಸಮಯದಲ್ಲಿ, ಲೋಕಗಳನ್ನು ಸೃಷ್ಟಿಮಾಡುವವನೂ ಸ್ವಾಮಿಯೂ, ನಾಲ್ಕು ಮುಖವುಳ್ಳವನೂ, ಮಹಾತೇಜಸ್ವಿಯೂ ಆದ ಬ್ರಹ್ಮದೇವನು ಮುನಿಶ್ರೇಷ್ಠನಾದ ವಾಲ್ಮೀಕಿಯನ್ನು ನೋಡಲು ತಾನಾಗಿಯೇ ಅಲ್ಲಿಗೆ ಬಂದನು.

೩೨ ಬಳಿಕ ವಾಲ್ಮೀಕಿಯು ಬ್ರಹ್ಮದೇವನನ್ನು ಕಂಡು ಕೂಡಲೇ ಎದ್ದು ಮಾತನ್ನು ತಡೆದು, ಮನಸ್ಸನ್ನಡಗಿಸಿ, ಕೈ ಜೋಡಿಸಿಕೊಂಡು ಪರಮಾಶ್ಚರ್ಯಭರಿತನಾಗಿ ನಿಂತನು.

೩೩ ಬಳಿಕ ಅವನು ಬ್ರಹ್ಮನನ್ನು ವಿಧಿವತ್ತಾಗಿ ನಮಸ್ಕರಿಸಿ, ಯೋಗಕ್ಷೇಮವನ್ನು ವಿಚಾರಿಸಿ, ಪಾದ್ಯ, ಅರ್ಘ್ಯ, ಆಸನ, ಸ್ತುತಿ, ಮುಂತಾದ ಉಪಚಾರಗಳಿಂದ ಪೂಜಿಸಿದನು.

೩೪ ಕ್ರೌಂಚಪಕ್ಷಿಯ ಕೊಲೆಯನ್ನು ನೋಡಿದುದರಿಂದುಂಟಾದ

ಜಗಾವಂತರ್ಗತಮನಾ ಭೂತ್ವಾ ಶೋಕಪರಾಯಣಃ ॥ ೩೪ ॥
ತಮುವಾಚ ತತೋ ಬ್ರಹ್ಮಾ ಪ್ರಹಸ್ಯ ಮುನಿಪುಂಗವಮ್ ।
ಶ್ಲೋಕ ಏವ ತ್ವಯಾ·ಬದ್ಧೋ ನಾತ್ರ ಕಾರ್ಯಾ ವಿಚಾರಣಾ ॥ ೩೫ ॥
ಮಚ್ಛಂದಾದೇವ ತೇ ಬ್ರಹ್ಮನ್! ಪ್ರವೃತ್ತೇಯಂ ಸರಸ್ವತೀ ।
ರಾಮಸ್ಯ ಚರಿತಂ ಕೃತ್ಸ್ನಂ ಕುರು ತ್ವಮೃಷಿಸತ್ತಮ ।
ಧರ್ಮಾತ್ಮನೋ ಗುಣವತೋ ಲೋಕೇ ರಾಮಸ್ಯ ಧೀಮತಃ॥ ೩೬ ॥
ರಹಸ್ಯಂ ಚ ಪ್ರಕಾಶಂ ಚ ಯದ್ವೃತ್ತಂ ತಸ್ಯ ಧೀಮತಃ ।
ರಾಮಸ್ಯ ಸಹಸೌಮಿತ್ರೇ ರಾಕ್ಷಸಾನಾಂ ಚ ಸರ್ವಶಃ ॥ ೩೭ ॥
ವೈದೇಹ್ಯಾಶ್ಚಾಪಿ ಯದ್ವೃತ್ತಂ ಪ್ರಕಾಶಂ ಯದಿ ವಾ ರಹಃ ।

ದುಃಖದಲ್ಲಿ ಮುಳುಗಿದವನಾಗಿ ಮತ್ತೆ ಆ ಹೆಣ್ಣುಹಕ್ಕಿಯನ್ನು ಕುರಿತು ದುಃಖಿಸುತ್ತಲೇ "ಮಾ ನಿಷಾದ" ಎಂಬ ಪದ್ಯವನ್ನು ಅಡಿಗಡಿಗೆ ಮನಸ್ಸಿನಲ್ಲಿ ಅಂದುಕೊಂಡನು.

೩೫.೩೬ ಬಳಿಕ ಬ್ರಹ್ಮದೇವನು ಆರೀತಿ ಶೋಕಿಸುತ್ತಿರುವ ಮುನಿಶ್ರೇಷ್ಠನನ್ನು ಕುರಿತು ನಗುತ್ತಾ ಹೇಳಿದನು. "ಅಯ್ಯಾ! ಬ್ರಹ್ಮಜ್ಞಾನಿಯೇ! ನೀನು ಮಾಡಿರುವುದು ಮಂಗಳಕರವಾದ ಪದ್ಯವೇ ಆಗಿದೆ. ಈ ವಿಷಯದಲ್ಲಿ ಚಿಂತೆ ಮಾಡಬೇಕಾದುದಿಲ್ಲ. ನನ್ನ ಅಭಿಪ್ರಾಯದಿಂದಲೇ ಈ ವಾಣಿಯು ನಿನ್ನಿಂದ ಹೊರಟಿರುತ್ತದೆ. ಆದುದರಿಂದ ಮುನಿಶ್ರೇಷ್ಠನೇ! ಧಾರ್ಮಿಕನೂ ಎಲ್ಲಾ ಗುಣಗಳಿಂದ ತುಂಬಿದವನೂ ಲೋಕದಲ್ಲಿ ಸಂತೋಷವನ್ನುಂಟುಮಾಡುವವನೂ, ಬುದ್ಧಿವಂತನೂ ಆದ ರಾಮನ ಸಂಪೂರ್ಣ ಚರಿತ್ರೆಯನ್ನು ರಚಿಸುವವನಾಗು.

೩೭.೩೮ ಯಾವಾಗಲೂ ಲಕ್ಷ್ಮಣನ ಜೊತೆಯಲ್ಲಿರುವ, ಮೇಧಾವಿಯಾದ ರಾಮನ, ರಾಕ್ಷಸರ, ಮತ್ತು ಸೀತೆ ಮುಂತಾದವರ, ಎಲ್ಲರಿಂದ ತಿಳಿಯಲ್ಪಟ್ಟಿರುವದೂ, ಯಾರಿಂದಲೂ ತಿಳಿಯಲ್ಪಡದಿರುವದೂ ಆದ ಯಾವ ಯಾವ ಕಾರ್ಯಗಳುಂಟೋ ಅವೆಲ್ಲವೂ ಇದುವರೆವಿಗೂ ನಿನಗೆ

ಯಚ್ಚಾಪ್ಯವಿದಿತಂ ಸರ್ವಂ ವಿದಿತಂ ತೇ ಭವಿಷ್ಯತಿ ॥೩೮॥
ನ ತೇ ವಾಗನೃತಾ ಕಾವ್ಯೇ ಕಾಚಿದತ್ರ ಭವಿಷ್ಯತಿ ।
ಕುರು ರಾಮಕಥಾಂ ಪುಣ್ಯಾಂ ಶ್ಲೋಕಬದ್ಧಾಂ ಮನೋರಮಾಮ್
ಯಾವತ್ಸ್ಥಾಸ್ಯಂತಿ ಗಿರಯಃ ಸರಿತಶ್ಚ ಮಹೀತಲೇ ।
ತಾವದ್ರಾಮಾಯಣಕಥಾ ಲೋಕೇಷು ಪ್ರಚರಿಷ್ಯತಿ ॥೪೦॥
ಇತ್ಯುಕ್ತ್ವಾ ಭಗವಾನ್ ಬ್ರಹ್ಮಾ ತತ್ರೈವಾಂತರಧೀಯತ ॥೪೧॥
ಉಪಸ್ಪೃಶ್ಯೋದಕಂ ಸಮ್ಯಙ್ಮುನಿಃ ಸ್ಥಿತ್ವಾ ಕೃತಾಂಜಲಿಃ ।
ಪ್ರಾಚೀನಾಗ್ರೇಷು ದರ್ಭೇಷು ಧರ್ಮೇಣಾವೇಕ್ಷತೇ ಗತಿಮ್॥೪೨॥
ತತಃ ಪಶ್ಯತಿ ಧರ್ಮಾತ್ಮಾ ತತ್ಸರ್ವಂ ಯೋಗಮಾಸ್ಥಿತಃ ।

ತಿಳಿಯದಿದ್ದರೂ ಇನ್ನು ನಡೆದುದು ನಡೆದ ಹಾಗೆ ತಿಳಿದುಬರುತ್ತವೆ.

೩೯ ನೀನು ರಚಿಸುವ ಕಾವ್ಯದಲ್ಲಿ ಯಾವದೊಂದು ಮಾತೂ ಸುಳ್ಳಾಗಿರುವುದಿಲ್ಲ. ಕೇಳುವವರ ಮನಸ್ಸಿಗಾನಂದವನ್ನುಂಟುಮಾಡುವ ಮತ್ತು ಸಕಲ ಪಾಪಗಳನ್ನು ಹೋಗಲಾಡಿಸುವ ರಾಮನ ಕಥೆಯನ್ನು ಹಾಡಲು ಯೋಗ್ಯವಾದ ರೀತಿಯಲ್ಲಿ ಮಾಡುವವನಾಗು.

೪೦.೪೧ ಭೂಲೋಕದಲ್ಲಿ ಪರ್ವತಗಳೂ, ನದಿಗಳೂ ಇರುವವರೆಗೂ ನೀನು ರಚಿಸುವ ರಾಮಾಯಣಕಥೆಯು ಏಳು ಲೋಕಗಳಲ್ಲಿ ಹರಡಿ ನಿಲ್ಲುವುದು." ಎಂದು ಹೇಳಿ ಪೂಜ್ಯನಾದ ಬ್ರಹ್ಮದೇವನು ಕೂತಲ್ಲಿಯೇ ಕಣ್ಮರೆಯಾದನು.

೪೨ ಅನಂತರ ವಾಲ್ಮೀಕಿಮುನಿಯು ಶಾಸ್ತ್ರೀಯವಾಗಿ ಆಚಮನ ಮಾಡಿ ಕೈಜೋಡಿಸಿ ಪೂರ್ವಾಭಿಮುಖವಾಗಿ ಹಾಸಿದ ದರ್ಭೆಯಲ್ಲಿ ಕುಳಿತು ಯೋಗಬಲದಿಂದ ರಾಮಾದಿಗಳ ಚರಿತ್ರೆಯನ್ನಾಲೋಚಿಸ ತೊಡಗಿದನು.

೪೩ ಬಳಿಕ ಧರ್ಮಾತ್ಮನಾದ ಮುನಿಯು ಯೋಗನಿಷ್ಠೆಯನ್ನು ಹೊಂದಿ ಹಿಂದೆ ನಡೆದ ವಿಷಯಗಳೆಲ್ಲವನ್ನೂ ಅಂಗೈಯ್ಯಲ್ಲಿರುವ ನೆಲ್ಲೀಕಾ

ಪುರಾ ಯತ್ತತ್ರ ನಿರ್ವೃತ್ತಂ ಪಾಣಾವಾಮಲಕಂ ಯಥಾ ॥ ೪೩ ॥
ತತ್ಸರ್ವಂ ತತ್ವತೋ ದೃಷ್ಟ್ವಾ ಧರ್ಮೇಣ ಸ ಮಹಾದ್ಯುತಿಃ ।
ಅಭಿರಾಮಸ್ಯ ರಾಮಸ್ಯ ಚರಿತಂ ಕರ್ತುಮುದ್ಯತಃ ॥ ೪೪ ॥
ಕಾಮಾರ್ಥಗುಣಸಂಯುಕ್ತಂ ಧರ್ಮಾರ್ಥಗುಣವಿಸ್ತರಮ್ ।
ಸಮುದ್ರಮಿವ ರತ್ನಾಢ್ಯಂ ಸರ್ವಶ್ರುತಿಮನೋಹರಮ್ ॥ ೪೫ ॥
ಪ್ರಾಪ್ತರಾಜ್ಯಸ್ಯ ರಾಮಸ್ಯ ವಾಲ್ಮೀಕಿರ್ಭಗವಾನೃಷಿಃ ।
ಚಕಾರ ಚರಿತಂ ಕೃತ್ಸ್ನಂ ವಿಚಿತ್ರಪದಮಾತ್ಮವಾನ್ ॥ ೪೬ ॥
ಕೃತ್ವಾಪಿ ತನ್ಮಹಾಪ್ರಾಜ್ಞಃ ಸಭವಿಷ್ಯಂ ಸಹೋತ್ತರಮ್ ।

ಯನ್ನು ಕಾಣುವ ಹಾಗೆ ಕಂಡನು.

೪೪.೪೫ ರಾಮನ ಗುಣಾನುಭವದಿಂದುಂಟಾದ ಸಂತೋಷದಿಂದ ಕಳೆ ಹೊಂದಿದ ಮುನಿಯು ಯೋಗಬಲದಿಂದ ಅವೆಲ್ಲವನ್ನೂ ಯಥಾವತ್ತಾಗಿ ಅರಿತು ಎಲ್ಲರ ಮನಸ್ಸನ್ನು ಸೆಳೆಯುವ, ಕಾಮ ಮತ್ತು ಅರ್ಥವನ್ನು ತಿಳಿಸುವ, ಧರ್ಮ ಮತ್ತು ಮೋಕ್ಷಗಳ ಮಹತ್ವವನ್ನು ಪ್ರಕಾಶಪಡಿಸುವ, ಸಮುದ್ರವು ರತ್ನಗಳಿಂದ ತುಂಬಿರುವ ಹಾಗೆ ಅನೇಕ ಉತ್ತಮ ವಿಷಯಗಳಿಂದ ತುಂಬಿರುವ ಮತ್ತು ಎಲ್ಲರ ಕಿವಿಗಳಿಗೂ ಇಂಪಾಗಿರುವ ರಾಮನ ಚರಿತ್ರೆಯನ್ನು ರಚಿಸಲಾರಂಭಿಸಿದನು.

೪೬ ಬ್ರಹ್ಮನ ಅನುಗ್ರಹದಿಂದ ದಿವ್ಯಜ್ಞಾನವನ್ನು ಪಡೆದಿರುವವನೂ, ದೃಢಪ್ರಯತ್ನವುಳ್ಳವನೂ, ಋಷಿಯೂ ಆದ ವಾಲ್ಮೀಕಿಯು ರಾಮನು ರಾಜ್ಯವನ್ನು ಹೊಂದಿರುವಾಗ ಅತ್ಯಾಶ್ಚರ್ಯಕರವಾದ ಪದಗಳಿಂದ ಕೂಡಿದ ರಾಮನ ಸಂಪೂರ್ಣ ಚರಿತ್ರೆಯನ್ನೊಳಗೊಂಡ ರಾಮಾಯಣಕಾವ್ಯವನ್ನು ರಚಿಸಿದನು.

೪೭ ಅತಿಶಯವಾದ ಜ್ಞಾನವುಳ್ಳ ವಾಲ್ಮೀಕಿಯು ಪಟ್ಟಾಭಿಷೇಕವಾದ ನಂತರ ನಡೆದ ವೃತ್ತಾಂತಗಳಿಂದಲೂ, ಅಶ್ವಮೇಧವಾದ ಬಳಿಕ ಸಂಭವಿಸಿದ ಸಮಾಚಾರಗಳಿಂದಲೂ ಕೂಡಿದ ಆ ಕಾವ್ಯವನ್ನು ರಚಿಸಿದವನಾಗಿ

ಚಿಂತಯಾಮಾಸ ಕೋನ್ವೇತತ್ಪ್ರಯುಂಜೀಯಾದಿತಿ ಪ್ರಭುಃ ॥ ೪೭ ॥
ತಸ್ಯ ಚಿಂತಯಮಾನಸ್ಯ ಮಹರ್ಷೇರ್ಭಾವಿತಾತ್ಮನಃ ।
ಅಗೃಹ್ಣೀತಾಂ ತತಃ ಪಾದೌ ಮುನಿವೇಷೌ ಕುಶೀಲವೌ ॥ ೪೮ ॥
ಕುಶೀಲವೌ ತು ಧರ್ಮಜ್ಞೌ ರಾಜಪುತ್ರೌ ಯಶಸ್ವಿನೌ ।
ಭ್ರಾತರೌ ಸ್ವರಸಂಪನ್ನೌ ದದರ್ಶಾಶ್ರಮವಾಸಿನೌ ॥ ೪೯ ॥
ಸ ತು ಮೇಧಾವಿನೌ ದೃಷ್ಟ್ವಾ ವೇದೇಷು ಪರಿನಿಷ್ಠಿತೌ ।
ವೇದೋಪಬೃಂಹಣಾರ್ಥಾಯ ತಾವಗ್ರಾಹಯತ ಪ್ರಭುಃ ॥ ೫೦ ॥
ಕಾವ್ಯಂ ರಾಮಾಯಣಂ ಕೃತ್ಸ್ನಂ ಸೀತಾಯಾಶ್ಚರಿತಂ ಮಹತ್ ।
ಪೌಲಸ್ತ್ಯವಧಮಿತ್ಯೇವ ಚಕಾರ ಚರಿತವ್ರತಃ ॥ ೫೧ ॥

"ಇಂತಹ ಈ ಕಾವ್ಯವನ್ನು ಪಾಠಮಾಡಬಲ್ಲ ಸಮರ್ಥನಾವನಿರುವನು? ಎಂದು ಆಲೋಚಿಸಿದನು.

೪೮ ಮಹರ್ಷಿಯು ಭಗವಂತನಲ್ಲಿ ಮನಸ್ಸಿಟ್ಟು ಹೀಗೆ ಆಲೋಚಿಸುತ್ತಿರಲು ತಪಸ್ವಿವೇಷವನ್ನು ಧರಿಸಿದ ಕುಶಲವರು ಬಂದು ಮುನಿಯ ಕಾಲುಗಳನ್ನು ಹಿಡಿದರು. (ನಮಸ್ಕರಿಸಿದರು.)

೪೯ ರಾಜಪುತ್ರರೂ, ಧರ್ಮವನ್ನರಿತವರೂ, ಕೀರ್ತಿಯನ್ನು ಪಡೆದಿರುವವರೂ, ಹಾಡಲು ಯೋಗ್ಯವಾದ ಶಾರೀರವುಳ್ಳವರೂ, ಆಶ್ರಮಗಳಲ್ಲಿಯೇ ವಾಸಮಾಡಿಕೊಂಡಿರುವವರೂ, ಸಹೋದರರೂ ಆದ ಆ ಕುಶಲವರನ್ನು ರಾಮಾಯಣ ಪಾಠಮಾಡಲು ತಕ್ಕವರೆಂದು ಮುನಿಯು ಭಾವಿಸಿದನು.

೫೦.೫೧ ರಾಮೋಪಾಸನೆಯನ್ನು ಮಾಡಿದ ಮುನಿಯು ಸೀತೆಯ ಚರಿತ್ರೆಯೆಂದೂ, ರಾವಣನ ವಧವೆಂದೂ ಹೇಳುವ, ತಾನು ರಚಿಸಿದ ರಾಮಾಯಣವೆಂಬ ಮಹಾಕಾವ್ಯವನ್ನು, ವಿಷಯಗಳನ್ನು ಸುಲಭವಾಗಿ ತಿಳಿಯುವ ಬುದ್ಧಿಶಕ್ತಿಯುಳ್ಳ ಮತ್ತು ಅಂಗಗಳೊಂದಿಗೆ ನಾಲ್ಕು ವೇದಗಳನ್ನು ಚೆನ್ನಾಗಿ ಬಲ್ಲ ಅವರಿಗೆ ವೇದಗಳ ಅರ್ಥವನ್ನು ಸರಿಯಾಗಿ ತಿಳಿಯುವುದಕ್ಕೋಸ್ಕರ ಹೇಳಿಕೊಟ್ಟನು.

ತೌ ತು ಗಾಂಧರ್ವತತ್ತ್ವಜ್ಞೌ ಮೂರ್ಛನಾಸ್ಥಾನಕೋವಿದೌ ।
ಭ್ರಾತರೌ ಸ್ವರಸಂಪನ್ನಾವಶ್ವಿನಾವಿವ ರೂಪಿಣೌ ॥ ೫೨ ॥
ರೂಪಲಕ್ಷಣಸಂಪನ್ನೌ ಮಧುರಸ್ವರಭಾಷಿಣೌ ।
ಬಿಂಬಾದಿವೋದ್ಧಿತೌ ಬಿಂಬೌ ರಾಮದೇಹಾತ್ತಥಾಪರೌ ॥ ೫೩ ॥
ತೌ ರಾಜಪುತ್ರೌ ಕಾರ್ತ್ಸ್ನ್ಯೇನ ಧರ್ಮ್ಯಮಾಖ್ಯಾನಮುತ್ತಮಮ್ ।
ವಾಚೋ ವಿಧೇಯಂ ತತ್ಸರ್ವಂ ಕೃತ್ವಾ ಕಾವ್ಯಮನಿಂದಿತೌ ॥ ೫೪ ॥
ಋಷೀಣಾಂ ಚ ದ್ವಿಜಾತೀನಾಂ ಸಾಧೂನಾಂ ಚ ಸಮಾಗಮೇ ।
ಯಥೋಪದೇಶಂ ತತ್ತ್ವಜ್ಞೌ ಜಗತುಸ್ತೌ ಸಮಾಹಿತೌ ॥ ೫೫ ॥
ತಚ್ಛ್ರುತ್ವಾ ಮುನಯಃ ಸರ್ವೇ ಬಾಷ್ಪಪರ್ಯಾಕುಲೇಕ್ಷಣಾಃ ।
ಸಾಧು ಸಾಧ್ವಿತಿ ತಾವೂಚುಃ ಪರಂ ವಿಸ್ಮಯಮಾಗತಾಃ ॥ ೫೬ ॥

೪೨-೫೫ ಸಂಗೀತಶಾಸ್ತ್ರತತ್ವವನ್ನರಿತವರೂ, ಮಂದ್ರ, ಮಧ್ಯ, ತಾರ ಎಂದು ಹೇಳುವ ಸ್ಥಾನಗಳನ್ನು ತಿಳಿದವರೂ, ಜೊತೆಯಲ್ಲಿ ಹುಟ್ಟಿದವರೂ ಶುದ್ಧವಾದ ಸ್ವರಜ್ಞಾನವುಳ್ಳವರೂ, ಅಶ್ವಿನೀದೇವತೆಗಳಂತೆ ಮನೋಹರವಾದ ರೂಪವುಳ್ಳವರೂ, ಅಭಿನಯಲಕ್ಷಣವನ್ನು ಬಲ್ಲವರೂ, ಇಂಪಾಗಿ ಮಾತ ನಾಡುವವರೂ, ರಾಮನ ದೇಹದಿಂದುಂಟಾದ ಪ್ರತಿಬಿಂಬಗಳಂತೆ ಇರು ವವರೂ ಆದ ಆ ರಾಜಕುಮಾರರಿಬ್ಬರೂ ಧರ್ಮವಿಷಯಗಳಿಂದ ತುಂಬಿದ ಮತ್ತು ಹಿಂದಿನವರ ಚರಿತ್ರೆಯನ್ನು ತಿಳಿಯಪಡಿಸುವ ಆ ರಾಮಾಯಣ ಕಾವ್ಯವೆಲ್ಲವನ್ನು ಕಂಠಪಾಠಮಾಡಿ ಮುನಿಗಳ, ಬ್ರಾಹ್ಮಣರ, ಮತ್ತು ಸಾಧುಗಳ ಸಭೆಯಲ್ಲಿ ಉಪದೇಶವನ್ನು ಹೊಂದಿದ ಹಾಗೆಯೇ ಸಾವಧಾನವಾಗಿಹಾಡಲು ತೊಡಗಿದರು.

೫೬ ಅದನ್ನು ಕೇಳಿ ಎಲ್ಲಾ ಮುನಿಗಳೂ ಕಣ್ಣುಗಳಲ್ಲಿ ಆನಂದ ಬಾಷ್ಪವು ಹರಿಯುತ್ತಿರಲು ಬಹಳ ಆಶ್ಚರ್ಯಗೊಂಡವರಾಗಿ ಸಾಧು ಸಾಧು ಎಂದು ಅವರನ್ನು ಹೊಗಳಿದರು.

ಅಹೋ ಗೀತಸ್ಯ ಮಾಧುರ್ಯಂ ಶ್ಲೋಕಾನಾಂ ಚ ವಿಶೇಷತಃ ।
ಚಿರನಿರ್ವೃತ್ತಮಪ್ಯೇತತ್ಪ್ರತ್ಯಕ್ಷಮಿವ ದರ್ಶಿತಮ್ ॥ ೫೭ ॥
ಏವಂ ಪ್ರಶಸ್ಯಮಾನೌ ತೌ ತಪಶ್ಲಾಘ್ಯೈರ್ಮಹಾತ್ಮಭಿಃ ।
ಸಂರಕ್ತತರಮತ್ಯರ್ಥಂ ಮಧುರಂ ತಾವಗಾಯತಾಮ್ ॥ ೫೮ ॥
ಪ್ರಶಸ್ಯಮಾನೌ ಸರ್ವತ್ರ ಕದಾಚಿತ್ತತ್ರ ಗಾಯಕೌ ।
ರಥ್ಯಾಸು ರಾಜಮಾರ್ಗೇಷು ದದರ್ಶ ಭರತಾಗ್ರಜಃ ॥ ೫೯ ॥
ಸ್ವವೇಶ್ಮ ಚಾನೀಯ ತತೋ ಭ್ರಾತರೌ ಚ ಕುಶೀಲವೌ ।
ಪೂಜಯಾಮಾಸ ಪೂಜಾರ್ಹೌ ರಾಮಃ ಶತ್ರುನಿಬರ್ಹಣಃ ॥ ೬೦ ॥
ಆಸೀನಃ ಕಾಂಚನೇ ದಿವ್ಯೇ ಸ ಚ ಸಿಂಹಾಸನೇ ಪ್ರಭುಃ ।
ಉಪಾಚ ಲಕ್ಷ್ಮಣಂ ರಾಮಃ ಶತ್ರುಘ್ನಂ ಭರತಂ ತಥಾ ॥ ೬೧ ॥

---

೫೭ "ಆಹಾ ಹಾಡು ಎಷ್ಟು ಚೆನ್ನಾಗಿದೆ, ಅದಕ್ಕೂ ಮೇಲಾಗಿ ಪದಗಳ ಜೋಡಣೆಯು ಎಷ್ಟು ಸೊಗಸಾಗಿದೆ. ಬಹಳ ಹಿಂದೆ ನಡೆದಿರುವದಾದರೂ ಕಣ್ಣೆದುರಿಗೆ ನಡೆಯುತ್ತಿರುವಂತೆ ತೋರಿಸಲ್ಪಟ್ಟಿದೆ."

೫೮ ಎಂದೀರೀತಿಯಾಗಿ ಮೇಲಾದ ತಪವನ್ನಾಚರಿಸಿದ ಮುನಿಗಳಿಂದ ಹೊಗಳಲ್ಪಡುತ್ತಾ ಕುಶಲವರು ಬಹಳ ಉತ್ಸಾಹದಿಂದ ಮನೋಹರವಾಗಿ ಹಾಡುತ್ತಾ ಬಂದರು.

೫೯ ಆರೀತಿ ಎಲ್ಲೆಲ್ಲಿಯೂ ಎಲ್ಲರಿಂದಲೂ ಹೊಗಳಲ್ಪಡುತ್ತಿದ್ದ ಆ ಗಾಯಕರನ್ನು ಅಯೋಧ್ಯೆಯ ರಾಜಬೀದಿಯಲ್ಲಿ ಒಂದು ದಿನ ಭರತನ ಅಣ್ಣನಾದ ರಾಮನು ನೋಡಿದನು.

೬೦ ಬಳಿಕ ಶತ್ರುಗಳನ್ನು ನಿರ್ಮೂಲ ಮಾಡುವ ರಾಮನು ಗೌರವಿಸಲು ಅರ್ಹರಾದ ಒಡಹುಟ್ಟಿದ ಕುಶಲವರನ್ನು ತನ್ನ ಮನೆಗೆ ಕರೆತಂದು ಉಪಚರಿಸಿದನು.

೬೧.೬೨ ಸ್ವಾಮಿಯಾದ ರಾಮನು ದಿವ್ಯವಾದ ಚಿನ್ನದ ಸಿಂಹಾಸನದಲ್ಲಿ ಕುಳಿತು. "ಆಶ್ಚರ್ಯಕರವಾದ ಅರ್ಥಗಳಿಂದಲೂ, ಪದಗಳಿಂದಲೂ

ಶ್ರೂಯತಾಮಿದಮಾಖ್ಯಾನಮನಯೋರ್ದೇವವರ್ಚಸೋಃ |
ವಿಚಿತ್ರಾರ್ಥಪದಂ ಸಮ್ಯಗ್ಗಾಯಕೌ ಸಮಚೋದಯತ್ ||೬೨||
ತೌ ಚಾಪಿ ಮಧುರಂ ರಕ್ತಂ ಸ್ವಂಚಿತಾಯತನಿಸ್ವನಮ್ |
ತಂತ್ರೀಲಯವದತ್ಯರ್ಥಂ ವಿಶ್ರುತಾರ್ಥಮಗಾಯತಾಮ್ ||೬೩||
ಹ್ಲಾದಯತ್ಸರ್ವಗಾತ್ರಾಣಿ ಮನಾಂಸಿ ಹೃದಯಾನಿ ಚ |
ಶ್ರೋತ್ರಾಶ್ರಯಸುಖಂ ಗೇಯಂ ತದ್ಬಭೌ ಜನಸಂಸದಿ ||೬೪||
ಸರ್ವಾ ಪೂರ್ವಮಿಯಂ ಯೇಷಾಮಾಸೀತ್ಕೃತ್ಸ್ನಾ ವಸುಂಧರಾ |
ಇಕ್ಷ್ವಾಕೂಣಾಮಿದಂ ತೇಷಾಂ ರಾಜ್ಞಾಂ ವಂಶೇ ಮಹಾತ್ಮನಾಮ್
ಮಹದುತ್ಪನ್ನಮಾಖ್ಯಾನಂ ರಾಮಾಯಣಮಿತಿಶ್ರುತಮ್ |
ತದಿದಂ ವರ್ತಯಿಷ್ಯಾಮಿ ಸರ್ವಂ ನಿಖಿಲಮಾದಿತಃ |

ಕೂಡಿರುವ ಈ ರಾಮಾಯಣಕಾವ್ಯವನ್ನು, ದೈವಕಾಂತಿಯುಳ್ಳ ಇವರು ಹಾಡುವುದನ್ನು ನೀವೆಲ್ಲರೂ ಕೇಳಿ" ಎಂದು ಲಕ್ಷ್ಮಣ ಶತ್ರುಘ್ನ ಮತ್ತು ಭರತ ಇವರಿಗೆ ಹೇಳಿ ಕುಶಲವರನ್ನು ಹಾಡಲು ಪ್ರೇರಿಸಿದನು.

೬೩ ಅವರು ಬಹಳ ಇಂಪಾಗಿ ಉತ್ತಮವಾದ ರಾಗದಿಂದ ದೀರ್ಘವಾದ ಆಲಾಪನೆಗಳೊಂದಿಗೆ ಬಹಳ ಸ್ಫುಟವಾಗಿ ಅರ್ಥವು ತೋರುವ ರೀತಿಯಲ್ಲಿ ವೀಣೆ ನುಡಿಯುವ ಹಾಗೆ ಹಾಡಿದರು.

೬೪ ಜನರು ತುಂಬಿದ ಆ ಸಭೆಯಲ್ಲಿ ಕುಶಲವರು ಹಾಡಿದ ಹಾಡು ಎಲ್ಲರ ದೇಹಗಳನ್ನು, ಮನಸ್ಸುಗಳನ್ನು ಮತ್ತು ಹೃದಯಗಳನ್ನು ಆನಂದಗೊಳಿಸುತ್ತಾ ಬಹಳವಾಗಿ ಶೋಭಿಸಿತು.

೬೫.೬೬ ಏಳು ದ್ವೀಪಗಳಿಂದ ಕೂಡಿದ ಈ ಭೂಮಂಡಲವು ಯಾರಿಗೆ ಅಧೀನವಾಗಿತ್ತೋ ಇಕ್ಷ್ವಾಕುವಂಶದಲ್ಲಿ ಹುಟ್ಟಿದ ಮಹಿಮಾಸಂಪನ್ನರಾದ ಆ ರಾಜರ ವಂಶದವನಾದ ರಾಮನ ಪ್ರಸಿದ್ಧವೂ ಪೂಜ್ಯವೂ ಆದ ಚರಿತ್ರೆಯು ರಾಮಾಯಣವೆಂಬುದು. ಅದನ್ನು ನಾನೀಗ ಮೊದಲಿನಿಂದ ಎಲ್ಲವನ್ನೂ ಸಂಪೂರ್ಣವಾಗಿ ಪ್ರಕಾಶಪಡಿಸುವೆನು. ಧರ್ಮ ಕಾಮ ಮತ್ತು ಅರ್ಥಗಳನ್ನು

ಧರ್ಮಕಾಮಾರ್ಥಸಹಿತಂ ಶ್ರೋತವ್ಯಮನಸೂಯಯಾ ॥ ೬೬ ॥

ಕೋಸಲೋ ನಾಮ ಮುದಿತಃ ಸ್ಫೀತೋ ಜನಪದೋ ಮಹಾನ್ ।
ನಿವಿಷ್ಟಃ ಸರಯೂತೀರೇ ಪ್ರಭೂತಧನಧಾನ್ಯವಾನ್ ॥ ೬೭ ॥

ಅಯೋಧ್ಯಾ ನಾಮ ನಗರೀ ತತ್ರಾಸೀಲ್ಲೋಕವಿಶ್ರುತಾ ।
ಮನುನಾ ಮಾನವೇಂದ್ರೇಣ ಯಾ ಪುರೀ ನಿರ್ಮಿತಾ ಸ್ವಯಮ್ ॥

ತಸ್ಯಾಂ ಪುರ್ಯಾಮಯೋಧ್ಯಾಯಾಂ ವೇದವಿತ್ಸರ್ವಸಂಗ್ರಹಃ ।
ದೀರ್ಘದರ್ಶೀ ಮಹಾತೇಜಾಃ ಪೌರಜಾನಪದಪ್ರಿಯಃ ॥ ೭೦ ॥

ಇಕ್ಷ್ವಾಕೂಣಾಮತಿರಥಃ ಯಜ್ವಾ ಧರ್ಮರತೋ ವಶೀ ।
ಮಹರ್ಷಿಕಲ್ಪೋ ರಾಜರ್ಷಿಸ್ತ್ರಿಷು ಲೋಕೇಷು ವಿಶ್ರುತಃ ॥ ೭೧ ॥

ಉಂಟುಮಾಡುವ ಈ ರಾಮಾಯಣವನ್ನು ಅಸೂಯೆ ಇಲ್ಲದೆ ಶ್ರದ್ಧೆಯಿಂದ ಎಲ್ಲರೂ ಕೇಳಬೇಕು.

೬೭ ಸರಯೂನದಿಯ ದಡದಲ್ಲಿ ಧನಧಾನ್ಯಗಳಿಂದ ಯಾವಾಗಲೂ ತುಂಬಿರುವ, ಮತ್ತು ಸಂತೋಷದಿಂದ ಉಕ್ಕುತ್ತಿರುವ ಜನರಿಂದ ಕೂಡಿದ ಕೋಸಲವೆಂಬ ವಿಶಾಲವಾದ ದೇಶವೊಂದುಂಟು.

೬೮ ಮಾನವಶ್ರೇಷ್ಠನಾದ ಮನುವಿನಿಂದ ಸಂಕಲ್ಪಮಾತ್ರದಿಂದಲೇ ನಿರ್ಮಾಣಮಾಡಲ್ಪಟ್ಟು ಲೋಕದಲ್ಲಿ ವಿಖ್ಯಾತವಾದ ಅಯೋಧ್ಯೆಯೆಂಬುದು ಅಲ್ಲಿ ಮುಖ್ಯಪಟ್ಟಣ.

೬೯-೭೩ ಆ ಅಯೋಧ್ಯಾಪಟ್ಟಣದಲ್ಲಿ ನಾಲ್ಕು ವೇದಗಳನ್ನು ಚೆನ್ನಾಗಿ ಬಲ್ಲವನೂ, ಎಲ್ಲರನ್ನು ವಶಪಡಿಸಿಕೊಳ್ಳುವವನೂ, ಮುಂದೆ ಬರುವುದನ್ನು ಮೊದಲೇ ತಿಳಿಯುವ ಸಾಮರ್ಥ್ಯವುಳ್ಳವನೂ, ಮಹಾಪರಾಕ್ರಮಶಾಲಿಯೂ ನಗರದಲ್ಲಿ, ಮತ್ತು ದೇಶದಲ್ಲಿ ವಾಸಮಾಡುವ ಪ್ರತಿಯೊಬ್ಬನಲ್ಲಿಯೂ ಅನುರಾಗವುಳ್ಳವನೂ, ಇಕ್ಷ್ವಾಕುವಂಶದಲ್ಲಿ ಅತಿರಥನೆಂದು ಪ್ರಸಿದ್ಧಿಹೊಂದಿದವನೂ, ವಿಧಿವತ್ತಾಗಿ ಯಾಗಗಳನ್ನು ನಡೆಸಿದವನೂ, ಧರ್ಮಕಾರ್ಯಗಳಲ್ಲಿ ಆಸಕ್ತಿಯುಳ್ಳವನೂ, ಎಲ್ಲಾ ಜನರನ್ನು ತನ್ನಧೀನದಲ್ಲಿಟ್ಟುಕೊಂಡಿರುವ

ಬಲವಾನ್ನಿಹತಾಮಿತ್ರೋ ಮಿತ್ರವಾನ್ವಿಜಿತೇಂದ್ರಿಯಃ ।
ಧನೈಶ್ಚ ಸಂಚಯೈಶ್ಚಾನ್ಯೈಃ ಶಕ್ರವೈಶ್ರವಣೋಪಮಃ ॥ ೭೧ ॥
ಯಥಾ ಮನುರ್ಮಹಾತೇಜಾ ಲೋಕಸ್ಯ ಪರಿರಕ್ಷಿತಾ ।
ತಥಾ ದಶರಥೋ ರಾಜಾ ವಸನ್ ಜಗದಪಾಲಯತ್ ॥ ೭೨ ॥
ತಸ್ಮಿನ್ಪುರವರೇ ಹೃಷ್ಟಾ ಧರ್ಮಾತ್ಮಾನೋ ಬಹುಶ್ರುತಾಃ ।
ನರಾಸ್ತುಷ್ಟಾ ಧನೈಃ ಸ್ವೈಃ ಸ್ವೈರಲುಬ್ಧಾಃ ಸತ್ಯವಾದಿನಃ ॥ ೭೩ ॥
ನ ನಾಸ್ತಿಕೋ ನಾನೃತಕೋ ನ ಕಶ್ಚಿದಬಹುಶ್ರುತಃ ।
ನಾಸೂಯಕೋ ನ ವಾಽಶಕ್ತೋ ನಾವಿದ್ವಾನ್ವಿದ್ಯತೇ ತದಾ ॥ ೭೪ ॥

ವನೂ, ಮಹಾಮುನಿಯೆಂದು ಹೇಳುವಹಾಗಿರುವವನೂ, ಮೂರು ಲೋಕಗಳಲ್ಲಿಯೂ ಪ್ರಸಿದ್ಧಿಹೊಂದಿದ ರಾಜರ್ಷಿಯೂ, ಬಲಿಷ್ಠನೂ, ಶತ್ರುಗಳನ್ನು ಸಂಹರಿಸಿದವನೂ, ಸ್ನೇಹಿತರೊಡನೆ ಕೂಡಿದವನೂ, ಜಿತೇಂದ್ರಿಯನೂ, ಪರಮೈಶ್ವರ್ಯದಲ್ಲಿ ಇಂದ್ರ ಮತ್ತು ಕುಬೇರನನ್ನು ಹೋಲುವವನೂ ಆದ ದಶರಥರಾಜನು, ಮಹಾತೇಜಸ್ವಿಯಾದ ಆದಿಮನುವು ಲೋಕವನ್ನು ಕಾಪಾಡಿದಹಾಗೆ ಎಲ್ಲರನ್ನು ಕಾಪಾಡುತ್ತಿದ್ದನು.

೭೩. ಅವನಿಂದ ಕಾಪಾಡಲ್ಪಡುವ ಆ ಪಟ್ಟಣದಲ್ಲಿ ಎಲ್ಲರೂ ಬಹಳ ಸಂತೋಷದಿಂದ ಕೂಡಿದವರಾಗಿಯೂ, ಧರ್ಮಚಿಂತೆಯುಳ್ಳವರಾಗಿಯೂ, ಅನೇಕ ಶಾಸ್ತ್ರಗಳನ್ನು ಬಲ್ಲವರಾಗಿಯೂ, ತಮಗಿರುವ ಹಣದಿಂದಲೇ ತೃಪ್ತಿ ಹೊಂದಿದವರಾಗಿಯೂ, ಮತ್ತೊಬ್ಬರ ಹಣದಲ್ಲಿ ಆಸೆಯಿಲ್ಲದವರಾಗಿಯೂ ಮತ್ತು ಸತ್ಯವನ್ನೇ ನುಡಿಯುವರಾಗಿಯೂ ಇದ್ದರು.

೭೪. ದಶರಥನು ರಾಜ್ಯವಾಳುವ ಕಾಲದಲ್ಲಿ ನಾಸ್ತಿಕನೆಂಬುವನು ಯಾರೂ ಇರಲಿಲ್ಲ. ಸುಳ್ಳಾಡುವವನು ಇರಲಿಲ್ಲ, ಹೆಚ್ಚು ಓದದವನು ಇರಲಿಲ್ಲ; ಅಸೂಯೆಯುಳ್ಳವನು ಇರಲಿಲ್ಲ; ಅಥವಾ ಐಹಿಕ ಆಮುಷ್ಮಿಕ ಫಲಗಳನ್ನು ಪಡೆಯಲು ಸಾಮರ್ಥ್ಯವಿಲ್ಲದವನು ಇರಲಿಲ್ಲ; ಓದದವನು ಇರಲೇ ಇಲ್ಲ.

ವರ್ಣೇಷ್ವಗ್ರ್ಯಚತುರ್ಥೇಷು ದೇವತಾಽತಿಥಿಪೂಜಕಾಃ ।
ಕೃತಜ್ಞಾಶ್ಚ ವದಾನ್ಯಾಶ್ಚ ಶೂರಾ ವಿಕ್ರಮಸಂಯುತಾಃ ॥ ೭೫ ॥
ದೀರ್ಘಾಯುಷೋ ನರಾಃ ಸರ್ವೇ ಧರ್ಮಂ ಸತ್ಯಂ ಚ ಸಂಶ್ರಿತಾಃ ।
ಸಹಿತಾಃ ಪುತ್ರಪೌತ್ರೈಶ್ಚ ನಿತ್ಯಂ ಸ್ತ್ರೀಭಿಃ ಪುರೋತ್ತಮೇ ॥ ೭೬ ॥
ಕ್ಷತ್ರಂ ಬ್ರಹ್ಮಮುಖಂ ಚಾಸೀದ್ವೈಶ್ಯಾಃ ಕ್ಷತ್ರಮನುವ್ರತಾಃ ।
ಶೂದ್ರಾಃ ಸ್ವಧರ್ಮನಿರತಾಸ್ತ್ರೀನ್ವರ್ಣಾನುಪಚಾರಿಣಃ ॥ ೭೭ ॥
ತಸ್ಯಾಮಾತ್ಯಾ ಗುಣೈರಾಸನ್ನಿಕ್ಷ್ವಾಕೋಸ್ತು ಮಹಾತ್ಮನಃ ।
ಮಂತ್ರಜ್ಞಾಶ್ಚೇಂಗಿತಜ್ಞಾಶ್ಚ ನಿತ್ಯಂ ಪ್ರಿಯಹಿತೇ ರತಾಃ ॥ ೭೮ ॥
ವಿದ್ಯಾವಿನೀತಾ ಹ್ರೀಮಂತಃ ಕುಶಲಾ ನಿಯತೇನ್ದ್ರಿಯಾಃ ।

---

೭೫. ನಾಲ್ಕು ಜಾತಿಯವರೂ ದೇವತೆಗಳನ್ನು ಮತ್ತು ಅತಿಥಿಗಳನ್ನು ಪೂಜಿಸುವರಾಗಿಯೂ, ಮಾಡಿದ ಉಪಕಾರವನ್ನು ಸ್ಮರಿಸಿಕೊಳ್ಳುವ ಸ್ವಭಾವವುಳ್ಳವರಾಗಿಯೂ, ದಾನಶೂರರಾಗಿಯೂ, ಸಾಮರ್ಥ್ಯಶಾಲಿಗಳಾಗಿಯೂ, ಪರಾಕ್ರಮಶಾಲಿಗಳಾಗಿಯೂ ಇದ್ದರು.

೭೬. ಹೀಗೆ ಎಲ್ಲರೂ ಧರ್ಮಸತ್ಯಗಳನ್ನಾಶ್ರಯಿಸಿ ಯಾವಾಗಲೂ ಹೆಂಡತಿ, ಮಕ್ಕಳು, ಮತ್ತು ಮರಿಮಕ್ಕಳುಗಳಿಂದ ಕೂಡಿ ಬಹಳ ಕಾಲ ಆ ನಗರದಲ್ಲಿ ಬಾಳಿದರು.

೭೭. ಕ್ಷತ್ರಿಯರು ಬ್ರಾಹ್ಮಣರಿಗೆ ಅಧೀನರಾಗಿ ನಡೆದುಕೊಳ್ಳುತ್ತಿದ್ದರು. ವೈಶ್ಯರು ಕ್ಷತ್ರಿಯರಿಗೆ ವಶರಾಗಿದ್ದರು. ಹಾಗೆಯೇ ಶೂದ್ರರು ಮೂರು ಜಾತಿಯವರನ್ನೂ ಸೇವೆಮಾಡುತ್ತಾ ತಮ್ಮ ಧರ್ಮವನ್ನು ನಡೆಸುತ್ತಿದ್ದರು.

೭೮-೭೯ ಬಹಳ ಬುದ್ಧಿವಂತನಾದ ಇಕ್ಷ್ವಾಕುವಂಶದಲ್ಲಿ ಹುಟ್ಟಿದ ಆ ದಶರಥರಾಜನಿಗೆ ಮಂತ್ರಾಲೋಚನೆಯಲ್ಲಿ ನಿಪುಣರೂ, ಇಂಗಿತಜ್ಞರೂ, ಪ್ರಿಯವಾದುದನ್ನು ಮತ್ತು ಹಿತವಾದುದನ್ನು ಮಾಡುವುದರಲ್ಲಿ ಆಸಕ್ತಿಯುಳ್ಳವರೂ, ಆನ್ವೀಕ್ಷಿಕೀ ಮೊದಲಾದ ವಿದ್ಯೆಗಳಲ್ಲಿ ಶಿಕ್ಷೆಹೊಂದಿದವರೂ, ಮಾಡಬಾರದ ಕೆಲಸಗಳ ವಿಷಯದಲ್ಲಿ ನಾಚಿಕೆಯುಳ್ಳವರೂ, ಸಾಮರ್ಥ್ಯಶಾಲಿಗಳೂ

ಪರಸ್ಪರಾನುರಕ್ತಾಶ್ಚ ನೀತಿಮನ್ತೋ ಬಹುಶ್ರುತಾಃ ॥ ೭೯ ॥
ಈದೃಶೈಸ್ತೈರಮಾತ್ಯೈಶ್ಚ ರಾಜಾ ದಶರಥೋಽನಘಃ ।
ಉಪಪನ್ನೋ ಗುಣೋಪೇತೈರನ್ವಶಾಸದ್ವಸುಂಧರಾಮ್ ॥ ೮೦ ॥
ತಸ್ಯ ತ್ವೇವಂಪ್ರಭಾವಸ್ಯ ಧರ್ಮಜ್ಞಸ್ಯ ಮಹಾತ್ಮನಃ ।
ಸುತಾರ್ಥಂ ತಪ್ಯಮಾನಸ್ಯ ನಾಸೀದ್ವಂಶಕರಃ ಸುತಃ ॥ ೮೧ ॥
ಚಿಂತಯಾನಸ್ಯ ತಸ್ಯೈವಂ ಬುದ್ಧಿರಾಸೀನ್ಮಹಾತ್ಮನಃ ।
ಸುತಾರ್ಥಂ ವಾಜಿಮೇಧೇನ ಕಿಮರ್ಥಂ ನ ಯಜಾಮ್ಯಹಮ್ ॥
ಸ ನಿಶ್ಚಿತಾಂ ಮತಿಂ ಕೃತ್ವಾ ಯಷ್ಟವ್ಯಮಿತಿ ಬುದ್ಧಿಮಾನ್ ।
ಮಂತ್ರಿಭಿಃ ಸಹ ಧರ್ಮಾತ್ಮಾ ಸರ್ವೈರೇವ ಕೃತಾತ್ಮಭಿಃ ॥ ೮೩ ॥
ತತೋಽಬ್ರವೀದಿದಂ ರಾಜಾ ಸುಮಂತ್ರಂ ಮಂತ್ರಿಸತ್ತಮಮ್ ।

ಇಂದ್ರಿಯಗಳನ್ನು ತಮ್ಮ ಅಧೀನಲ್ಲಿಟ್ಟುಕೊಂಡಿರುವವರೂ, ಅನ್ಯೋನ್ಯ ಪ್ರೀತಿಯುಳ್ಳವರೂ, ನೀತಿಶಾಸ್ತ್ರನಿಪುಣರೂ ಮತ್ತು ಅನೇಕವಿದ್ಯೆಗಳನ್ನು ಬಲ್ಲವರೂ ಮಂತ್ರಿಗಳಾಗಿದ್ದರು.

೮೦. ಗುಣಾಢ್ಯರಾದ ಇಂತಹ ಮಂತ್ರಿಗಳಿಂದ ಕೂಡಿದ ದಶರಥ ರಾಜನು ಸ್ವಲ್ಪವೂ ಕ್ಲೇಶವಿಲ್ಲದೆ ಭೂಮಿಯನ್ನು ಆಳುತ್ತಿದ್ದನು.

೮೧. ಇಂತಹ ಪ್ರಭಾವವುಳ್ಳವನಾದರೂ, ಧರ್ಮವನ್ನರಿತ ಮಹಾತ್ಮನಾದ, ಮಗನಿಗಾಗಿ ಹಲುಬುತ್ತಿರುವ ದಶರಥನಿಗೆ ವಂಶವನ್ನು ಬೆಳೆಸುವ ಮಗನು ಮಾತ್ರ ಇರಲಿಲ್ಲ.

೮೨. ಪುತ್ರೋತ್ಪತ್ತಿಯ ಉಪಾಯವನ್ನು ಚಿಂತಿಸುವ ಮಹಾತ್ಮನಾದ ಅವನಿಗೆ "ಮಗನನ್ನು ಪಡೆಯಲು ನಾನೇಕೆ ಅಶ್ವಮೇಧಯಾಗವನ್ನು ಮಾಡಬಾರದು?" ಎಂಬ ಯೋಚನೆಯು ಹೊಳೆಯಿತು.

೮೩-೮೪. ಯಾಗಮಾಡುವುದೆಂದು ವಿಶಾಲಬುದ್ಧಿಯುಳ್ಳ ಎಲ್ಲಾ ಮಂತ್ರಿಗಳೊಡನೆಕೂಡಿ ನಿಶ್ಚಯ ಮಾಡಿ ಧರ್ಮಾತ್ಮನೂ, ವಿವೇಕಿಯೂ ಆದ ದಶರಥರಾಜನು ಮುಖ್ಯಮಂತ್ರಿಯಾದ ಸುಮಂತ್ರನನ್ನು ಕುರಿತು "ನೀನು

ಶೀಘ್ರಮಾನಯ ಮೇ ಸರ್ವಾನ್ ಗುರೂಂಸ್ತ್ವಂ ಸಪುರೋಹಿತಾನ್
ತತಃ ಸುಮಂತ್ರಸ್ತ್ವರಿತಂ ಗತ್ವಾ ತ್ವರಿತವಿಕ್ರಮಃ ।
ಸಮಾನಯತ್ಸ ತಾನ್ವಿಪ್ರಾನ್ ಸಮಸ್ತಾನ್ವೇದಪಾರಗಾನ್ ॥ ೬೫ ॥
ಸುಯಜ್ಞಂ ವಾಮದೇವಂ ಚ ಜಾಬಾಲಿಮಥ ಕಾಶ್ಯಪಮ್ ।
ಪುರೋಹಿತಂ ವಸಿಷ್ಠಂ ಚ ಯೇ ಚಾನ್ಯೇ ದ್ವಿಜಸತ್ತಮಾಃ ॥ ೬೬ ॥
ತಾನ್ ಪೂಜಯಿತ್ವಾ ಧರ್ಮಾತ್ಮಾ ರಾಜಾ ದಶರಥಸ್ತದಾ ।
ಇದಂ ಧರ್ಮಾರ್ಥಸಹಿತಂ ಶ್ಲಕ್ಷ್ಣಂ ವಚನಮಬ್ರವೀತ್ ॥ ೬೭ ॥
ಮಮ ಲಾಲಪ್ಯಮಾನಸ್ಯ ಪುತ್ರಾರ್ಥಂ ನಾಸ್ತಿ ವೈ ಸುಖಮ್ ।
ಪುತ್ರಾರ್ಥಂ ಹಯಮೇಧೇನ ಯಕ್ಷ್ಯಾಮೀತಿ ಮತಿರ್ಮಮ ।
ಕಥಂ ಪ್ರಾಪ್ಸ್ಯಾಮ್ಯಹಂ ಕಾಮಂ ಬುದ್ಧಿರತ್ರ ವಿಚಾರ್ಯತಾಮ್॥

ಬೇಗ ನನ್ನ ಗುರುಗಳನ್ನೂ, ಪುರೋಹಿತರನ್ನೂ ಕರೆದುಕೊಂಡು ಬಾ" ಎಂದು ಹೇಳಿದನು.

೬೫. ಬಳಿಕ ಚುರುಕಾದ ನಡಿಗೆಯುಳ್ಳ ಸುಮಂತ್ರನು ಬೇಗ ಹೋಗಿ ವೇದಗಳನ್ನು ಸಂಪೂರ್ಣವಾಗಿ ತಿಳಿದಿರುವ ಅವರೆಲ್ಲರನ್ನೂ ಒಟ್ಟಿಗೆ ಕರೆದುಕೊಂಡು ಬಂದನು.

೬೬. ಕರೆತರಲ್ಪಟ್ಟವರು-ಸುಯಜ್ಞ, ವಾಮದೇವ, ಜಾಬಾಲಿ, ಕಾಶ್ಯಪ ಪುರೋಹಿತನಾದ ವಸಿಷ್ಠ ಮತ್ತು ಇನ್ನೂ ಇತರ ಬ್ರಾಹ್ಮಣೋತ್ತಮರು.

೬೭. ವೇದವಿಹಿತವಾದ ಕರ್ಮಗಳನ್ನು ಬಿಡದೆ ಅನುಷ್ಠಿಸುವ ದಶರಥ ರಾಜನು ಆಗ ಅವರೆಲ್ಲರನ್ನೂ ಪೂಜಿಸಿ ಧರ್ಮ ಮತ್ತು ಅರ್ಥಗಳಿಗೆ ವಿರೋಧವಿಲ್ಲದರೀತಿಯಲ್ಲಿ ನಯವಾಗಿ ಈ ಮಾತನ್ನು ಹೇಳಿದನು.

೬೮. "ಮುನಿಗಳೆ! ಸಂತತಿಯಿಲ್ಲದೇ ಮಗನಿಗಾಗಿ ಪರಿತಪಿಸುತ್ತಿರುವ ನನಗೆ ಸುಖವೆಂಬುದೇ ಇಲ್ಲವಾಗಿದೆ. ಆದುದರಿಂದ ಮಗನನ್ನು ಪಡೆಯಲು ಅಶ್ವಮೇಧ ಯಾಗಮಾಡೋಣವೆಂದು ನನ್ನ ಅಭಿಪ್ರಾಯ. ಹೇಗೆ ನಾನು ನನ್ನ ಮನೋರಥವನ್ನು ಪಡೆಯುವೆನು? ಇದಕ್ಕುಪಾಯವೇನು? ಆಲೋಚಿಸಿ"

ತತಃ ಸಾಧ್ವಿತಿ ತದ್ವಾಕ್ಯಂ ಬ್ರಾಹ್ಮಣಾಃ ಪ್ರತ್ಯಪೂಜಯನ್ ।
ವಸಿಷ್ಠಪ್ರಮುಖಾಃ ಸರ್ವೇ ಪಾರ್ಥಿವಸ್ಯ ಮುಖಾಚ್ಚ್ಯುತಮ್ ॥ ೮೯ ॥
ಊಚುಶ್ಚ ಪರಮಪ್ರೀತಾಃ ಸರ್ವೇ ದಶರಥಂ ವಚಃ ॥ ೯೦ ॥
ಸಂಭಾರಾಃ ಸಂಭ್ರಿಯಂತಾಂ ತೇ ತುರಗಶ್ಚ ವಿಮುಚ್ಯತಾಮ್ ।
ಸರಯ್ವಾಶ್ಚೋತ್ತರೇ ತೀರೇ ಯಜ್ಞಭೂಮಿರ್ವಿಧೀಯತಾಮ್ ॥
ಸರ್ವಥಾ ಪ್ರಾಪ್ಸ್ಯಸೇ ಪುತ್ರಾಂಶ್ಚತುರೋಽಮಿತವಿಕ್ರಮಾನ್ ।
ಯಸ್ಯ ತೇ ಧಾರ್ಮಿಕೀ ಬುದ್ಧಿರಿಯಂ ಪುತ್ರಾರ್ಥಮಾಗತಾ ॥ ೯೨ ॥
ತತಃ ಪ್ರೀತೋಽಭವದ್ರಾಜಾ ಶ್ರುತ್ವಾ ತು ದ್ವಿಜಭಾಷಿತಮ್ ।
ಅಮಾತ್ಯಾಂಶ್ಚಾಬ್ರವೀದ್ರಾಜಾ ಹರ್ಷಪರ್ಯಾಕುಲೇಕ್ಷಣಃ ॥ ೯೩ ॥
ಗುರೂಣಾಂ ವಚನಾಚ್ಛೀಘ್ರಂ ಸಂಭಾರಾಃ ಸಂಭ್ರಿಯಂತು ಮೇ ।

---

೮೯. ಅದನ್ನು ಕೇಳಿ ವಸಿಷ್ಠನೇ ಮೊದಲಾದ ಬ್ರಾಹ್ಮಣರೆಲ್ಲರೂ ರಾಜನ ಬಾಯಿಂದ ಹೊರಟ ಈ ಮಾತುಗಳನ್ನು ಸಾಧುವೆಂದು ಶ್ಲಾಘಿಸಿದರು.

೯೦. ಮತ್ತು ಎಲ್ಲರೂ ಬಹಳ ಸಂತೋಷಗೊಂಡವರಾಗಿ ದಶರಥನನ್ನು ಕುರಿತು ಈ ಮಾತನ್ನು ಹೇಳಿದರು.

೯೧. "ರಾಜನೇ ! ಯಾಗವನ್ನು ನಡೆಸಲು ಬೇಕಾದ ಸಾಮಗ್ರಿಗಳನ್ನು ಶೇಖರಿಸುವನಾಗು. ಕುದುರೆಯು ಬಿಡಲ್ಪಡಲಿ. ಸರಯೂನದಿಯ ಉತ್ತರ ದಡದಲ್ಲಿ ಯಾಗಶಾಲೆಯು ನಿರ್ಮಿಸಲ್ಪಡಲಿ.

೯೨. ಪುತ್ರನನ್ನು ಪಡೆಯಲೋಸುಗ ಈರೀತಿ ಧರ್ಮ ಬುದ್ಧಿಯು ನಿನಗೆ ಹುಟ್ಟಿರುವ ಕಾರಣ ಖಂಡಿತವಾಗಿ ನೀನು ನಿನ್ನ ಇಷ್ಟದಂತೆ ಸತ್ಪುತ್ರರನ್ನು ಪಡೆಯುವಿ."

೯೩. ಬ್ರಾಹ್ಮಣರ ಈ ಮಾತನ್ನು ಕೇಳಿ ರಾಜನು ಸಂತೋಷಗೊಂಡನು. ಮತ್ತು ಆನಂದಬಾಷ್ಪದಿಂದ ತುಂಬಿದ ಕಣ್ಣುಗಳುಳ್ಳವನಾಗಿ ಮಂತ್ರಿಗಳನ್ನು ಕುರಿತು ಹೇಳಿದನು.

೯೪. ನನ್ನ ಗುರುಗಳ ಮಾತಿನಂತೆ ಬೇಗ ಸಲಕರಣೆಗಳನ್ನು

ಸಮರ್ಥಾಧಿಷ್ಠಿತಶ್ಚಾಶ್ವಃ ಸೋಪಾಧ್ಯಾಯೋ ವಿಮುಚ್ಯತಾಮ್ ॥
ಸರಯ್ವಾಶ್ಚೋತ್ತರೇ ತೀರೇ ಯಜ್ಞಭೂಮಿರ್ವಿಧೀಯತಾಮ್ ।
ಶಾಂತಯಶ್ಚಾಪಿ ವರ್ಧಂತಾಂ ಯಥಾಕಲ್ಪಂ ಯಥಾವಿಧಿ ॥ ೯೫ ॥
ತಥೇತಿ ಚ ತತಃ ಸರ್ವೇ ಮಂತ್ರಿಣಃ ಪ್ರತ್ಯಪೂಜಯನ್ ।
ಪಾರ್ಥಿವೇಂದ್ರಸ್ಯ ತದ್ವಾಕ್ಯಂ ಯಥಾಜ್ಞಪ್ತಮಕುರ್ವತ ॥ ೯೬ ॥
ತತೋ ದ್ವಿಜಾಸ್ತೇ ಧರ್ಮಜ್ಞಮಸ್ತುವನ್ಪಾರ್ಥಿವರ್ಷಭಮ್ ।
ಅನುಜ್ಞಾತಾಸ್ತತಃ ಸರ್ವೇ ಪುನರ್ಜಗ್ಮುರ್ಯಥಾಗತಮ್ ॥ ೯೭ ॥
ಅಭಿವಾದ್ಯ ವಸಿಷ್ಠಂ ಚ ನ್ಯಾಯತಃ ಪ್ರತಿಪೂಜ್ಯ ಚ ।
ಅಬ್ರವೀತ್ಪ್ರಶ್ರಿತಂ ವಾಕ್ಯಂ ಪ್ರಸವಾರ್ಥಂ ದ್ವಿಜೋತ್ತಮಮ್ ॥ ೯೮ ॥

ಸೇರಿಸಿರಿ. ಮತ್ತು ಅಧ್ವರ್ಯು ಮೊದಲಾದ ಋತ್ವಿಕ್ಕುಗಳೊಡನೆ ಕುದುರೆಯು ವೀರರಿಂದ ರಕ್ಷಿಸಲ್ಪಡುವುದಾಗಿ ಬಿಡಲ್ಪಡಲಿ.

೯೫. ಸರಯೂನದಿಯ ಉತ್ತರ ದಡದಲ್ಲಿ ಯಾಗಶಾಲೆಯನ್ನು ನಿರ್ಮಾಣಮಾಡಿ. ಯಾವದೊಂದು ವಿಘ್ನವೂ ಇಲ್ಲದೇ ಸುಗಮವಾಗಿ ನಡೆಯಲು ಮಾಡಬೇಕಾದ ಶಾಂತಿಕರ್ಮಗಳು ಕ್ರಮವಾಗಿಯೂ, ವಿಧಿವತ್ತಾಗಿಯೂ ನಡೆಸಲ್ಪಡಲಿ."

೯೬. ಹಾಗೆಯೇ ಆಗಲೆಂದು ಮಂತ್ರಿಗಳೆಲ್ಲರೂ ಸಂತೋಷದಿಂದ ಅಭಿನಂದಿಸಿ ರಾಜನ ಆ ಮಾತನ್ನು ಅವನು ಆಜ್ಞಾಪಿಸಿದ ಹಾಗೆ ನಡೆಸಿದರು.

೯೭. ಅನಂತರ ಅಲ್ಲಿಗೆ ಬಂದಿದ್ದ ಬ್ರಾಹ್ಮಣರೆಲ್ಲರೂ ಧರ್ಮಜ್ಞನಾದ ರಾಜಶ್ರೇಷ್ಠನನ್ನು ಶ್ಲಾಘಿಸಿ ಅವನ ಅನುಮತಿಯನ್ನು ಪಡೆದು ತಮ್ಮ ತಮ್ಮ ಮನೆಗೆ ಹಿಂತಿರುಗಿದರು.

೯೮ - ೯೯. ಬಳಿಕ ರಾಜನು ಬ್ರಾಹ್ಮಣೋತ್ತಮನಾದ ವಸಿಷ್ಠನನ್ನು ನಮಸ್ಕರಿಸಿ ಮತ್ತು ವಿಧಿವತ್ತಾಗಿ ಪೂಜಿಸಿ ವಿನಯದಿಂದ ಕೂಡಿದ ಮಾತನ್ನು ಹೇಳಿದನು. "ಮುನಿಶ್ರೇಷ್ಠರೇ ಪುತ್ರಪ್ರಾಪ್ತಿಗಾಗಿ ಮಾಡುವ ಯಜ್ಞವನ್ನು ಶಾಸ್ತ್ರವನ್ನು ಮೀರದೇ ಸರಿಯಾಗಿ ನಡೆಸಿಕೊಡೋಣವಾಗಲಿ.

ಯಜ್ಞೋ ಮೇ ಕ್ರಿಯತಾಂ ವಿಪ್ರ! ಯಥೋಕ್ತಂ ಮುನಿಪುಂಗವ! ।
ಭವಾನ್ ಸ್ನಿಗ್ಧಃ ಸುಹೃನ್ಮಹ್ಯಂ ಗುರುಶ್ಚ ಪರಮೋ ಮಹಾನ್ ।
ವೋಢವ್ಯೋ ಭವತಾ ಚೈವ ಭಾರೋ ಯಜ್ಞಸ್ಯ ಚೋದ್ಯತಃ॥ ೯೯ ॥

ತಥೇತಿ ಚ ಸ ರಾಜಾನಮಬ್ರವೀದ್ದ್ವಿಜಸತ್ತಮಃ ।
ಕರಿಷ್ಯೇ ಸರ್ವಮೇವೈತದ್ಭವತಾ ಯತ್ಸಮರ್ಥಿತಮ್ ॥ ೧೦೦ ॥

ನಿರ್ಯಾತು ಚ ಭವಾನ್ ಯಷ್ಟುಂ ಯಜ್ಞಾಯತನಮಂತಿಕಾತ್ ।
ಸರ್ವಕಾಮೈರುಪಹೃತೈರುಪೇತಂ ವೈ ಸಮಂತತಃ ॥ ೧೦೧ ॥

ತಥಾ ವಸಿಷ್ಠವಚನಾದೃಶ್ಯಶೃಂಗಸ್ಯ ಚೋಭಯೋಃ ।
ಶುಭೇ ದಿವಸನಕ್ಷತ್ರೇ ನಿರ್ಯಾತೋ ಜಗತೀಪತಿಃ ॥ ೧೦೨ ॥

ತತೋ ವಸಿಷ್ಠಪ್ರಮುಖಾಃ ಸರ್ವ ಏವ ದ್ವಿಜೋತ್ತಮಾಃ ।

ತಾವು ನನಗೆ ಪ್ರಿಯಸ್ನೇಹಿತರೂ, ಶ್ರೇಷ್ಠರಾದ ಮತ್ತು ಅಸದೃಶರಾದ ಗುರುಗಳೂ ಆಗಿರುವಿರಿ. ಆದುದರಿಂದ ಪ್ರಾರಂಭಿಸಿರುವ ಈ ಯಾಗದ ಭಾರವನ್ನು ತಾವೇ ವಹಿಸಿಕೊಳ್ಳಬೇಕು.

೧೦೦ - ೧೦೧. "ಹಾಗೆಯೇ ಆಗಲಿ ನೀನು ಪ್ರಾರ್ಥಿಸಿದ್ದೆಲ್ಲವನ್ನೂ ನಡೆಸಿ ಕೊಡುವೆನು ನೀನೀಗ ಯಾಗಮಾಡಲು ಯಾಗಶಾಲೆಗೆ ಹೊರಡುವನಾಗು. ಎಲ್ಲೆಡೆಯಿಂದಲೂ ಶೇಖರಿಸಿದ ಸಲಕರಣೆಗಳಿಂದ ಯಾಗಶಾಲೆಯು ತುಂಬಿರುವುದಾಗಿದೆ" ಎಂದು ಬ್ರಾಹ್ಮಣೋತ್ತಮನಾದ ವಸಿಷ್ಠನು ರಾಜನಿಗೆ ಹೇಳಿದನು.

೧೦೨. ವಸಿಷ್ಠನ ಮಾತಿನಂತೆಯೂ, ಹಾಗೆ ಋಷ್ಯಶೃಂಗನ ಅಭಿಪ್ರಾಯದಂತೆಯೂ ದಶರಥರಾಜನು ಶುಭನಕ್ಷತ್ರದಿಂದ ಕೂಡಿದ ದಿವಸದಲ್ಲಿ ಯಾಗಶಾಲೆಯನ್ನು ಸೇರಿದನು.

೧೦೩. ಅನಂತರ ಯಾಗಶಾಲೆಯಲ್ಲಿ ವಸಿಷ್ಠನೇ ಮೊದಲಾದ ಬ್ರಾಹ್ಮಣೋತ್ತಮರೆಲ್ಲರೂ ಋಷ್ಯಶೃಂಗರನ್ನು ಮುಂದಿಟ್ಟುಕೊಂಡು ಯಾಗವನ್ನು

ಋಶ್ಯಶೃಂಗಂ ಪುರಸ್ಕೃತ್ಯ ಯಜ್ಞಕರ್ಮಾರಭಂಸ್ತದಾ ॥ ೧೦೩ ॥
ಯಜ್ಞವಾಟಗತಾಃ ಸರ್ವೇ ಯಥಾಶಾಸ್ತ್ರಂ ಯಥಾವಿಧಿ ।
ಹೋತಾರೋ ದದುರಾವಾಹ್ಯ ಹವಿರ್ಭಾಗಾನ್ ದಿವೌಕಸಾಮ್ ॥
ನಾನಾದೇಶಾದನುಪ್ರಾಪ್ತಾಃ ಪುರುಷಾಃ ಸ್ತ್ರೀಗಣಾಸ್ತಥಾ ।
ಅನ್ನಪಾನೈಃ ಸುವಿಹಿತಾಸ್ತಸ್ಮಿನ್ಯಜ್ಞೇ ಮಹಾತ್ಮನಃ ॥ ೧೦೫ ॥
ತತಃ ಪ್ರೀತಮನಾ ರಾಜಾ ಪ್ರಾಪ್ಯ ಯಜ್ಞಮನುತ್ತಮಮ್ ।
ಪಾಪಾಪಹಂ ಸ್ವರ್ನಯನಂ ದುಷ್ಕರಂ ಪಾರ್ಥಿವರ್ಷಭೈಃ ॥ ೧೦೬ ॥
ತತೋಽಬ್ರವೀದೃಶ್ಯಶೃಂಗಂ ರಾಜಾ ದಶರಥಸ್ತದಾ ।
ಕುಲಸ್ಯ ವರ್ಧನಂ ತ್ವಂ ತು ಕರ್ತುಮರ್ಹಸಿ ಸುವ್ರತ ॥ ೧೦೭ ॥

ಮಾಡಲು ತೊಡಗಿದರು.

೧೦೪. ಯಾಗಶಾಲೆಯಲ್ಲಿ ತುಂಬಿದ್ದ ಹೋತೃಗಳೆಲ್ಲರೂ ವೇದಶಾಸ್ತ್ರಕ್ಕನುಗುಣವಾಗಿ ಕ್ರಮತಪ್ಪದೆ ಮಂತ್ರಗಳಿಂದ ಆವಾಹನೆಮಾಡಿ ದೇವತೆಗಳಿಗೆಲ್ಲಾ ಹವಿರ್ಭಾಗಗಳನ್ನು ಒಪ್ಪಿಸಿದರು.

೧೦೫. ಮಹಾತ್ಮನಾದ ದಶರಥನ ಆ ಯಾಗದಲ್ಲಿ ನಾನಾ ದೇಶಗಳಿಂದ ಬಂದ ಪುರುಷರು ಸ್ತ್ರೀಯರು ಮೊದಲಾದ ಎಲ್ಲರೂ ಅನ್ನಪಾನಗಳಿಂದ ತೃಪ್ತಿಗೊಳಿಸಲ್ಪಟ್ಟರು.

೧೦೬. ಸಕಲ ಪಾಪಗಳನ್ನು ಹೋಗಲಾಡಿಸುವಂತಹದೂ, ಸ್ವರ್ಗಪ್ರಾಪ್ತಿಗೆ ಸಾಧನವಾದುದೂ, ರಾಜಶ್ರೇಷ್ಠರಿಂದಲೂ ಸುಲಭವಾಗಿ ಮಾಡಲಾಗದೂ ಆದ ಸರ್ವೋತ್ತಮವಾದ ಆ ಯಾಗವನ್ನು ನಡೆಸಿ ರಾಜನು ಸಂತೋಷಗೊಂಡನು.

೧೦೭. (ಅಷ್ಟಕ್ಕೆ ತೃಪ್ತನಾಗದೆ) ದಶರಥನು ಋಷ್ಯಶೃಂಗನನ್ನು ಕುರಿತು "ಶ್ರೇಷ್ಠವಾದ ವ್ರತಗಳನ್ನಾಚರಿಸುವ ಮುನಿಯೇ ! ಪುತ್ರಪ್ರಾಪ್ತಿಗೆ ಸಾಧನವಾದುದನ್ನು ಮಾಡಲು ಸಮರ್ಥನು ನೀನೇ ! ಅದನ್ನು ನಡೆಸಿಕೊಡಬೇಕು." ಎಂದನು.

ತಥೇತಿ ಚ ಸ ರಾಜಾನಮುವಾಚ ದ್ವಿಜಸತ್ತಮಃ ।
ಭವಿಷ್ಯಂತಿ ಸುತಾ ರಾಜನ್! ಚತ್ವಾರಸ್ತೇ ಕುಲೋದ್ವಹಾಃ ॥೧೦೮॥

ಇಷ್ಟಿಂ ತೇಽಹಂ ಕರಿಷ್ಯಾಮಿ ಪುತ್ರೀಯಾಂ ಪುತ್ರಕಾರಣಾತ್ ।
ಅಥರ್ವಶಿರಸಿ ಪ್ರೋಕ್ತೈರ್ಮಂತ್ರೈಃ ಸಿದ್ಧಾಂ ವಿಧಾನತಃ ॥ ೧೦೯ ॥

ತತಃ ಪ್ರಾಕ್ರಮದಿಷ್ಟಿಂ ತಾಂ ಪುತ್ರೀಯಾಂ ಪುತ್ರಕಾರಣಾತ್ ।
ಜುಹಾವ ಚಾಗ್ನೌ ತೇಜಸ್ವೀ ಮಂತ್ರದೃಷ್ಟೇನ ಕರ್ಮಣಾ ॥ ೧೧೦ ॥

ತತೋ ದೇವಾಃ ಸಗಂಧರ್ವಾಃ ಸಿದ್ಧಾಶ್ಚ ಪರಮರ್ಷಯಃ ।
ಭಾಗಪ್ರತಿಗ್ರಹಾರ್ಥಂ ವೈ ಸಮವೇತಾ ಯಥಾವಿಧಿ ॥ ೧೧೧ ॥

ತಾಃ ಸಮೇತ್ಯ ಯಥಾನ್ಯಾಯಂ ತಸ್ಮಿನ್ ಸದಸಿ ದೇವತಾಃ ।
ಅಬ್ರುವನ್ ಲೋಕಕರ್ತಾರಂ ಬ್ರಹ್ಮಾಣಂ ವಚನಂ ಮಹತ್॥ ೧೧೨ ॥

---

೧೦೮ - ೯. ಹಾಗೆಯೇ ಆಗಲಿ; ನಿನ್ನ ಕುಲವನ್ನು ಶಾಶ್ವತವಾಗಿ ನಿಲ್ಲಿಸುವ ನಾಲ್ಕುಜನ ಪುತ್ರರು ನಿನಗೆ ಹುಟ್ಟುವರು. ನಿನಗೆ ಮಕ್ಕಳಾಗುವ ನಿಮಿತ್ತ ವಾಗಿ ಅಥರ್ವವೇದದಲ್ಲಿ ಹೇಳಿರುವ ಮಂತ್ರಗಳಿಂದ ಪುತ್ರೋತ್ಪತ್ತಿಗೆ ಕಾರಣವಾದ ಪ್ರಬಲವಾದ, ಮತ್ತೊಂದು ಯಾಗವನ್ನು ವಿಧಿವತ್ತಾಗಿ ನಡೆಸುವೆನು" ಎಂದುತ್ತರವಿತ್ತನು ಬ್ರಾಹ್ಮಣಶ್ರೇಷ್ಠನಾದ ಋಷ್ಯಶೃಂಗಮುನಿ.

೧೧೦. ಎಂದು ಹೇಳಿ ತೇಜಸ್ವಿಯಾದ ಋಷ್ಯಶೃಂಗನು ಪುತ್ರ ಕಾಮೇಷ್ಟಿ ಎನಿಸಿಕೊಂಡ ಯಾಗವನ್ನು ಮಾಡಲಾರಂಭಿಸಿ, ಮನ್ತ್ರಶಾಸ್ತ್ರದಲ್ಲಿ ಕಂಡುಬರುವ ರೀತಿಯಲ್ಲಿ ಅಗ್ನಿಯಲ್ಲಿ ಹೋಮಮಾಡಿದನು.

೧೧೧. ಆಗ ಕ್ರಮವಾಗಿ ತಮ್ಮ ತಮ್ಮ ಹವಿರ್ಭಾಗಗಳನ್ನು ಸ್ವೀಕರಿಸುವ ಸಲುವಾಗಿ ದೇವತೆಗಳೂ, ಗಂಧರ್ವರೂ, ಸಿದ್ಧರೂ, ಮಹಾ ಋಷಿಗಳೂ ಅಲ್ಲಿ ಬಂದು ಸೇರಿದರು.

೧೧೨. ಎಲ್ಲಾ ದೇವತೆಗಳೂ ಆ ಸಭೆಯಲ್ಲಿ ಕ್ರಮವಾಗಿ ಸೇರಿದವರಾಗಿ ಲೋಕವನ್ನು ಸೃಷ್ಟಿಮಾಡುವ ಬ್ರಹ್ಮನನ್ನು ಕುರಿತು ಈರೀತಿ ಮಹತ್ವಪೂರಿತ ಮಾತನ್ನು ಹೇಳಿದರು.

ಭಗವನ್! ತ್ವತ್ಪ್ರಸಾದೇನ ರಾವಣೋ ನಾಮ ರಾಕ್ಷಸಃ ।
ಸರ್ವಾನ್ನೋ ಬಾಧತೇ ವೀರ್ಯಾಚ್ಛಾಸಿತುಂ ತಂ ನ ಶಕ್ನುಮಃ ॥
ತ್ವಯಾ ತಸ್ಮೈ ವರೋ ದತ್ತಃ ಪ್ರೀತೇನ ಭಗವನ್! ಪುರಾ ।
ಮಾನಯಂತಶ್ಚ ತಂ ನಿತ್ಯಂ ಸರ್ವಂ ತಸ್ಯ ಕ್ಷಮಾಮಹೇ ॥ ೧೧೪ ॥
ಉದ್ವೇಜಯತಿ ಲೋಕಾಂಸ್ತ್ರೀನುಚ್ಛ್ರಿತಾನ್ ದ್ವೇಷ್ಟಿ ದುರ್ಮತಿಃ ।
ಶಕ್ರಂ ತ್ರಿದಶರಾಜಾನಂ ಪ್ರಧರ್ಷಯಿತುಮಿಚ್ಛತಿ ॥ ೧೧೫ ॥
ಋಷೀನ್ ಯಕ್ಷಾನ್ ಸಗಂಧರ್ವಾನಸುರಾನ್ ಬ್ರಾಹ್ಮಣಾಂಸ್ತಥಾ ।
ಅತಿಕ್ರಾಮತಿ ದುರ್ಧರ್ಷೋ ವರದಾನೇನ ಮೋಹಿತಃ ॥ ೧೧೬ ॥
ನೈನಂ ಸೂರ್ಯಃ ಪ್ರತಪತಿ ಪಾರ್ಶ್ವೇ ವಾತಿ ನ ಮಾರುತಃ ।

---

೧೧೩. "ಬ್ರಹ್ಮದೇವನೇ! ನಿನ್ನ ಅನುಗ್ರಹದ ಪ್ರಭಾವದಿಂದುಂಟಾದ ಪರಾಕ್ರಮದಿಂದ ರಾವಣನೆಂಬ ರಾಕ್ಷಸನು ನಮ್ಮೆಲ್ಲರನ್ನು ಪೀಡಿಸುತ್ತಿರುವನು. ಅವನನ್ನಡಗಿಸಲು ನಾವು ಸಮರ್ಥರಲ್ಲದವರಾಗಿದ್ದೇವೆ.

೧೧೪. ಪೂಜ್ಯನೇ! ಹಿಂದೊಂದು ಸಮಯದಲ್ಲಿ ನೀನು ಸಂತೋಷಗೊಂಡು ಅವನಿಗೆ ವರವನ್ನು ಕೊಟ್ಟಿರುವಿಯಲ್ಲವೇ! ಅದನ್ನು ಗೌರವಿಸಿ ನಾವೂ ಸಹ ಅವನು ಮಾಡುವುದೆಲ್ಲವನ್ನೂ ಯಾವಾಗಲೂ ಸಹಿಸಿಕೊಂಡಿರುವೆವು.

೧೧೫. ಕೆಟ್ಟ ಬುದ್ಧಿಯುಳ್ಳ ಅವನು ಮೂರು ಲೋಕಗಳನ್ನೂ ಪೀಡಿಸುತ್ತಿರುವನು. ಲೋಕಪಾಲಕರನ್ನೂ ತೊಂದರೆ ಪಡಿಸುತ್ತಿರುವನು. ದೇವತೆಗಳಿಗೆಲ್ಲಾ ರಾಜನಾದ ಇಂದ್ರನನ್ನೂ ಸಹ ಇಂದ್ರಪದವಿಯಿಂದ ತಳ್ಳಲು ಪ್ರಯತ್ನಿಸುತ್ತಾನೆ.

೧೧೬. ನೀನು ಅವನಿಗೆ ವರ ಕೊಟ್ಟಿರುವ ಕಾರಣ ಯಾರಿಂದಲೂ ಎದುರಿಸಲ್ಪಡಲಾಗದವನಾಗಿ ಗರ್ವದಿಂದ ಕೊಬ್ಬಿ ಋಷಿಗಳನ್ನೂ, ಯಕ್ಷರನ್ನೂ, ಗಂಧರ್ವರನ್ನೂ, ಅಸುರರನ್ನೂ, ಹಾಗೆಯೇ ಬ್ರಾಹ್ಮಣರನ್ನೂ ಪೀಡಿಸುತ್ತಿದಾನೆ.

೧೧೭. ಅವನನ್ನು ಕಂಡು ಹೆದರಿ ಸೂರ್ಯನೂ ಸಹ ಅವನಿಗೆ ಬಿಸಿಲು

ಚಲೋರ್ಮಿಮಾಲೀ ತಂ ದೃಷ್ಟ್ವಾ ಸಮುದ್ರೋಽಪಿ ನ ಕಂಪತೇ॥
ಸುಮಹನ್ನೋ ಭಯಂ ತಸ್ಮಾದ್ರಾಕ್ಷಸಾದ್ಘೋರದರ್ಶನಾತ್ ।
ವಧಾರ್ಥಂ ತಸ್ಯ ಭಗವನ್ನುಪಾಯಂ ಕರ್ತುಮರ್ಹಸಿ ॥ ೧೧೮ ॥
ಏವಮುಕ್ತಃ ಸುರೈಃ ಸರ್ವೈಶ್ಚಿಂತಯಿತ್ವಾ ತತೋಽಬ್ರವೀತ್ ।
ಹಂತಾಯಂ ವಿದಿತಸ್ತಸ್ಯ ವಧೋಪಾಯೋ ದುರಾತ್ಮನಃ ॥ ೧೧೯ ॥
ತೇನ ಗಂಧರ್ವಯಕ್ಷಾಣಾಂ ದೇವದಾನವರಕ್ಷಸಾಮ್ ।
ಅವಧ್ಯೋಽಸ್ಮೀತಿ ವಾಗುಕ್ತಾ ತಥೇತ್ಯುಕ್ತಂ ಚ ತನ್ಮಯಾ ॥ ೧೨೦ ॥
ನಾಕೀರ್ತಯದವಜ್ಞಾನಾತ್ತದ್ರಕ್ಷೋ ಮಾನುಷಾಂಸ್ತದಾ ।

ತಾಕದಂತೆ ಬಹಳ ಮೃದುವಾಗಿ ಪ್ರಕಾಶಿಸುತ್ತಿರುವನು. ವಾಯುವೂ ಅವನ ಪಕ್ಕದಲ್ಲಿ ಧೈರ್ಯದಿಂದ ಸಂಚರಿಸಲಾರದವನಾಗಿದಾನೆ. ಯಾವಾಗಲೂ ಚಲಿಸುವ ಅಲೆಗಳ ಪಂಕ್ತಿಯುಳ್ಳ ಸಮುದ್ರನೂ ಸಹ ಅವನನ್ನು ಕಂಡು ಹೆದರಿ ಅಲುಗಾಡದವನಾಗುತ್ತಾನೆ.

೧೧೮. ಬ್ರಹ್ಮನೇ! ಭಯಂಕರ ನೋಟವುಳ್ಳ ಆ ರಾಕ್ಷಸನಿಂದ ನಮಗೆ ಉಂಟಾಗಿರುವ ಭಯವು ಹೇಳತೀರದಷ್ಟು ಹೆಚ್ಚಿನದು. ಆದಕಾರಣ ನೀನು ಅವನನ್ನು ಕೊಲ್ಲಲು ಹೇಗಾದರೂ ಉಪಾಯವನ್ನು ಮಾಡಬೇಕು."

೧೧೯. ಹೀಗೆ ಎಲ್ಲಾ ದೇವತೆಗಳಿಂದ ಹೇಳಲ್ಪಟ್ಟ ಬ್ರಹ್ಮನು ಸ್ವಲ್ಪ ಯೋಚನೆಮಾಡಿ ಬಳಿಕ ಹೇಳಿದನು. "ಆಹಾ! ಆ ದುರಾತ್ಮನನ್ನು ಕೊಲ್ಲುವ ಉಪಾಯವು ತೋರಿಬಂದಿತು.

೧೨೦. ದೇವತೆಗಳೇ! ವರವನ್ನು ಬೇಡುವ ಕಾಲದಲ್ಲಿ ಅವನು ಗಂಧರ್ವರಿಂದಲೂ, ಯಕ್ಷರಿಂದಲೂ, ದೇವತೆಗಳಿಂದಲೂ, ದಾನವರಿಂದಲೂ, ರಾಕ್ಷಸರಿಂದಲೂ ತನಗೆ ಮರಣವುಂಟಾಗಬಾರದೆಂಬ ಮಾತನ್ನು ಹೇಳಿದನು. ಹಾಗೆಯೇ ಆಗಲೆಂದು ನಾನೂ ಹೇಳಿದೆ.

೧೨೧. ಆ ಸಮಯದಲ್ಲಿ ಆ ರಾಕ್ಷಸನು ಅಲಕ್ಷ್ಯದಿಂದ ಮನುಷ್ಯರಿಂದಲೂ ತನಗೆ ಮರಣವುಂಟಾಗಬಾರದೆಂದು ಕೇಳಲಿಲ್ಲ. ಆದ್ದರಿಂದ ಮನುಷ್ಯರಿಂದ ಅವನು ಕೊಲ್ಲಲ್ಪಡತಕ್ಕವನಾಗಿರುವನು. ಇದೇ ಉಪಾಯ.

ತಸ್ಮಾತ್ಸ ಮಾನುಷಾದ್ವಧ್ಯೋ ಮೃತ್ಯುರ್ನಾನ್ಯೋಽಸ್ಯ ವಿದ್ಯತೇ॥ ೧೨೧ ॥
ಏತಚ್ಛ್ರುತ್ವಾ ಪ್ರಿಯಂ ವಾಕ್ಯಂ ಬ್ರಹ್ಮಣಾ ಸಮುದಾಹೃತಮ್ ।
ದೇವಾ ಮಹರ್ಷಯಃ ಸರ್ವೇ ಪ್ರಹೃಷ್ಟಾಸ್ತೇಽಭವಂಸ್ತದಾ॥ ೧೨೨ ॥
ಏತಸ್ಮಿನ್ನಂತರೇ ವಿಷ್ಣುರುಪಯಾತೋ ಮಹಾದ್ಯುತಿಃ ।
ಶಂಖಚಕ್ರಗದಾಪಾಣಿಃ ಪೀತವಾಸಾ ಜಗತ್ಪತಿಃ ॥ ೧೨೩ ॥
ತಪ್ತಹಾಟಕಕೇಯೂರೋ ವನ್ದ್ಯಮಾನಃ ಸುರೋತ್ತಮೈಃ ।
ಬ್ರಹ್ಮಣಾ ಚ ಸಮಾಗಮ್ಯ ತತ್ರ ತಸ್ಥೌ ಸಮಾಹಿತಃ ॥ ೧೨೪ ॥
ತಮಬ್ರುವನ್ ಸುರಾಃ ಸರ್ವೇ ಸಮಭಿಷ್ಟೂಯ ಸಂನತಾಃ ।
ತ್ವಾಂ ನಿಯೋಕ್ಷ್ಯಾಮಹೇ ವಿಷ್ಣೋ! ಲೋಕಾನಾಂ ಹಿತಕಾಮ್ಯಯಾ॥
ರಾಜ್ಞೋ ದಶರಥಸ್ಯ ತ್ವಮಯೋಧ್ಯಾಧಿಪತೇರ್ವಿಭೋ! ।

ಮನುಷ್ಯರನ್ನು ಬಿಟ್ಟು ಬೇರೆ ಯಾರೂ ಇವನನ್ನು ನಾಶಮಾಡಲಾರರು ."

೧೨೨. ಬ್ರಹ್ಮನು ಹೇಳಿದ ಈ ಪ್ರಿಯಕರವಾದ ಮಾತನ್ನು ಕೇಳಿ ಅಲ್ಲಿದ್ದ ಎಲ್ಲಾ ದೇವತೆಗಳೂ, ಋಷಿಗಳೂ ಅತಿಯಾಗಿ ಸಂತೋಷಪಟ್ಟರು.

೧೨೩. ಆ ಸಮಯದಲ್ಲಿ ಪೀತಾಂಬರವನ್ನುಟ್ಟು ಕೈಗಳಲ್ಲಿ ಶಂಖ, ಚಕ್ರ, ಗದೆಗಳನ್ನು ಹಿಡಿದವನಾಗಿ ಯಾವ ತೇಜಸ್ಸಿಗೂ ಸೋಲದ ಕಾಂತಿಯಿಂದ ಕೂಡಿದ ಜಗತ್ಪತಿಯಾದ ಶ್ರೀ ವಿಷ್ಣುವು ಅಲ್ಲಿಗೆ ಬಂದನು.

೧೨೪. ದೇವಶ್ರೇಷ್ಠರೆಲ್ಲರೂ ಎದ್ದು ನಮಸ್ಕರಿಸುತ್ತಿರಲು ಮೇಲಾದ ಚಿನ್ನದ ಭುಜಕೀರೀಟವನ್ನು ಧರಿಸಿದ ಅವನು ಮಾಡಬೇಕಾಗಿರುವ ಕಾರ್ಯದಲ್ಲಿ ಅವಧಾನವುಳ್ಳವನಾಗಿ ಬ್ರಹ್ಮನ ಬಳಿ ಹೋಗಿ ನಿಂತನು.

೧೨೫. ಬ್ರಹ್ಮನೇ ಮೊದಲಾಗಿ ಎಲ್ಲಾ ದೇವತೆಗಳೂ ಸಾಷ್ಟಾಂಗ ನಮಸ್ಕಾರ ಮಾಡಿ ಮತ್ತು ಅವನನ್ನು ಬಹಳವಾಗಿ ಸ್ತುತಿಸಿ ವಿನಯದಿಂದ ವಿಜ್ಞಾಪಿಸಿದರು; ಹೇ ವಿಷ್ಣುವೇ! ಲೋಕದ ಕಲ್ಯಾಣಗಳನ್ನು ಕೋರಿ ನಾವು ಈಗ ನಿನ್ನನ್ನು ಒಂದು ಕಾರ್ಯದಲ್ಲಿ ಪ್ರೋತ್ಸಾಹಿಸುವಂತಹವರಾಗಿದ್ದೇವೆ.

೧೨೬-೭. ಸರ್ವವ್ಯಾಪಿಯಾದವನೇ ! ಧರ್ಮಗಳನ್ನರಿತವನೂ,

ಧರ್ಮಜ್ಞಸ್ಯ ವದಾನ್ಯಸ್ಯ ಮಹರ್ಷಿಸಮತೇಜಸಃ ॥ ೧೨೬ ॥
ತಸ್ಯ ಭಾರ್ಯಾಸು ತಿಸೃಷು ಹ್ರೀಶ್ರೀಕೀರ್ತ್ಯುಪಮಾಸು ಚ ।
ವಿಷ್ಣೋ! ಪುತ್ರತ್ವಮಾಗಚ್ಛ ಕೃತ್ವಾತ್ಮಾನಂ ಚತುರ್ವಿಧಮ್॥ ೧೨೭ ॥
ತತ್ರ ತ್ವಂ ಮಾನುಷೋ ಭೂತ್ವಾ ಪ್ರವೃದ್ಧಂ ಲೋಕಕಂಟಕಮ್ ।
ಅವಧ್ಯಂ ದೈವತೈರ್ವಿಷ್ಣೋ! ಸಮರೇ ಜಹಿ ರಾವಣಮ್ ॥ ೧೨೮ ॥
ತ್ವಂ ಗತಿಃ ಪರಮಾ ದೇವ ಸರ್ವೇಷಾಂ ನಃ ಪರಂತಪ! ।
ವಧಾಯ ದೇವಶತ್ರೂಣಾಂ ನೃಣಾಂ ಲೋಕೇ ಮನಃ ಕುರು॥ ೧೨೯ ॥
ಏವಮುಕ್ತಸ್ತು ದೇವೇಶೋ ವಿಷ್ಣುಸ್ತ್ರಿದಶಪುಂಗವಃ ।
ಅಬ್ರವೀತ್ತ್ರಿದಶಾನ್ ಸರ್ವಾನ್ ಸಮೇತಾನ್ ಧರ್ಮಸಂಹಿತಾನ್॥

ಉದಾರ ಗುಣವುಳ್ಳವನೂ, ಮಹರ್ಷಿಗೆ ಸಮವಾದ ತೇಜಸ್ಸುಳ್ಳವನೂ ಆದ ದಶರಥನೆಂಬುವನು ಅಯೋಧ್ಯೆಗೆ ರಾಜನಾಗಿ ಆಳುತ್ತಿರುವನಲ್ಲವೇ ? ಮೂರ್ತಿ ಮತ್ತಾಗಿ ಇರುವ ನಾಚಿಕೆ, ಸಂಪತ್ತು, ಕೀರ್ತಿಗಳನ್ನು ಹೋಲುವ ಅವನ ಮೂರುಜನ ಹೆಂಡತಿಯರಲ್ಲಿ ನಿನ್ನನ್ನು ನಾಲ್ಕು ಭಾಗವಾಗಿ ಮಾಡಿಕೊಂಡು ಮಗನಾಗಿ ಅವತರಿಸುವನಾಗು.

೧೨೮. ವಿಷ್ಣುವೇ ! ದಶರಥನ ಮನೆಯಲ್ಲಿ ಮನುಷ್ಯನಾಗಿ ಅವತರಿಸಿ ಬಹಳ ಕೊಬ್ಬಿ ಲೋಕವನ್ನು ಹಿಂಸಿಸುತ್ತಿರುವ, ದೇವತೆಗಳಿಂದ ಕೊಲ್ಲಲು ಅಶಕ್ಯನಾದ ರಾವಣನನ್ನು ಯುದ್ಧದಲ್ಲಿ ನೀನು ಸಂಹಾರ ಮಾಡಬೇಕು.

೧೨೯. ದೇವನೇ ! ನೀನೇ ನಮಗೆಲ್ಲರಿಗೂ ಗತಿ. ಆದುದರಿಂದ ಶತ್ರುಗಳನ್ನು ಬೂದಿಮಾಡುವ ಶಕ್ತಿಯುಳ್ಳವನೇ! ದೇವತೆಗಳಿಗೆ ಶತ್ರುಗಳಾದ ರಾವಣನೇ ಮೊದಲಾದ ರಾಕ್ಷಸರನ್ನು ಕೊಲ್ಲಲು ಮನುಷ್ಯಲೋಕದಲ್ಲಿ ಅವತರಿಸುವ ಸಂಕಲ್ಪವನ್ನು ಮಾಡುವನಾಗು."

೧೩೦. ಈ ರೀತಿ ದೇವತೆಗಳಿಂದ ಪ್ರಾರ್ಥಿಸಲ್ಪಟ್ಟವನಾಗಿ ದೇವದೇವನೂ ಸರ್ವರಕ್ಷಕನೂ ಆದ ವಿಷ್ಣುವು ಮೊರೆಯಿಟ್ಟ ಬ್ರಹ್ಮನೇಮೊದಲಾದ ದೇವತೆಗಳೆಲ್ಲರನ್ನು ಕುರಿತು ಈ ರೀತಿ ಹೇಳಿದನು.

ಭಯಂ ತ್ಯಜತ ಭದ್ರಂ ವೋ ಹಿತಾರ್ಥಂ ಯುಧಿ ರಾವಣಮ್ ।
ಸಪುತ್ರಪೌತ್ರಂ ಸಾಮಾತ್ಯಂ ಸಮಿತ್ರಜ್ಞಾತಿಬಾಂಧವಮ್ ॥ ೧೩೧ ॥
ಹತ್ವಾ ಕ್ರೂರಂ ದುರಾತ್ಮಾನಂ ದೇವರ್ಷೀಣಾಂ ಭಯಾವಹಮ್ ।
ದಶ ವರ್ಷ ಸಹಸ್ರಾಣಿ ದಶವರ್ಷಶತಾನಿ ಚ ।
ವತ್ಸ್ಯಾಮಿ ಮಾನುಷೇ ಲೋಕೇ ಪಾಲಯನ್ ಪೃಥಿವೀಮಿಮಾಮ್ ॥
ಏವಂ ದತ್ವಾ ವರಂ ದೇವೋ ದೇವಾನಾಂ ವಿಷ್ಣುರಾತ್ಮವಾನ್ ।
ಅನ್ತರ್ಧಾನಂ ಗತೋ ದೇವೈಃ ಪೂಜ್ಯಮಾನೋ ಮಹರ್ಷಿಭಿಃ ॥ ೧೩೩ ॥
ತತೋ ವೈ ಯಜಮಾನಸ್ಯ ಪಾವಕಾದತುಲಪ್ರಭಮ್ ।
ಪ್ರಾದುರ್ಭೂತಂ ಮಹದ್ಭೂತಂ ಮಹಾವೀರ್ಯಂ ಮಹಾಬಲಮ್ ॥
ಶುಭಲಕ್ಷಣಸಂಪನ್ನಂ ದಿವ್ಯಾಭರಣಭೂಷಿತಮ್ ।

೧೩೧-೨. "ದೇವತೆಗಳೇ ! ಭಯವನ್ನು ಬಿಡಿ. ನಿಮಗೆ ಕಲ್ಯಾಣವಾಗಲಿ. ಲೋಕಹಿತಕ್ಕಾಗಿ ದೇವತೆಗಳಿಗೂ, ಋಷಿಗಳಿಗೂ ಭಯವನ್ನುಂಟುಮಾಡುವ ದುರಾತ್ಮನಾದ, ಮತ್ತು ಕ್ರೂರಿಯಾದ ಆ ರಾವಣನನ್ನು ಅವನ ಮಕ್ಕಳು, ಮರಿಮಕ್ಕಳು, ಮಂತ್ರಿಗಳು, ಸ್ನೇಹಿತರು, ಜ್ಞಾತಿಗಳು, ಬಂಧುಗಳು ಮೊದಲಾದವರೊಡನೆ ಕೊಂದುಬಿಡುವೆನು. ಅವನನ್ನು ಕೊಂದು ಈ ಭೂಲೋಕವನ್ನು ಕಾಪಾಡುತ್ತಾ ಹನ್ನೊಂದುಸಾವಿರ ವರುಷಗಳ ಕಾಲ ಮನುಷ್ಯಲೋಕದಲ್ಲಿಯೇ ಇರುವೆನು."

೧೩೩. ಎಲ್ಲರಿಗೂ ಸ್ವಾಮಿಯಾದ ವಿಷ್ಣು ಪರಮಾತ್ಮನು ದೇವತೆಗಳಿಗೆ ಈ ರೀತಿ ವರವನ್ನು ಕೊಟ್ಟು ದೇವತೆಗಳಿಂದಲೂ, ಮಹರ್ಷಿಗಳಿಂದಲೂ ಸ್ತುತಿಸಲ್ಪಡುತ್ತಲೇ ಅದೃಶ್ಯನಾದನು.

೧೩೪-೫. ಅವನು ಅದೃಶ್ಯನಾದ ಬಳಿಕ ದಶರಥನು ಹೋಮ ಮಾಡಿದ ಅಗ್ನಿಕುಂಡದಿಂದ ಅತಿಯಾದ ತೇಜಸ್ಸುಳ್ಳ ದೊಡ್ಡ ವ್ಯಕ್ತಿಯೊಂದು ಮೇಲೆದ್ದಿತು. ಅತಿಯಾದ ಪರಾಕ್ರಮ ಮತ್ತು ಬಲವುಳ್ಳದ್ದಾಗಿರುವಂತಿತ್ತು ಆ ವ್ಯಕ್ತಿ. ಅಲ್ಲದೇ ಮಂಗಳಕರವಾದ ಲಕ್ಷಣಗಳಿಂದ ಶೋಭಿಸು

ದಿವಾಕರಸಮಾಕಾರಂ ದೀಪ್ತಾನಲಶಿಖೋಪಮಮ್ || ೧೩೫ ||
ದಿವ್ಯಾಂ ಪಾಯಸಸಂಪೂರ್ಣಾಂ ಪಾತ್ರೀಂ ಪತ್ನೀಮಿವ ಪ್ರಿಯಾಮ್ |
ಪ್ರಗೃಹ್ಯ ವಿಪುಲಾಂ ದೋರ್ಭ್ಯಾಂ ಸ್ವಯಂ ಮಾಯಾಮಯೀಮಿವ ||
ಸಮವೇಕ್ಷ್ಯಾಬ್ರವೀದ್ವಾಕ್ಯಮಿದಂ ದಶರಥಂ ನೃಪಮ್ |
ಪ್ರಾಜಾಪತ್ಯಂ ನರಂ ವಿದ್ಧಿ ಮಾಮಿಹಾಭ್ಯಾಗತಂ ನೃಪ! || ೧೩೭ ||
ರಾಜನ್! ಅರ್ಚಯತಾ ದೇವಾನದ್ಯ ಪ್ರಾಪ್ತಮಿದಂ ತ್ವಯಾ|| ೧೩೮ ||
ಇದಂ ತು ನೃಪಶಾರ್ದೂಲ! ಪಾಯಸಂ ದೇವನಿರ್ಮಿತಮ್ |
ಪ್ರಜಾಕರಂ ಗೃಹಾಣ ತ್ವಂ ಧನ್ಯಮಾರೋಗ್ಯವರ್ಧನಮ್|| ೧೩೯ ||
ಭಾರ್ಯಾಣಾಮನುರೂಪಾಣಾಮಶ್ನೀತೇತಿ ಪ್ರಯಚ್ಛ ವೈ |
ತಾಸು ತ್ವಂ ಪ್ರಾಪ್ಸ್ಯಸೇ ಪುತ್ರಾನ್ ಯದರ್ಥಂ ಯಜಸೇ ನೃಪ!||

ತ್ತ ದಿವ್ಯಾಭರಣಗಳಿಂದಲಂಕೃತವಾದ ಆ ವ್ಯಕ್ತಿಯು ಸೂರ್ಯನಿಗೆ ಸಮವಾಗಿಯೂ, ಉರಿಯುವ ಬೆಂಕಿಜ್ವಾಲೆಯನ್ನು ಹೋಲುವಹಾಗೂ ಇದ್ದಿತು.

೧೩೬-೭. ದಿವ್ಯಪಾಯಸದಿಂದ ತುಂಬಿರುವ ಅತ್ಯಾಶ್ಚರ್ಯಕರವಾದ ದೊಡ್ಡ ಪಾತ್ರೆಯೊಂದನ್ನು ತೋಳುಗಳಿಂದ ಹಿಡಿದುಕೊಂಡು ಎದ್ದ ಆ ವ್ಯಕ್ತಿಯು ದಶರಥರಾಜನನ್ನು ನೋಡಿ ಈ ಮಾತನ್ನು ಹೇಳಿತು. "ರಾಜನೇ ನನ್ನನ್ನು ಬ್ರಹ್ಮದೇವನ ಬಳಿಯಿಂದ ಬಂದ ಪುರುಷನನ್ನಾಗಿ ತಿಳಿ.

೧೩೮. ರಾಜನೇ! ದೇವತೆಗಳನ್ನು ಪೂಜಿಸಿದುದರ ಫಲವಾಗಿ ನಿನಗೀಗ ಇದು ಲಭಿಸಿದೆ.

೧೩೯. ರಾಜಶ್ರೇಷ್ಠನೇ! ವಿಷ್ಣು ನಿರ್ಮಿತವಾದ ಈ ಪಾಯಸವು ನಿನಗೆ ಸಂತತಿಯನ್ನೂ, ಹಣವನ್ನೂ, ಆರೋಗ್ಯವನ್ನೂ ಉಂಟುಮಾಡುವಂತಹದು. ಇದನ್ನು ಸ್ವೀಕರಿಸು.

೧೪೦ 'ಭುಜಿಸಿರೆಂದು ಇದನ್ನು ನಿನ್ನ ಅನುರೂಪರಾದ ಹೆಂಡತಿಯರಿಗೆ ಕೊಡು. ಅಯ್ಯಾ ರಾಜನೇ! ಯಾವ ಮಕ್ಕಳನ್ನುದ್ದೇಶಿಸಿ ನೀನು ಯಾಗ ಮಾಡುತ್ತಿರುವೆಯೋ ಆ ಮಕ್ಕಳನ್ನು ಅವರಲ್ಲಿ ನೀನು ಪಡೆಯುವಿ."

ತತೋ ದಶರಥಃ ಪ್ರಾಪ್ಯ ಪಾಯಸಂ ದೇವನಿರ್ಮಿತಮ್ ।
ಬಭೂವ ಪರಮಪ್ರೀತಃ ಪ್ರಾಪ್ಯ ವಿತ್ತಮಿವಾಧನಃ ॥ ೧೪೧ ॥
ಕೌಸಲ್ಯಾಯೈ ನರಪತಿಃ ಪಾಯಸಾರ್ಧಂ ದದೌ ತದಾ ।
ಅರ್ಧಾದರ್ಧಂ ದದೌ ಚಾಪಿ ಸುಮಿತ್ರಾಯೈ ನರಾಧಿಪಃ ॥ ೧೪೨ ॥
ಕೈಕೇಯ್ಯೈ ಚಾವಶಿಷ್ಟಾರ್ಧಂ ದದೌ ಪುತ್ರಾರ್ಥಕಾರಣಾತ್ ।
ಪ್ರದದೌ ಚಾವಶಿಷ್ಟಾರ್ಧಂ ಪಾಯಸಸ್ಯಾಮೃತೋಪಮಮ್ ।
ಅನುಚಿನ್ತ್ಯ ಸುಮಿತ್ರಾಯೈ ಪುನರೇವ ಮಹೀಪತಿಃ ॥ ೧೪೩ ॥
ತಾಸ್ತ್ವೇತತ್ಪಾಯಸಂ ಪ್ರಾಪ್ಯ ನರೇನ್ದ್ರಸ್ಯೋತ್ತಮಾಃ ಸ್ತ್ರಿಯಃ ।
ಸಂಮಾನಂ ಮೇನಿರೇ ಸರ್ವಾಃ ಪ್ರಹರ್ಷೋದಿತಚೇತಸಃ॥ ೧೪೪ ॥
ತತಸ್ತು ತಾಃ ಪ್ರಾಶ್ಯ ತದುತ್ತಮಸ್ತ್ರಿಯೋ
ಮಹೀಪತೇರುತ್ತಮಪಾಯಸಂ ಪೃಥಕ್

---

೧೪೧. ಅನಂತರ ಭಗವನ್ನಿರ್ಮಿತವಾದ ಆ ಪಾಯಸವನ್ನು ಜ್ಯೋತಿಸ್ವರೂಪನಾದ ಆ ಪುರುಷನಿಂದ ಪಡೆದುಕೊಂಡು ದರಿದ್ರನು ನಿಧಿಯನ್ನು ಹೊಂದಿ ಆನಂದಪಡುವಹಾಗೆ ದಶರಥನು ಅತ್ಯಾನಂದವನ್ನು ಹೊಂದಿದನು.

೧೪೨-೩. ಮತ್ತು ಮಕ್ಕಳಾಗುವ ಸಲುವಾಗಿ ಕೌಸಲ್ಯೆಗೆ ಪಾಯಸದಲ್ಲಿ ಅರ್ಧಭಾಗವನ್ನು ಕೊಟ್ಟನು. ಉಳಿದದ್ದನ್ನು ಅರ್ಧಮಾಡಿ ಒಂದನ್ನು ಸುಮಿತ್ರೆಗೆ ಕೊಟ್ಟನು. ಮಿಕ್ಕ ಭಾಗವನ್ನೂ ಅರ್ಧಮಾಡಿ ಒಂದರ್ಧವನ್ನು ಕೈಕೇಯಿಗೆ ಕೊಟ್ಟನಲ್ಲದೇ ಯೋಚನೆಮಾಡಿ ಅಮೃತರಸದಂತಿರುವ ಉಳಿದ ಅರ್ಧ ಭಾಗವನ್ನೂ ಮತ್ತೆ ಸುಮಿತ್ರೆಗೇ ಕೊಟ್ಟನು.

೧೪೪. ಇಂತಹ ಪಾಯಸವನ್ನು ದಶರಥನ ಹೆಂಡತಿಯರು ಕೊಂಡಾಟದೊಡನೆ ಸ್ವೀಕರಿಸಿ ತಮ್ಮ ಮನೋರಥವು ಸಿದ್ಧಿಸಿತೆಂದು ಭಾವಿಸಿ ಸಂತೋಷಸಾಗರದಲ್ಲಿ ಮುಳುಗಿದವರಾದರು.

೧೪೫. ಹೀಗೆ ಬೇರೆ ಬೇರೆಯಾಗಿ ರಾಜನಿಂದ ಪಡೆದುಕೊಂಡ ಆ ಪರಮೋತ್ಕೃಷ್ಟವಾದ ಪಾಯಸವನ್ನು ಭುಜಿಸಿ ರಾಜಪತ್ನಿಯರು ಮೂವರೂ

ಹುತಾಶನಾದಿತ್ಯಸಮಾನತೇಜಸೋಽ
ಚಿರೇಣ ಗರ್ಭಾನ್ ಪ್ರತಿಪೇದಿರೇ ತದಾ || ೧೪೫ ||
ಪುತ್ರತ್ವಂ ಚ ಗತೇ ವಿಷ್ಣೌ ರಾಜ್ಞಸ್ತಸ್ಯ ಮಹಾತ್ಮನಃ ।
ಉವಾಚ ದೇವತಾಃ ಸರ್ವಾಃ ಸ್ವಯಂಭೂರ್ಭಗವಾನಿದಮ್ || ೧೪೬ ||
ಸತ್ಯಸಂಧಸ್ಯ ವೀರಸ್ಯ ಸರ್ವೇಷಾಂ ನೋ ಹಿತೈಷಿಣಃ ।
ವಿಷ್ಣೋಃ ಸಹಾಯಾನ್ ಬಲಿನಃ ಸೃಜಧ್ವಂ ಕಾಮರೂಪಿಣಃ || ೧೪೭ ||
ತೇ ತಥೋಕ್ತಾ ಭಗವತಾ ತತ್ಪ್ರತಿಶ್ರುತ್ಯ ಶಾಸನಮ್ ।
ಜನಯಾಮಾಸುರೇವಂ ತೇ ಪುತ್ರಾನ್ ವಾನರರೂಪಿಣಃ || ೧೪೮ ||
ನಿರ್ವೃತ್ತೇ ತು ಕ್ರತೌ ತಸ್ಮಿನ್ ಹಯಮೇಧೇ ಮಹಾತ್ಮನಃ ।
ಪ್ರತಿಗೃಹ್ಯ ಸುರಾ ಭಾಗಾನ್ಪ್ರತಿಜಗ್ಮುರ್ಯಥಾಗತಮ್ || ೧೪೯ ||

ಸ್ವಲ್ಪಕಾಲದಲ್ಲಿಯೇ ಗರ್ಭವತಿಯರಾಗಿ ಅಗ್ನಿ ಸೂರ್ಯರಿಗೆ ಸಮವಾದ ಕಾಂತಿಯನ್ನು ಹೊಂದಿ ಬಹಳವಾಗಿ ಶೋಭಿಸಿದರು.

೧೪೬. ಶ್ರೀಮನ್ನಾರಾಯಣನು ಮಹಾತ್ಮನಾದ ಆ ದಶರಥನಿಗೆ ಮಗನಾಗಿ ಅವತರಿಸುವುದಾಗಿರಲು ಬ್ರಹ್ಮದೇವನು ಎಲ್ಲಾ ದೇವತೆಗಳನ್ನು ಕುರಿತ ಇಂತೆಂದನು.

೧೪೭. "ದೇವತೆಗಳೇ! ಆಡಿದ ಮಾತು ತಪ್ಪದ, ವೀರನಾದ, ನಮ್ಮೆಲ್ಲರಿಗೂ ಹಿತವನ್ನು ಕೋರಿ ಭೂಲೋಕದಲ್ಲಿ ಮನುಷ್ಯನಾಗಿ ಅವತರಿಸುವ ವಿಷ್ಣುವಿಗೆ ಸಹಾಯಕರಾಗಿ ನೀವೆಲ್ಲರೂ ಇಷ್ಟಬಂದರೂಪವನ್ನು ಹೊಂದುವ ಸಾಮರ್ಥ್ಯವುಳ್ಳವರೂ ಪರಾಕ್ರಮಶಾಲಿಗಳೂ ಆದವರನ್ನು ಉಂಟುಮಾಡಿ."

೧೪೮. ಆರೀತಿ ಬ್ರಹ್ಮದೇವನಿಂದ ಹೇಳಲ್ಪಟ್ಟ ದೇವತೆಗಳು ಬ್ರಹ್ಮನ ಆಜ್ಞೆಯನ್ನು ಒಪ್ಪಿಕೊಂಡು ಅವನ ಆಜ್ಞೆಗೆ ತಕ್ಕಂತೆ ವಾನರ ರೂಪವನ್ನುಳ್ಳ ಪ್ರಜೆಗಳನ್ನು ಉಂಟುಮಾಡಿದರು.

೧೪೯. ಮಹಾತ್ಮನಾದ ದಶರಥನ ಅಶ್ವಮೇಧಯಾಗವು ಪೂರ್ತಿಯಾಗಿ ನಡೆದಬಳಿಕ ದೇವತೆಗಳೆಲ್ಲರೂ ತಮ್ಮ ಹವಿರ್ಭಾಗಗಳನ್ನು ಹೊಂದಿದವರಾಗಿ ದೇವಲೋಕಕ್ಕೆ ಹೊರಟರು.

ಸಮಾಪ್ತದೀಕ್ಷಾನಿಯಮಃ ಪತ್ನೀಗಣಸಮನ್ವಿತಃ |
ಪ್ರವಿವೇಶ ಪುರೀಂ ರಾಜಾ ಸಭೃತ್ಯಬಲವಾಹನಃ || ೧೫೦ ||
ತತಶ್ಚ ದ್ವಾದಶೇ ಮಾಸೇ ಚೈತ್ರೇ ನಾವಮಿಕೇ ತಿಥೌ |
ನಕ್ಷತ್ರೇಽದಿತಿದೈವತ್ಯೇ ಸ್ವೋಚ್ಚಸಂಸ್ಥೇಷು ಪಞ್ಚಸು || ೧೫೧ ||
ಗ್ರಹೇಷು ಕರ್ಕಟೇ ಲಗ್ನೇ ವಾಕ್ಪತಾವಿಂದುನಾ ಸಹ |
ಪ್ರೋದ್ಯಮಾನೇ ಜಗನ್ನಾಥಂ ಸರ್ವಲೋಕನಮಸ್ಕೃತಮ್ || ೧೫೨ ||
ಕೌಸಲ್ಯಾಽಜನಯದ್ರಾಮಂ ಸರ್ವಲಕ್ಷಣಸಂಯುತಮ್ |
ವಿಷ್ಣೋರರ್ಧಂ ಮಹಾಭಾಗಂ ಪುತ್ರಮೈಕ್ಷ್ವಾಕವರ್ಧನಮ್ || ೧೫೩ ||
ಭರತೋ ನಾಮ ಕೈಕೇಯ್ಯಾಂ ಜಜ್ಞೇ ಸತ್ಯಪರಾಕ್ರಮಃ |
ಸಾಕ್ಷಾದ್ವಿಷ್ಣೋಶ್ಚತುರ್ಭಾಗಃ ಸರ್ವೈಃ ಸಮುದಿತೋ ಗುಣೈಃ||೧೫೪||

---

೧೫೦. ರಾಜನೂ ಎಲ್ಲಾ ವೈದಿಕ ಕಾರ್ಯಗಳನ್ನು ಸರಿಯಾಗಿ ನೆರವೇರಿಸಿ ಅವಭೃತಸ್ನಾನವನ್ನು ಮಾಡಿ ತನ್ನ ಹೆಂಡತಿಯರೊಡನೆ ಕೂಡಿ ಪರಿವಾರ, ಸೈನ್ಯ, ವಾಹನಗಳೊಂದಿಗೆ ಯಾಗಶಾಲೆಯನ್ನು ಬಿಟ್ಟು ಪಟ್ಟಣವನ್ನು ಸೇರಿದನು.

೧೫೧-೩. ಯಾಗವು ಪೂರ್ತಿಯಾಗಿ ಹನ್ನೊಂದು ತಿಂಗಳು ಕಳೆಯಲು ಹನ್ನೆರಡನೆಯ ತಿಂಗಳಿನಲ್ಲಿ ಚೈತ್ರಮಾಸ ಶುಕ್ಲಪಕ್ಷ ನವಮೀ ತಿಥಿಯಲ್ಲಿ ಪುನರ್ವಸು ನಕ್ಷತ್ರದಿಂದ ಕೂಡಿದ ಕರ್ಕಟ ಲಗ್ನದಲ್ಲಿ ಐದು ಗ್ರಹಗಳು ಉಚ್ಚಸ್ಥಾನದಲ್ಲಿರಲು, ಲಗ್ನದಲ್ಲಿ ಚಂದ್ರನೊಂದಿಗೆ ಗುರುವು ಸೇರಿರುವಾಗ ಎಲ್ಲರಿಂದಲೂ ನಮಸ್ಕರಿಸಲ್ಪಡತಕ್ಕವನೂ ಜಗತ್ತಿಗೆ ನಾಥನೂ ಎಲ್ಲಾ ಶುಭಲಕ್ಷಣಗಳಿಂದ ಕೂಡಿದವನೂ ವಿಷ್ಣುವಿನ ಅರ್ಧ ಅಂಶವಾಗಿರುವವನೂ ಇಕ್ಷ್ವಾಕು ವಂಶವನ್ನು ಬೆಳಸಿ ಬೆಳಗಿಸುವ ಮಹಾಭಾಗ್ಯಶಾಲಿಯೂ ಆದ ರಾಮನೆಂಬ ಮಗನನ್ನು ಕೌಸಲ್ಯಾದೇವಿಯು ಹಡೆದಳು.

೧೫೪. ನಿಜವಾದ ಪರಾಕ್ರಮವುಳ್ಳ, ಎಲ್ಲಾ ಗುಣಗಳಿಂದ ತುಂಬಿದ, ವಿಷ್ಣುವಿನ ಅಂಶದಲ್ಲಿ ನಾಲ್ಕರಲ್ಲಿ ಒಂದಂಶವುಳ್ಳ ಭರತನೆಂಬುವನು ಕೈಕೇಯಿಯಲ್ಲಿ ಹುಟ್ಟಿದನು.

ಅಥ ಲಕ್ಷ್ಮಣಶತ್ರುಘ್ನೌ ಸುಮಿತ್ರಾಜನಯತ್ಸುತೌ ।
ಸರ್ವಾಸ್ತ್ರಕುಶಲೌ ವೀರೌ ವಿಷ್ಣೋರರ್ಧಸಮನ್ವಿತೌ ॥ ೧೫೫ ॥

ಪುಷ್ಯೇ ಜಾತಸ್ತು ಭರತೋ ಮೀನಲಗ್ನೇ ಪ್ರಸನ್ನಧೀಃ ।
ಸಾರ್ಪೇ ಜಾತೌ ತು ಸೌಮಿತ್ರೀ ಕುಲೀರೇಽಭ್ಯುದಿತೇ ರವೌ ॥

ರಾಜ್ಞಃ ಪುತ್ರಾ ಮಹಾತ್ಮಾನಶ್ಚತ್ವಾರೋ ಜಜ್ಞಿರೇ ಪೃಥಕ್ ।
ಗುಣವಂತೋಽನುರೂಪಾಶ್ಚ ರುಚ್ಯಾ ಪ್ರೋಷ್ಠಪದೋಪಮಾಃ ॥

ಜಗುಃ ಕಲಂ ಚ ಗಂಧರ್ವಾಃ ನನೃತುಶ್ಚಾಪ್ಸರೋಗಣಾಃ ।
ದೇವದುಂದುಭಯೋ ನೇದುಃ ಪುಷ್ಪವೃಷ್ಟಿಶ್ಚ ಖಾಚ್ಚ್ಯುತಾ ॥ ೧೫೮ ॥
ಉತ್ಸವಶ್ಚ ಮಹಾನಾಸೀದಯೋಧ್ಯಾಯಾಂ ಜನಾಕುಲಃ ॥ ೧೫೯ ॥

---

೧೫೫. ಅನಂತರ ವೀರರಾದ, ಎಲ್ಲಾ ಅಸ್ತ್ರವಿದ್ಯೆಗಳಲ್ಲಿ ಪ್ರವೀಣರಾದ, ವಿಷ್ಣುವಿನ ಅಂಶವಾಗಿರುವ ಲಕ್ಷ್ಮಣ ಶತ್ರುಘ್ನರೆಂಬ ಮಕ್ಕಳನ್ನು ಸುಮಿತ್ರೆಯು ಹೆತ್ತಳು.

೧೫೬. ಕಳಂಕರಹಿತವಾದ ಬುದ್ಧಿಯುಳ್ಳ ಭರತನು ಪುಷ್ಯ ನಕ್ಷತ್ರ ದಿಂದ ಕೂಡಿದ ಮೀನ ಲಗ್ನದಲ್ಲಿ ಜನಿಸಿದನು. ಲಕ್ಷ್ಮಣ ಮತ್ತು ಶತ್ರುಘ್ನರು ಆಶ್ಲೇಷ ನಕ್ಷತ್ರದಿಂದ ಕೂಡಿದ ಕರ್ಕಟ ಲಗ್ನದಲ್ಲಿ ಹುಟ್ಟಿದರು.

೧೫೭. ಹೀಗೆ ದಶರಥ ಮಹಾರಾಜನಿಗೆ, ಮಹಾತ್ಮರಾದ ಒಳ್ಳೆಯ ಗುಣಗಳಿಂದ ತುಂಬಿದ ಒಬ್ಬರನ್ನೊಬ್ಬರು ಹೋಲುವ ರೂಪವುಳ್ಳ, ಕಾಂತಿ ಯಿಂದ ಪೂರ್ವಾಷಾಢಾ ನಕ್ಷತ್ರವನ್ನು ಹೋಲುವಂತಹ ನಾಲ್ಕು ಜನ ಪುತ್ರರು ಹುಟ್ಟಿದರು.

೧೫೮. ಅವರು ಹುಟ್ಟಿದಾಗ ಗಂಧರ್ವರು ಇಂಪಾಗಿ ಹಾಡಿದರು. ಅಪ್ಸರೆಯರು ಆನಂದದಿಂದ ನರ್ತನ ಮಾಡಿದರು. ದೇವತಗಳ ದುಂದುಭಿ ವಾದ್ಯಗಳು ಮೊಳಗಿದವು. ಆಕಾಶದಿಂದ ಪುಷ್ಪವೃಷ್ಟಿಯು ಸುರಿಯಿತು.

೧೫೯. ಅಂದು ಅಯೋಧ್ಯಾ ಪಟ್ಟಣದಲ್ಲಿ ದೊಡ್ಡ ಉತ್ಸವ. ಅಯೋ ಧ್ಯಾವಾಸಿ ಜನರೆಲ್ಲರೂ ಸಂತೋಷದಿಂದ ಕಿಕ್ಕಿರಿದರು.

ಪ್ರದೇಯಾಂಶ್ಚ ದದೌ ರಾಜಾ ಸೂತಮಾಗಧವಂದಿನಾಮ್ ।
ಬ್ರಾಹ್ಮಣೇಭ್ಯೋ ದದೌ ವಿತ್ತಂ ಗೋಧನಾನಿ ಸಹಸ್ರಶಃ ॥ ೧೬೦ ॥
ಅತೀತ್ಯೈಕಾದಶಾಹಂ ತು ನಾಮಕರ್ಮ ತಥಾಕರೋತ್ ॥ ೧೬೧ ॥
ಜ್ಯೇಷ್ಠಂ ರಾಮಂ ಮಹಾತ್ಮಾನಂ ಭರತಂ ಕೈಕಯೀಸುತಮ್ ।
ಸೌಮಿತ್ರಿಂ ಲಕ್ಷ್ಮಣಮಿತಿ ಶತ್ರುಘ್ನಮಪರಂ ತಥಾ ।
ವಸಿಷ್ಠಃ ಪರಮಪ್ರೀತೋ ನಾಮಾನಿ ಕೃತವಾಂಸ್ತದಾ ॥ ೧೬೨ ॥
ಬ್ರಾಹ್ಮಣಾನ್ ಭೋಜಯಾಮಾಸ ಪೌರಾನ್ ಜಾನಪದಾನಪಿ ।
ಅದದದ್ಬ್ರಾಹ್ಮಣಾನಾಂ ಚ ರತ್ನೌಘಮಮಿತಂ ಬಹು ॥ ೧೬೩ ॥
ಸರ್ವೇ ವೇದವಿದಃ ಶೂರಾಃ ಸರ್ವೇ ಲೋಕಹಿತೇ ರತಾಃ ।

---

೧೬೦. ರಾಜನು ಆ ದಿನ ಪೌರಾಣಿಕರಿಗೆ, ವಂಶಾವಲಿಯನ್ನು ಕೀರ್ತನ ಮಾಡುವವರಿಗೆ, ಮತ್ತು ಸ್ತುತಿಪಾಠಕರಿಗೆ ಕೊಡಬೇಕಾದುದನ್ನು ಕೊಟ್ಟು ಬ್ರಾಹ್ಮಣರಿಗೆ ಹಣವನ್ನೂ ಹಸುಗಳನ್ನೂ ಸಾವಿರಗಟ್ಟಲೆ ದಾನಮಾಡಿದನು.

೧೬೧. ಮಕ್ಕಳು ಹುಟ್ಟಿ ಹನ್ನೊಂದು ದಿನಗಳನ್ನು ಕಳೆದು ತನ್ನ ಮಕ್ಕಳಿಗೆ ನಾಮಕರಣ ಮಹೋತ್ಸವವನ್ನು ನಡೆಸಿದನು.

೧೬೨. ಆಗ ಸಕಲ ಗುಣಗಳಿಂದ ತುಂಬಿದ ದೊಡ್ಡ ಮಗನಿಗೆ ರಾಮನೆಂದು, ಕೈಕೇಯಿಯಲ್ಲಿ ಹುಟ್ಟಿದವನಿಗೆ ಭರತನೆಂದು, ಸುಮಿತ್ರೆಯ ಮಕ್ಕಳಿಗೆ ಲಕ್ಷ್ಮಣ, ಶತ್ರುಘ್ನರೆಂದೂ ವಸಿಷ್ಠಮುನಿಯು ಪರಮ ಸಂತೋಷದಿಂದ ಹೆಸರುಗಳನ್ನಿಟ್ಟನು.

೧೬೩. ದಶರಥನು ನಾಮಕರಣ ಮಹೋತ್ಸವಕ್ಕೆ ಬಂದ ಒಳ ಊರಿನ ಮತ್ತು ಹೊರ ಊರಿನ ಬ್ರಾಹ್ಮಣರಿಗೆ ಔತಣ ಊಟವನ್ನು ಮಾಡಿಸಿ ದನಲ್ಲದೆ ಅವರಿಗೆ ಬೇಕಾದಷ್ಟು ರತ್ನಗಳನ್ನು ದಾನ ಮಾಡಿದನು.

೧೬೪. ರಾಜನ ನಾಲ್ವರು ಮಕ್ಕಳೂ ವೇದಗಳನ್ನು ಚೆನ್ನಾಗಿ ಬಲ್ಲವರಾಗಿಯೂ, ಶೂರರಾಗಿಯೂ, ಯಾವಾಗಲೂ ಲೋಕಕ್ಕೆ ಹಿತವನ್ನುಂಟು ಮಾಡುವುದರಲ್ಲಿ ತೊಡಗಿರುವವರಾಗಿಯೂ, ತುಂಬಿದ ಜ್ಞಾನವುಳ್ಳವ

ಸರ್ವೇ ಜ್ಞಾನೋಪಸಂಪನ್ನಾಃ ಸರ್ವೇ ಸಮುದಿತಾ ಗುಣೈಃ ||
ತೇಷಾಮಪಿ ಮಹಾತೇಜಾ ರಾಮಃ ಸತ್ಯಪರಾಕ್ರಮಃ |
ಇಷ್ಟಃ ಸರ್ವಸ್ಯ ಲೋಕಸ್ಯ ಶಶಾಙ್ಕ ಇವ ನಿರ್ಮಲಃ || ೧೬೫ ||

ಗಜಸ್ಕಂಧೇಽಶ್ವಪೃಷ್ಠೇ ಚ ರಥಚರ್ಯಾಸು ಸಂಮತಃ |
ಧನುರ್ವೇದೇ ಚ ನಿರತಃ ಪಿತೃಶುಶ್ರೂಷಣೇ ರತಃ || ೧೬೬ ||

ಬಾಲ್ಯಾತ್ಪ್ರಭೃತಿ ಸುಸ್ನಿಗ್ಧೋ ಲಕ್ಷ್ಮಣೋ ಲಕ್ಷ್ಮಿವರ್ಧನಃ |
ರಾಮಸ್ಯ ಲೋಕರಾಮಸ್ಯ ಭ್ರಾತುರ್ಜ್ಯೇಷ್ಠಸ್ಯ ನಿತ್ಯಶಃ || ೧೬೭ ||
ಸರ್ವಪ್ರಿಯಕರಸ್ತಸ್ಯ ರಾಮಸ್ಯಾಪಿ ಶರೀರತಃ |
ಲಕ್ಷ್ಮಣೋ ಲಕ್ಷ್ಮಿಸಂಪನ್ನೋ ಬಹಿಃ ಪ್ರಾಣ ಇವಾಪರಃ || ೧೬೮ ||

ರಾಗಿಯೂ, ಸಕಲವಿಧವಾದ ಸದ್ಗುಣಗಳಿಂದ ಕೂಡಿದವರಾಗಿಯೂ ಇದ್ದರು.

೧೬೫-೬. ಆದರೂ ಎಂದೂ ಸುಳ್ಳಾಗದ ಪರಾಕ್ರಮವುಳ್ಳ, ಮತ್ತು ಮಹಾತೇಜಸ್ವಿಯಾದ ರಾಮನು ಅವರೆಲ್ಲರಿಗಿಂತ, ಕಳಂಕವಿಲ್ಲದೇ ಸ್ವಚ್ಛವಾಗಿ ಬೆಳಗುತ್ತಿರುವ ಚಂದ್ರನಂತೆ, ಎಲ್ಲರಿಗೂ ಬಹಳ ಬೇಕಾದವನಾಗಿದ್ದನಲ್ಲದೆ ಆನೇಸವಾರಿ, ಕುದುರೆಸವಾರಿ, ರಥದಲ್ಲಿ ಕುಳಿತು ಹೋಗುವುದು ಮೊದಲಾದವುಗಳಲ್ಲಿ ನೈಪುಣ್ಯವನ್ನು ಪಡೆದವನೂ, ಧನುರ್ವಿದ್ಯೆಯಲ್ಲಿ ಆಸಕ್ತಿಯಿರುವ ಹಾಗೆ ತಂದೆಯನ್ನು ಸೇವೆ ಮಾಡುವುದರಲ್ಲಿಯೂ ತುಂಬಾ ಆಸಕ್ತಿಯುಳ್ಳವನೂ ಆಗಿದ್ದನು.

೧೬೭. ಎಲ್ಲರನ್ನೂ ಆನಂದಗೊಳಿಸುವ ತನ್ನ ದೊಡ್ಡಣ್ಣ ರಾಮನ ವಿಷಯದಲ್ಲಿ ಸೌಂದರ್ಯ ನಿಧಿಯಾದ ಲಕ್ಷ್ಮಣನು ಚಿಕ್ಕಂದಿನಿಂದ ಯಾವಾಗಲೂ ಬಹಳ ಪ್ರೀತಿಯನ್ನಿಟ್ಟುಕೊಂಡಿದ್ದನು.

೧೬೮. ಅದೇರೀತಿ ರಾಮನೂ ಕೂಡ ಯಾವಾಗಲೂ ತನಗೆ ಪ್ರಿಯವಾದುದನ್ನೇ ಮಾಡುತ್ತಾ ಅದರಿಂದ ಅವನ ದೇಹಕ್ಕುಂಟಾಗುವ ಶ್ರಮವನ್ನು ಸ್ವಲ್ಪವೂ ಯೋಚಿಸದಿರುವ ಲಕ್ಷ್ಮಣನನ್ನು ಮೂರ್ತಿಮತ್ತಾಗಿ ಹೊರಗೆ ಸಂಚರಿಸುವ ತನ್ನ ಪ್ರಾಣವೆಂತಲೇ ಭಾವಿಸಿ ಪ್ರೀತಿಸುತ್ತಿದ್ದನು.

ನ ಚ ತೇನ ವಿನಾ ನಿದ್ರಾಂ ಲಭತೇ ಪುರುಷೋತ್ತಮಃ ।
ಮೃಷ್ಟಮನ್ನಮುಪಾನೀತಮಶ್ನಾತಿ ನ ಹಿ ತಂ ವಿನಾ ॥ ೧೬೯ ॥
ಯದಾ ಹಿ ಹಯಮಾರೂಢೋ ಮೃಗಯಾಂ ಯಾತಿ ರಾಘವಃ
ತದೈನಂ ಪೃಷ್ಠತೋಽಭ್ಯೇತಿ ಸಧನುಃ ಪರಿಪಾಲಯನ್ ॥ ೧೭೦ ॥
ಭರತಸ್ಯಾಪಿ ಶತ್ರುಘ್ನೋ ಲಕ್ಷ್ಮಣಾವರಜೋ ಹಿ ಸಃ ।
ಪ್ರಾಣೈಃ ಪ್ರಿಯತರೋ ನಿತ್ಯಂ ತಸ್ಯ ಚಾಸೀತ್ತಥಾ ಪ್ರಿಯಃ ॥ ೧೭೧ ॥
ಸ ಚತುರ್ಭಿರ್ಮಹಾಭಾಗೈಃ ಪುತ್ರೈರ್ದಶರಥಃ ಪ್ರಿಯೈಃ ।
ಬಭೂವ ಪರಮಪ್ರೀತೋ ದೇವೈರಿವ ಪಿತಾಮಹಃ ॥ ೧೭೨ ॥
ತೇ ಚಾಪಿ ಮನುಜವ್ಯಾಘ್ರಾ ವೈದಿಕಾಧ್ಯಯನೇ ರತಾಃ ।

---

೧೬೯. ರಾಮನಿಗೆ ಲಕ್ಷ್ಮಣನಿಲ್ಲದಿದ್ದರೆ ನಿದ್ರೆಯೇ ಬಾರದು. ಅವನಿಗೆ ಯಾರಾದರೂ ಸಿಹಿ ತಿಂಡಿಗಳನ್ನು ಕೊಟ್ಟರೆ ಲಕ್ಷ್ಮಣನಿಲ್ಲದೇ ತಾನೊಬ್ಬನೇ ಅವನ್ನು ತಿನ್ನುತ್ತಿರಲಿಲ್ಲ.

೧೭೦. ಅದಕ್ಕೆ ತಕ್ಕಹಾಗೆ, ರಾಮನು ಕುದುರೆಯಮೇಲೆ ಕುಳಿತು ಬೇಟೆಯಾಡಲು ಹೊರಟರೆ ಅವನನ್ನು ಬಿಟ್ಟಿರದೆ ಲಕ್ಷ್ಮಣನು ಕೈಯ್ಯಲ್ಲಿ ಬಿಲ್ಲನ್ನು ಹಿಡಿದು ಅವನಿಗೆ ಯಾರಿಂದಲೂ ತೊಂದರೆಯುಂಟಾಗದ ಹಾಗೆ ನೋಡಿಕೊಳ್ಳುತ್ತಾ ಅವನ ಹಿಂದೆಯೇ ಹೋಗುವನು.

೧೭೧. ಲಕ್ಷ್ಮಣನ ತಮ್ಮನಾದ ಶತ್ರುಘ್ನನೂ ಇದೇರೀತಿಯಾಗಿ ತನ್ನನ್ನು, ಭರತನು ಅವನ ಪ್ರಾಣಕ್ಕಿಂತ ಮಿಗಿಲಾಗಿ ಯಾವಾಗಲೂ ಪ್ರೀತಿಸುವಷ್ಟು ಅವನಲ್ಲಿ ಪ್ರೀತಿವಿಶ್ವಾಸಗಳನ್ನಿಟ್ಟುಕೊಂಡಿದ್ದನು.

೧೭೨. ದಿಕ್ಪಾಲಕರಾದ ದೇವತೆಗಳನ್ನು ಪಡೆದು ಬ್ರಹ್ಮದೇವನು ಆನಂದಪಟ್ಟ ಹಾಗೆ ಮಹಾಭಾಗ್ಯಶಾಲಿಗಳಾದ ಮತ್ತು ಇಷ್ಟರಾದ ಅಂತಹ ನಾಲ್ಕು ಮಕ್ಕಳುಗಳನ್ನು ಪಡೆದು ದಶರಥರಾಜನು ಪರಮಾನಂದಪಟ್ಟನು.

೧೭೩. ರಾಜನು ಆನಂದ ಪಡುವುದಕ್ಕೆ ತಕ್ಕಂತೆ ನಾಲ್ಕು ಜನ ಮಕ್ಕಳೂ ಕ್ರಮವಾಗಿ ವೇದಾಂಗಗಳಾದ ಶಾಸ್ತ್ರಗಳನ್ನು ಅಧ್ಯಯನ ಮಾಡು

ಪಿತೃಶುಶ್ರೂಷಣರತಾ ಧನುರ್ವೇದೇ ಚ ನಿಷ್ಠಿತಾಃ ॥ ೧೭೩ ॥
ಅಥ ರಾಜಾ ದಶರಥಸ್ತೇಷಾಂ ದಾರಕ್ರಿಯಾಂ ಪ್ರತಿ ।
ಚಿನ್ತಯಾಮಾಸ ಧರ್ಮಾತ್ಮಾ ಸೋಪಾಧ್ಯಾಯಃ ಸಬಾಂಧವಃ ॥
ತಸ್ಯ ಚಿನ್ತಯಮಾನಸ್ಯ ಮನ್ತ್ರಿಮಧ್ಯೇ ಮಹಾತ್ಮನಃ ।
ಅಭ್ಯಾಗಚ್ಛನ್ಮಹಾತೇಜಾ ವಿಶ್ವಾಮಿತ್ರೋ ಮಹಾಮುನಿಃ ॥ ೧೭೫ ॥
ತಂ ದೃಷ್ಟ್ವಾ ಜ್ವಲಿತಂ ದೀಪ್ತ್ಯಾ ತಾಪಸಂ ಸಂಶಿತವ್ರತಮ್ ।
ಪ್ರಹೃಷ್ಟವದನೋ ರಾಜಾ ತತೋಽರ್ಘ್ಯಮುಪಹಾರಯತ್ ॥ ೧೭೬ ॥
ಸ ರಾಜ್ಞಃ ಪ್ರತಿಗೃಹ್ಯಾರ್ಘ್ಯಂ ಶಾಸ್ತ್ರದೃಷ್ಟೇನ ಕರ್ಮಣಾ ।
ಕುಶಲಂ ಚಾವ್ಯಯಂ ಚೈವ ಪರ್ಯಪೃಚ್ಛನ್ನರಾಧಿಪಮ್ ॥ ೧೭೭ ॥

ವುದರಲ್ಲಿ ತುಂಬಾ ಆಸಕ್ತಿಯುಳ್ಳವರಾಗಿಯೂ, ಧನುರ್ವಿದ್ಯೆಯಲ್ಲಿ ನೈಪುಣ್ಯವನ್ನು ಪಡೆದವರಾಗಿಯೂ, ತಂದೆಗೆ ಶುಶ್ರೂಷೆ ಮಾಡುವುದರಲ್ಲಿ ಬಹಳ ಶ್ರದ್ಧೆಯಿಟ್ಟವರಾಗಿಯೂ ಇರುವಂತಹವರಾದರು.

೧೭೪. ಸ್ವಲ್ಪ ಕಾಲವಾದ ನಂತರ ಧರ್ಮಾತ್ಮನಾದ ದಶರಥರಾಜನು ಆ ಮಕ್ಕಳಿಗೆ ತಕ್ಕ ಹೆಣ್ಣುಗಳನ್ನು ತಂದು ಮದುವೆ ಮಾಡಬೇಕೆಂದು ಪುರೋಹಿತರೊಡನೆಯೂ, ಬಂಧುಗಳೊಡನೆಯೂ ಕಲೆತು ಆಲೋಚಿಸಿದನು.

೧೭೫. ಮಂತ್ರಿಗಳ ಮಧ್ಯದಲ್ಲಿ ಕುಳಿತು ಮಹಾತ್ಮನಾದ ರಾಜನು ಹೀಗೆ ಆಲೋಚನೆ ಮಾಡುತ್ತಿರಲು ಮಹಾತೇಜಸ್ವಿಯಾದ ವಿಶ್ವಾಮಿತ್ರ ಮಹಾಮುನಿಯು ಅಲ್ಲಿಗೆ ಬಂದನು.

೧೭೬. ಕಾಂತಿಯಿಂದ ಬೆಳಗುತ್ತಿರುವ, ತೀಕ್ಷ್ಣವಾಗಿ ನಿಯಮಗಳನ್ನು ಅನುಷ್ಠಿಸುವ, ತಪಸ್ವಿಯಾದ ವಿಶ್ವಾಮಿತ್ರಮುನಿಯನ್ನು ಕಂಡು ಸಂತೋಷದಿಂದ ಅರಳಿದ ಮುಖವುಳ್ಳ ರಾಜನು ವಸಿಷ್ಠನ ಮೂಲಕ ಅವನಿಗೆ ಅರ್ಘ್ಯವನ್ನು ಸಮರ್ಪಿಸಿದನು.

೧೭೭. ಶಾಸ್ತ್ರಕ್ಕನುಗುಣವಾಗಿ ಸಮರ್ಪಿಸಿದ ಅರ್ಘ್ಯವನ್ನು ಸ್ವೀಕರಿಸಿ ಮುನಿಯು ರಾಜನನ್ನು ಕುರಿತು ಅವನ ಕ್ಷೇಮ ಲಾಭ ವಿಷಯವಾಗಿ ಪ್ರಶ್ನೆ ಮಾಡಿದನು.

ವಸಿಷ್ಠಂ ಚ ಸಮಾಗಮ್ಯ ಕುಶಲಂ ಮುನಿಪುಙ್ಗವಃ ।
ಋಷೀಂಶ್ಚಾನ್ಯಾನ್ಯಥಾನ್ಯಾಯಂ ಮಹಾಭಾಗಾನುವಾಚ ಹ ॥೧೭೮॥
ಅಥ ಹೃಷ್ಟಮನಾ ರಾಜಾ ವಿಶ್ವಾಮಿತ್ರಂ ಮಹಾಮುನಿಮ್ ।
ಉವಾಚ ಪರಮೋದಾರೋ ಹೃಷ್ಟಸ್ತಮಭಿಪೂಜಯನ್ ॥ ೧೭೯ ॥
ಯಥಾಽಮೃತಸ್ಯ ಸಂಪ್ರಾಪ್ತಿರ್ಯಥಾ ವರ್ಷಮನೂದಕೇ ।
ಯಥಾ ಸದೃಶದಾರೇಷು ಪುತ್ರಜನ್ಮಾಪ್ರಜಸ್ಯ ಚ ॥ ೧೮೦
ಪ್ರನಷ್ಟಸ್ಯ ಯಥಾ ಲಾಭೋ ಯಥಾ ಹರ್ಷೋ ಮಹೋದಯೇ ।
ತಥೈವಾಗಮನಂ ಮನ್ಯೇ ಸ್ವಾಗತಂ ತೇ ಮಹಾಮುನೇ ॥೧೮೧॥

---

೧೭೮. ಬಳಿಕ ವಸಿಷ್ಠನ ಬಳಿಗೆ ಹೋಗಿ ಅವನ ಯೋಗಕ್ಷೇಮವನ್ನು ವಿಚಾರಿಸಿ ಅಲ್ಲಿದ್ದ ವಾಮದೇವನೇ ಮೊದಲಾದ ಉಳಿದೆಲ್ಲಾ ಮುನಿಗಳನ್ನು ಕುರಿತು ಅವರ ಯೋಗಕ್ಷೇಮವನ್ನೂ ವಿಚಾರಿಸಿದನು.

೧೭೯. ಬಳಿಕ ಸಂತೋಷಗೊಂಡ ಮನಸ್ಸುಳ್ಳ ಉದಾರಿಯಾದ ರಾಜನು ಸಂತೋಷದಿಂದ ರೋಮಾಂಚಗೊಂಡವನಾಗಿ ಮಹಾಮುನಿಯಾದ ವಿಶ್ವಾಮಿತ್ರನನ್ನು ಕುರಿತು ಗೌರವಭಾವದಿಂದ ಇಂತೆಂದನು.

೧೮೦-೧. "ಮಹಾಮುನಿಯೇ! ಇಂದು ನಿನ್ನ ಅನಿರೀಕ್ಷಿತವಾದ ಆಗಮನದಿಂದ ನನಗೆ ಅಮೃತವು ಲಭಿಸಿದಷ್ಟು ಸಂತೋಷವಾಗಿದೆ. ಬಂಧುವನ್ನು ಕಳೆದುಕೊಂಡವನಿಗೆ ಸತ್ತ ಬಂಧುವು ಬದುಕಿ ಮರಳಿ ಬಂದರೆ ಎಷ್ಟು ಸಂತೋಷವಾಗುತ್ತದೆಯೋ ಅಷ್ಟು ಸಂತೋಷವುಂಟಾಗಿದೆ. ಮಳೆಯಿಲ್ಲದೆ ತಳಲುತ್ತಿರುವ ದೇಶದಲ್ಲಿ ಮಳೆ ಬಂದರೆ ಎಷ್ಟು ಸಂತೋಷವಾಗುವುದೋ ಅಷ್ಟು ಸಂತೋಷವುಂಟಾಗಿದೆ. ಪುತ್ರನಿಲ್ಲದವನಿಗೆ ಅವನಿಗನುರೂಪಳಾದ ಹೆಂಡತಿಯಲ್ಲಿ ಮಗನು ಹುಟ್ಟಿದ್ದರಿಂದ ಎಷ್ಟು ಸಂತೋಷವಾಗುವುದೋ ಅಷ್ಟು ಸಂತೋಷವುಂಟಾಗಿದೆ. ತುಂಬಾ ನಷ್ಟಹೊಂದಿದವನಿಗೆ ನಿಧಿಲಾಭವುಂಟಾದರೆ ಯಾವ ತೃಪ್ತಿಯುಂಟಾಗುವುದೋ ಆ ತೃಪ್ತಿಯುಂಟಾಗಿದೆ. ಮತ್ತು ದೊಡ್ಡ ಉತ್ಸವದಿಂದ ಯಾವ ಆನಂದವುಂಟಾಗುವುದೋ ಆ ಆನಂದವುಂಟಾಗಿದೆ.

ಕಿಂ ಚ ತೇ ಪರಮಂ ಕಾಮಂ ಕರೋಮಿ ಕಿಮು ಹರ್ಷಿತಃ ।
ಪಾತ್ರಭೂತೋಽಸಿ ಮೇ ಬ್ರಹ್ಮನ್ ದಿಷ್ಟ್ಯಾ ಪ್ರಾಪ್ತೋಽಸಿ ಧಾರ್ಮಿಕ
ಪೂರ್ವಂ ರಾಜರ್ಷಿಶಬ್ದೇನ ತಪಸಾ ದ್ಯೋತಿತಪ್ರಭಃ ।
ಬ್ರಹ್ಮರ್ಷಿತ್ವಮನುಪ್ರಾಪ್ತಃ ಪೂಜ್ಯೋಽಸಿ ಬಹುಧಾ ಮಯಾ ॥
ಬ್ರೂಹಿ ಯತ್ಪ್ರಾರ್ಥಿತಂ ತುಭ್ಯಂ ಕಾರ್ಯಮಾಗಮನಂ ಪ್ರತಿ ।
ಇಚ್ಛಾಮ್ಯನುಗೃಹೀತೋಽಹಂ ತ್ವದರ್ಥಪರಿವೃದ್ಧಯೇ ॥ ೧೮೪ ॥
ಕಾರ್ಯಸ್ಯ ನ ವಿಮರ್ಶಂ ಚ ಗಂತುಮರ್ಹಸಿ ಕೌಶಿಕ ।
ಕರ್ತಾ ಚಾಹಮಶೇಷೇಣ ದೈವತಂ ಹಿ ಭವಾನ್ ಮಮ ॥ ೧೮೫ ॥
ತಚ್ಛ್ರುತ್ವಾ ರಾಜಸಿಂಹಸ್ಯ ವಾಕ್ಯಮದ್ಭುತವಿಸ್ತರಮ್ ।

---

೧೮೨. ಬ್ರಾಹ್ಮಣನೇ! ನಿನ್ನ ಯಾವ ಮನೋರಥವನ್ನು ನಾನು ಸಂತೋಷದಿಂದ ನಡೆಸಿಕೊಡಲಿ, ಧಾರ್ಮಿಕನೇ! ದಾನಗಳನ್ನು ಪಡೆಯಲು ಉತ್ತಮಪಾತ್ರನು ನೀನೆ. ನನ್ನ ಭಾಗ್ಯವಿಶೇಷದಿಂದಲೇ ನೀನಿಲ್ಲಿಗೆ ಬಂದಿರುವಿ.

೧೮೩. ಮೊದಲು ರಾಜರ್ಷಿಯಾಗಿದ್ದು ಬಳಿಕ ಕಠಿಣ ತಪಸ್ಸನ್ನಾಚರಿಸಿದ್ದರಿಂದ ಬೆಳಗಿ ಬ್ರಹ್ಮರ್ಷಿ ಪಟ್ಟವನ್ನು ಪಡೆದ ನೀನು ಬಹಳ ಮಟ್ಟಿಗೆ ನನ್ನಿಂದ ಪೂಜಿಸಲ್ಪಡತಕ್ಕವನಾಗಿರುವಿ.

೧೮೪. ಯಾವ ಕಾರ್ಯವನ್ನುದ್ದೇಶಿಸಿ ನೀನು ಬಂದಿರುವಿ ಹೇಳುವನಾಗು. ನಿನ್ನ ಅನುಗ್ರಹದಿಂದ ನಿನ್ನ ಮನೋರಥವನ್ನು ನಡೆಸಿಕೊಡಲು ಬಹಳ ಆಸೆಯುಳ್ಳವನಾಗಿದ್ದೇನೆ.

೧೮೫. ನಿನ್ನ ಕಾರ್ಯವನ್ನು ನಾನು ನಡೆಸಿಕೊಡುವ ವಿಷಯದಲ್ಲಿ ನೀನು ಶಂಕೆಪಡಬೇಕಾಗಿಲ್ಲ. ಕುಶಿಕವಂಶದಲ್ಲಿ ಜನಿಸಿದವನೇ! ನೀನೇ ನನಗೆ ದೇವರು. ಆದುದರಿಂದ ನೀನು ಹೇಳುವುದೆಲ್ಲವನ್ನೂ ನಡೆಸಿಕೊಡಲು ಸಿದ್ಧನಾಗಿರುವೆನು."

೧೮೬. ರಾಜಶ್ರೇಷ್ಠನಾದ ದಶರಥನ ಅತ್ಯಾಶ್ಚರ್ಯಕರವಾದ ಆ ಮಾತನ್ನು ಕೇಳಿ ಮಹಾತೇಜಸ್ವಿಯಾದ ವಿಶ್ವಾಮಿತ್ರನು ಸಂತೋಷದಿಂದ

ಹೃಷ್ಟರೋಮಾ ಮಹಾತೇಜಾ ವಿಶ್ವಾಮಿತ್ರೋಽಭ್ಯಭಾಷತ ॥ ೧೮೬ ॥
ಸದೃಶಂ ರಾಜಶಾರ್ದೂಲ ! ತವೈತದ್ಭುವಿ ನಾನ್ಯಥಾ ।
ಮಹಾಕುಲಪ್ರಸೂತಸ್ಯ ವಸಿಷ್ಠವ್ಯಪದೇಶಿನಃ ॥ ೧೮೭ ॥
ಯತ್ತು ಮೇ ಹೃದ್ಗತಂ ವಾಕ್ಯಂ ತಸ್ಯ ಕಾರ್ಯಸ್ಯ ನಿಶ್ಚಯಮ್
ಕುರುಷ್ವ ರಾಜಶಾರ್ದೂಲ ! ಭವ ಸತ್ಯಪ್ರತಿಶ್ರವಾಃ ॥ ೧೮೮ ॥
ಅಹಂ ನಿಯಮಮಾತಿಷ್ಠೇ ಸಿದ್ಧ್ಯರ್ಥಂ ಪುರುಷರ್ಷಭ ।
ತಸ್ಯ ವಿಘ್ನಕರೌ ದ್ವೌ ತು ರಾಕ್ಷಸೌ ಕಾಮರೂಪಿಣೌ ॥ ೧೮೯ ॥
ವ್ರತೇ ಮೇ ಬಹುಶಶ್ಚೀರ್ಣೇ ಸಮಾಪ್ತ್ಯಾಂ ರಾಕ್ಷಸಾವಿಮೌ ।
ಮಾರೀಚಶ್ಚ ಸುಬಾಹುಶ್ಚ ವೀರ್ಯವಂತೌ ಸುಶಿಕ್ಷಿತೌ ।
ಸಮಾಂಸರುಧಿರೌಘೇನ ವೇದಿಂ ತಾಮಭ್ಯವರ್ಷತಾಮ್ ॥ ೧೯೦ ॥

ರೋಮಾಂಚಗೊಂಡವನಾಗಿ ರಾಜನನ್ನು ಕುರಿತು ಹೇಳಿದನು.

೧೮೭. "ರಾಜಶ್ರೇಷ್ಠನೇ ! ಉತ್ತಮಕುಲದಲ್ಲಿ ಜನಿಸಿ ವಸಿಷ್ಠನನ್ನು ಗುರುವಾಗಿ ಪಡೆದಿರುವ ನಿನಗೆ ತಕ್ಕದಾಗಿರುವುದು ಈ ಮಾತು. ಈ ಭೂಲೋಕದಲ್ಲಿ ಇಂತಹ ಮಾತನ್ನು ಬೇರೆ ಯಾವನು ಆಡಬಲ್ಲನು ?

೧೮೮. ಯಾವುದನ್ನುದ್ದೇಶಿಸಿ ಇಲ್ಲಿಗೆ ನಾನು ಬಂದೆನೋ ಆ ಕಾರ್ಯವನ್ನು ನಡೆಸಿಕೊಡಲು ನಿಶ್ಚಯ ಮಾಡಿಕೊ. ಸತ್ಯಸಂಧತೆಯನ್ನು ಉಳಿಸಿಕೊ.

೧೮೯-೯೦. ಪುರುಷಶ್ರೇಷ್ಠನೇ ! ಉತ್ತಮ ಫಲವನ್ನು ಪಡೆಯುವುದಕ್ಕಾಗಿ ನಾನೊಂದು ಯಾಗವನ್ನು ಆರಂಭಿಸಿರುವೆನು. ಅದನ್ನು ಹಾಳುಮಾಡುವವರು, ಮನಬಂದ ರೂಪವನ್ನು ಪಡೆಯಬಲ್ಲ ಮಾರೀಚ ಸುಬಾಹು ಎಂಬ ಇಬ್ಬರು ರಾಕ್ಷಸರು ಇರುವರು. ಅವರು ಮಹಾಪರಾಕ್ರಮಶಾಲಿಗಳು. ಮಾಯೆಯನ್ನರಿತವರು. ವ್ರತವು ನಡೆದು ಯಾಗವು ಇನ್ನೇನು ಮುಗಿಯಬೇಕೆಂಬ ಸ್ಥಿತಿಯಲ್ಲಿ ಅವರು ಮಾಂಸರಕ್ತಗಳನ್ನು ರಾಶಿರಾಶಿಯಾಗಿ ಯಾಗಭೂಮಿಯ ಮೇಲೆ ಸುರಿಸಿದರು.

ಅವಧೂತೇ ತಥಾಭೂತೇ ತಸ್ಮಿನ್ನಿಯಮನಿಶ್ಚಯೇ ।
ಕೃತಶ್ರಮೋ ನಿರುತ್ಸಾಹಸ್ತಸ್ಮಾದ್ದೇಶಾದಪಾಕ್ರಮೇ ॥ ೯೧ ॥
ನ ಚ ಮೇ ಕ್ರೋಧಮುತ್ಸ್ರಷ್ಟುಂ ಬುದ್ಧಿರ್ಭವತಿ ಪಾರ್ಥಿವ ।
ತಥಾಭೂತಾ ಹಿ ಸಾ ಚರ್ಯಾ ನ ಶಾಪಸ್ತತ್ರ ಮುಚ್ಯತೇ ॥ ೯೨ ॥
ತತ್ಪುತ್ರಂ ರಾಜಶಾರ್ದೂಲ ! ರಾಮಂ ಸತ್ಯಪರಾಕ್ರಮಮ್ ।
ಕಾಕಪಕ್ಷಧರಂ ಶೂರಂ ಜ್ಯೇಷ್ಠಂ ಮೇ ದಾತುಮರ್ಹಸಿ ॥ ೯೩ ॥
ಶಕ್ತೋ ಹ್ಯೇಷ ಮಯಾ ಗುಪ್ತೋ ದಿವ್ಯೇನ ಸ್ವೇನ ತೇಜಸಾ ।
ರಾಕ್ಷಸಾ ಯೇ ವಿಕರ್ತಾರಸ್ತೇಷಾಮಪಿ ವಿನಾಶನೇ ॥ ೯೪ ॥
ನ ಚ ತೌ ರಾಮಮಾಸಾದ್ಯ ಶಕ್ತೌ ಸ್ಥಾತುಂ ಕಥಂಚನ ।
ನ ಚ ತೌ ರಾಘವಾದನ್ಯೋ ಹಂತುಮುತ್ಸಹತೇ ಪುಮಾನ್ ॥ ೯೫ ॥

---

೯೧. ಈರೀತಿ ಅವರಿಂದ ನನ್ನ ನಿಯಮಸಂಕಲ್ಪಕ್ಕೆ ಅಡ್ಡಿಯುಂಟಾಗಲು, ಶ್ರಮಪಟ್ಟರೂ ಕೆಲಸವು ಕೈಗೂಡದ್ದರಿಂದ ನಿರುತ್ಸಾಹಿಯಾಗಿ ನನ್ನ ಆಶ್ರಮವನ್ನು ಬಿಟ್ಟು ಇಲ್ಲಿಗೆ ಬಂದಿರುತ್ತೇನೆ.

೯೨. ರಾಜನೇ ! ಅವರ ವಿಷಯದಲ್ಲಿ ಕೋಪವನ್ನು ತಾಳಲು ನನಗೆ ಮನಸ್ಸು ಬರಲಿಲ್ಲ. ಕೋಪವನ್ನು ತಾಳಬಾರದಂತಹದು ಆ ಕ್ರಿಯೆ. ಆದುದರಿಂದ ಆಗ ಅವರನ್ನು ಶಪಿಸುವುದಕ್ಕಿಲ್ಲ.

೯೩. ಆದಕಾರಣ ರಾಜಶ್ರೇಷ್ಠನೇ ! ಕಾಕಪಕ್ಷವನ್ನು ಧರಿಸಿರುವನಾದಾಗ್ಯೂ ಅತಿಶಯವಾದ ಪರಾಕ್ರಮವುಳ್ಳ ನಿನ್ನ ದೊಡ್ಡ ಮಗ ರಾಮನನ್ನು ನನಗೆ (ಸಹಾಯಮಾಡಲು) ಕೊಡುವನಾಗು.

೯೪. ನನ್ನಿಂದ ಕಾಪಾಡಲ್ಪಟ್ಟು ಇವನು ತನ್ನ ದಿವ್ಯತೇಜಸ್ಸಿನಿಂದ ಯಜ್ಞಕ್ಕೆ ವಿಘ್ನವನ್ನುಂಟುಮಾಡುವ ರಾಕ್ಷಸರೆಲ್ಲರನ್ನೂ ನಾಶಮಾಡುವುದರಲ್ಲಿ ಸಮರ್ಥನೆಂಬುದು ನಿಶ್ಚಯ.

೯೫. ರಾಮನೆದುರಿಗೆ ಬಂದು ಸುಬಾಹು ಮಾರೀಚರಿಬ್ಬರು ನಿಮಿಷ ಕೂಡ ನಿಲ್ಲಲಾರರು. ರಾಮನ ಹೊರತು ಬೇರೆ ಯಾರೂ ಅವರನ್ನು ಕೊಲ್ಲಲು ಸಮರ್ಥರಲ್ಲ.

ನ ಚ ಪುತ್ರಗತಂ ಸ್ನೇಹಂ ಕರ್ತುಮರ್ಹಸಿ ಪಾರ್ಥಿವ ।
ಅಹಂ ತೇ ಪ್ರತಿಜಾನಾಮಿ ಹತೌ ತೌ ವಿದ್ಧಿ ರಾಕ್ಷಸೌ ॥೧೯೬॥

ಅಹಂ ವೇದ್ಮಿ ಮಹಾತ್ಮಾನಂ ರಾಮಂ ಸತ್ಯಪರಾಕ್ರಮಮ್ ।
ವಸಿಷ್ಠೋಽಪಿ ಮಹಾತೇಜಾ ಯೇ ಚೇಮೇ ತಪಸಿ ಸ್ಥಿತಾಃ ॥೧೯೭॥

ಯದಿ ತೇ ಧರ್ಮಲಾಭಂ ಚ ಯಶಶ್ಚ ಪರಮಂ ಭುವಿ ।
ಸ್ಥಿರಮಿಚ್ಛಸಿ ರಾಜೇನ್ದ್ರ ರಾಮಂ ಮೇ ದಾತುಮರ್ಹಸಿ ॥೧೯೮॥

ತಚ್ಛ್ರುತ್ವಾ ರಾಜಶಾರ್ದೂಲೋ ವಿಶ್ವಾಮಿತ್ರಸ್ಯ ಭಾಷಿತಮ್ ।
ಮುಹೂರ್ತಮಿವ ನಿಃಸಂಜ್ಞಃ ಸಂಜ್ಞಾವಾನಿದಮಬ್ರವೀತ್ ॥೧೯೯॥

ಊನಷೋಡಶವರ್ಷೋ ಮೇ ರಾಮೋ ರಾಜೀವಲೋಚನಃ ।

---

೧೯೬. ರಾಜನೇ! ಮಗುವೆಂದು ಮಮತೆಯನ್ನಿಟ್ಟು ಕಳವಳಪಡಬೇಡ. ನಾನು ಖಂಡಿತವಾಗಿ ಹೇಳುವೆನು; ರಾಮನನ್ನು ಕಂಡವೊಡನೆಯೇ ಅವರಿಬ್ಬರೂ ಸತ್ತರೆಂದು ತಿಳಿ.

೧೯೭. ರಾಮನನ್ನು ಸುಳ್ಳಾಗದ ಪರಾಕ್ರಮವುಳ್ಳವನನ್ನಾಗಿಯೂ, ಕಂಡುಹಿಡಿಯಲಾಗದ ಮಹಿಮೆಯುಳ್ಳವನನ್ನಾಗಿಯೂ ನಾನು ತಿಳಿದಿರುವೆನು. ಹೀಗೆಯೇ ಮಹಾತೇಜಸ್ವಿಯಾದ ವಸಿಷ್ಠನೂ ಮತ್ತು ತಪಸ್ಸಿನಲ್ಲಿಯೇ ಮಗ್ನರಾಗಿರುವ ಮುನಿಗಳೂ ಅರಿತಿರುವರು.

೧೯೮. ರಾಜನೇ ! ನೀನು ಲೋಕದಲ್ಲಿ ಅತಿಶಯವಾದ ಧರ್ಮ, ಮೇಲಾದ ಕೀರ್ತಿಗಳನ್ನು ಸ್ಥಿರವಾಗಿರಲು ಆಶಿಸುವೆಯಾದರೆ ನನ್ನೊಡನೆ ರಾಮನನ್ನು ಕಳುಹಿಸುವನಾಗು."

೧೯೯. ವಿಶ್ವಾಮಿತ್ರನು ಹೇಳಿದ ಆ ಮಾತನ್ನು ಕೇಳಿ ರಾಜಸಿಂಹನಾದ ದಶರಥನು ಸ್ವಲ್ಪ ಹೊತ್ತು ಮೂರ್ಛಿತನಾಗಿದ್ದು ಬಳಿಕ ಪ್ರಜ್ಞೆಯನ್ನು ಹೊಂದಿ ಮುನಿಯನ್ನು ಕುರಿತು ಹೇಳಿದನು.

೨೦೦. "ಮುನಿಪುಂಗವನೇ ! ಕೆಂದಾವರೆಯಂತೆ ಕಣ್ಣುಳ್ಳ ನನ್ನ ಮಗ ರಾಮನಿಗೆ ಇನ್ನೂ ಹದಿನಾರು ವಯಸ್ಸು ಕೂಡ ಆಗಿಲ್ಲ. ಇವನಿಗೆ

ನ ಯುದ್ಧಯೋಗ್ಯತಾಮಸ್ಯ ಪಶ್ಯಾಮಿ ಸಹ ರಾಕ್ಷಸೈಃ ॥ ೨೦೦ ॥
ನಿರ್ವಿಘ್ನಾ ವ್ರತಚರ್ಯಾ ಸಾ ಭವಿಷ್ಯತಿ ಸುರಕ್ಷಿತಾ ।
ಅಹಂ ತತ್ರಾಽಽಗಮಿಷ್ಯಾಮಿ ನ ರಾಮಂ ನೇತುಮರ್ಹಸಿ ॥ ೨೦೧ ॥
ಬಾಲೋಽಹ್ಯಕೃತವಿದ್ಯಶ್ಚ ನ ಚ ವೇತ್ತಿ ಬಲಾಬಲಮ್।
ನ ಚಾಸೌ ರಕ್ಷಸಾಂ ಯೋಗ್ಯಃ ಕೂಟಯುದ್ಧಾ ಹಿ ತೇ ಭೃಶಮ್ ॥
ವಿಪ್ರಯುಕ್ತೋ ಹಿ ರಾಮೇಣ ಮುಹೂರ್ತಮಪಿ ನೋತ್ಸಹೇ ।
ಜೀವಿತುಂ ಮುನಿಶಾರ್ದೂಲ! ನ ರಾಮಂ ನೇತುಮರ್ಹಸಿ ॥ ೨೦೩ ॥
ಷಷ್ಟಿರ್ವರ್ಷಸಹಸ್ರಾಣಿ ಜಾತಸ್ಯ ಮಮ ಕೌಶಿಕ! ।
ದುಃಖೇನೋತ್ಪಾದಿತಶ್ಚಾಯಂ ನ ರಾಮಂ ನೇತುಮರ್ಹಸಿ॥ ೨೦೪ ॥

ರಾಕ್ಷಸರೊಡನೆ ನಿಂತು ಯುದ್ಧಮಾಡುವ ಯೋಗ್ಯತೆಯನ್ನು ನಾನು ಕಾಣುವುದಿಲ್ಲ.

೨೦೧. ನಾನೇ ಅಲ್ಲಿಗೆ ಬರುವೆನು. ನಿನ್ನ ಯಾಗವು ಯಾವದೊಂದು ವಿಘ್ನವೂ ಇಲ್ಲದೇ ಸರಿಯಾಗಿ ನಡೆಯುವ ಹಾಗಾಗುವುದು. ರಾಮನನ್ನು ಕರೆದೊಯ್ಯಬೇಡ.

೨೦೨. ಅವನು ಸಣ್ಣ ಮಗು. ಇನ್ನೂ ಧನುರ್ವಿದ್ಯೆಯಲ್ಲಿ ಶಿಕ್ಷೆಹೊಂದದವನು ರಾಕ್ಷಸರ ಮತ್ತು ತನ್ನ ಬಲಾಬಲಗಳನ್ನು ಅರಿಯದವನು. ರಾಕ್ಷಸರ ಎದುರಿನಲ್ಲಿ ನಿಂತು ಯುದ್ಧಮಾಡಲು ಅರ್ಹನಲ್ಲ. ರಾಕ್ಷಸರು ಬಹಳ ಕಪಟದಿಂದ ಯುದ್ಧಮಾಡುವವರಲ್ಲವೇ ?

೨೦೩. ರಾಮನನ್ನು ಹಿರಿದು ನಾನು ಒಂದು ನಿಮಿಷಕೂಡ ಪ್ರಾಣದಿಂದ ಇರಲಾರೆನು. ಆದ್ದರಿಂದ ಮುನಿಪುಂಗವನೇ ! ನನ್ನ ರಾಮನನ್ನು ಕರೆದುಕೊಂಡು ಹೋಗುವುದು ನಿನಗೆ ಉಚಿತವಲ್ಲ.

೨೦೪. ಕುಶಿಕವಂಶವನ್ನು ಬೆಳಗಿಸುವನೇ ! ನನಗೆ ಹುಟ್ಟಿ ಅರವತ್ತು ಸಾವಿರ ವರ್ಷಗಳಾದವು. ಬಹಳ ಕಷ್ಟದಿಂದ ಇವನನ್ನು ಹೊಂದಿರುವೆನು. ಆದುದರಿಂದ ರಾಮನನ್ನು ಕರೆದೊಯ್ಯುವುದು ನಿನಗೆ ತಕದ್ದಲ್ಲ.

ಚತುರ್ಣಾಮಾತ್ಮಜಾನಾಂ ಹಿ ಪ್ರೀತಿಃ ಪರಮಿಕಾ ಮಮ ।
ಜ್ಯೇಷ್ಠಂ ಧರ್ಮಪ್ರಧಾನಂ ಚ ನ ರಾಮಂ ನೇತುಮರ್ಹಸಿ ॥ ೨೦೫ ॥
ಸ ತ್ವಂ ಪ್ರಸಾದಂ ಧರ್ಮಜ್ಞ! ಕುರುಷ್ವ ಮಮ ಪುತ್ರಕೇ ।
ಮಮ ಚೈವಾಲ್ಪಭಾಗ್ಯಸ್ಯ ದೈವತಂ ಹಿ ಭವಾನ್ ಗುರುಃ ॥ ೨೦೬ ॥
ಕಥಮಪ್ಯಮರಪ್ರಖ್ಯಂ ಸಂಗ್ರಾಮಾಣಾಮಕೋವಿದಮ್ ।
ಬಾಲಂ ಮೇ ತನಯಂ ಬ್ರಹ್ಮನ್ನೈವ ದಾಸ್ಯಾಮಿ ಪುತ್ರಕಮ್ ॥೨೦೭॥
ತಚ್ಛ್ರುತ್ವಾ ವಚನಂ ತಸ್ಯ ಸ್ನೇಹಪರ್ಯಾಕುಲಾಕ್ಷರಮ್ ।
ಸಮನ್ಯುಃ ಕೌಶಿಕೋ ವಾಕ್ಯಂ ಪ್ರತ್ಯುವಾಚ ಮಹೀಪತಿಮ್ ॥೨೦೮॥
ಪೂರ್ವಮರ್ಥಂ ಪ್ರತಿಶ್ರುತ್ಯ ಪ್ರತಿಜ್ಞಾಂ ಹಾತುಮಿಚ್ಛಸಿ ।
ರಾಘವಾಣಾಮಯುಕ್ತೋಽಯಂ ಕುಲಸ್ಯಾಸ್ಯ ವಿಪರ್ಯಯಃ ॥

---

೨೦೫. ನಾಲ್ಕು ಮಕ್ಕಳಲ್ಲಿ ರಾಮನಲ್ಲಿ ನನಗೆ ಬಹಳ ಪ್ರೀತಿ. ಆದ್ದರಿಂದ ಧರ್ಮವನ್ನೇ ಮೇಲೆಂದೆನಿಸಿರುವ ದೊಡ್ಡಮಗ ರಾಮನನ್ನು ಒಯ್ಯಬೇಡ.

೨೦೬. ಧರ್ಮವನ್ನರಿತವನೇ ! ನನ್ನ ಮುದ್ದು ಮಗುವಿನಲ್ಲಿ ನೀನು ಕೃಪೆಮಾಡಬೇಕು. ನಿನ್ನ ಮನೋರಥವನ್ನು ಪೂರ್ತಿಮಾಡುವ ಭಾಗ್ಯವಿಲ್ಲದ ನನಗೆ ನೀನೇ ದೇವರು. ನೀನೇ ಗುರು.

೨೦೭. ಬ್ರಾಹ್ಮಣನೇ ! ದೇವತೆಗಳಿಗೆ ಸಮವಾಗಿರುವ, ಯುದ್ಧಗಳ ಪರಿಶ್ರಮವಿಲ್ಲದ ನನ್ನ ಎಳೆಯಮಗನನ್ನು ಕೊಡಲು ಸಾಧ್ಯವೇ ಇಲ್ಲ."

೨೦೮. ಮಗನಲ್ಲಿರುವ ಪ್ರೀತಿಯಿಂದ ತೊದಲುವ ಅಕ್ಷರಗಳಿಂದ ಕೂಡಿದ ದಶರಥನ ಆ ಮಾತನ್ನು ಕೇಳಿ ವಿಶ್ವಾಮಿತ್ರನು ಕೋಪಾವೇಶಗೊಂಡು ರಾಜನನ್ನು ಕುರಿತು ಹೇಳಿದನು.

೧೦೯. "ನಾನು ಕೇಳಿದುದನ್ನು ತಪ್ಪದೇ ಕೊಡುವುದಾಗಿ ಮೊದಲು ಪ್ರತಿಜ್ಞೆಮಾಡಿ ಈಗ ಈರೀತಿ ಪ್ರತಿಜ್ಞೆಯನ್ನು ಬಿಡುವ ಯೋಚನೆ ಮಾಡಿ ಇರುವಿ. ಕೊಟ್ಟಮಾತು ತಪ್ಪುವುದು ರಘುಕುಲದಲ್ಲಿ ಜನಿಸಿದವರಿಗೆ ಉಚಿತವಲ್ಲ. ಅದು ಈ ಕುಲಕ್ಕೆ ಕಳಂಕ.

ಯದೀದಂ ತೇ ಕ್ಷಮಂ ರಾಜನ್ ಗಮಿಷ್ಯಾಮಿ ಯಥಾಗತಮ್ ।
ಮಿಥ್ಯಾಪ್ರತಿಜ್ಞಃ ಕಾಕುತ್ಸ್ಥ! ಸುಖೀ ಭವ ಸಬಾಂಧವಃ ॥ ೨೧೦ ॥
ತಸ್ಯ ರೋಷಪರೀತಸ್ಯ ವಿಶ್ವಾಮಿತ್ರಸ್ಯ ಧೀಮತಃ ।
ಚಚಾಲ ವಸುಧಾ ಕೃತ್ಸ್ನಾ ವಿವೇಶ ಚ ಭಯಂ ಸುರಾನ್ ॥ ೨೧೧ ॥
ತ್ರಸ್ತರೂಪಂ ತು ವಿಜ್ಞಾಯ ಜಗತ್ಸರ್ವಂ ಮಹಾನೃಷಿಃ ।
ನೃಪತಿಂ ಸುವ್ರತೋ ಧೀರೋ ವಸಿಷ್ಠೋ ವಾಕ್ಯಮಬ್ರವೀತ್ ॥೨೧೨॥
ಇಕ್ಷ್ವಾಕೂಣಾಂ ಕುಲೇ ಜಾತಃ ಸಾಕ್ಷಾದ್ಧರ್ಮ ಇವಾಪರಃ ।
ಧೃತಿಮಾನ್ ಸುವ್ರತಃ ಶ್ರೀಮಾನ್ನ ಧರ್ಮಂ ಹಾತುಮರ್ಹಸಿ॥೨೧೩॥
ಸಂಶ್ರುತ್ಯೈವಂ ಕರಿಷ್ಯಾಮಿತ್ಯಕುರ್ವಾಣಸ್ಯ ರಾಘವ ।

---

೨೧೦. ಅಯ್ಯಾ ಕಕುತ್ಸ್ಥವಂಶದಲ್ಲಿ ಜನಿಸಿದ ರಾಜನೇ! ಇದು ನಿನಗೆ ತಕ್ಕದಾಗಿರುವುದಾದರೆ ನಾನು ಬಂದ ದಾರಿಹಿಡಿದು ಹೋಗುವೆನು. ಸುಳ್ಳು ಪ್ರತಿಜ್ಞೆಮಾಡಿದ ನೀನು ಬಂಧುಗಳೊಡನೆ ಸುಖಿಯಾಗಿರು."

೨೧೧. ಜ್ಞಾನಿಯಾದ ವಿಶ್ವಾಮಿತ್ರನು ಕೋಪಗೊಂಡಿರುವುದನ್ನು ಕಂಡು ಭೂಮಿಯೆಲ್ಲವೂ ಗಡಗಡನೆ ನಡುಗಿತು. ದೇವತೆಗಳನ್ನು ಭಯವು ಆಕ್ರಮಿಸಿತು.

೨೧೨. ಹೀಗೆ ಪ್ರಪಂಚವೆಲ್ಲವೂ ಭಯದಿಂದ ನಡುಗಿದ್ದನ್ನು ತಿಳಿದು ಮೂರುಕಾಲಗಳನ್ನರಿತ, ವ್ರತಗಳನ್ನು ಬಿಡದೆ ಆಚರಿಸುವ, ತಿಳುವಳಿಕೆಯುಳ್ಳ ವಸಿಷ್ಠನು ರಾಜನನ್ನು ಕುರಿತು ಹೇಳಿದನು.

೨೧೩. "ರಾಜನೇ! ಇಕ್ಷ್ವಾಕುವಂಶದಲ್ಲಿ ಹುಟ್ಟಿ ಎರಡನೆಯ ಧರ್ಮದೇವತೆಯಂತೆ ಇರುವೆ. ಮನೋಧೈರ್ಯವುಳ್ಳವನೂ, ವ್ರತಗಳನ್ನು ಬಿಡದವನೂ, ಅತಿಶಯವಾದ ಐಶ್ವರ್ಯವುಳ್ಳವನೂ ಆದ ನೀನು ಈಗ ನಿನ್ನ ಕುಲಧರ್ಮವನ್ನು ಬಿಡುವುದು ನ್ಯಾಯವಲ್ಲ.

೨೧೪. ರಘುಕುಲದಲ್ಲಿ ಜನಿಸಿದ ದಶರಥನೇ! "ಈರೀತಿ ನಡೆಯುವೆನೆಂದು" ಪ್ರತಿಜ್ಞೆಮಾಡಿ ಅದರಂತೆ ನಡೆಯದಿದ್ದವನಿಗೆ ಅವನು ಮಾಡಿದ

ಇಷ್ಟಾಪೂರ್ತವಧೋ ಭೂಯಾತ್ತಸ್ಮಾದ್ರಾಮಂ ವಿಸರ್ಜಯ॥ ೨೧೪ ॥

ಕೃತಾಸ್ತ್ರಮಕೃತಾಸ್ತ್ರಂ ವಾ ನೈನಂ ಶಕ್ಷ್ಯಂತಿ ರಾಕ್ಷಸಾಃ ।
ಗುಪ್ತಂ ಕುಶಿಕಪುತ್ರೇಣ ಜ್ವಲನೇನಾಮೃತಂ ಯಥಾ ॥ ೨೧೫ ॥

ಏಷ ವಿಗ್ರಹವಾನ್ ಧರ್ಮಃ ಏಷ ವೀರ್ಯವತಾಂ ವರಃ ।
ಏಷ ಬುದ್ಧ್ಯಾಧಿಕೋ ಲೋಕೇ ತಪಸಶ್ಚ ಪರಾಯಣಮ್ ॥ ೨೧೬ ॥

ಏಷೋಽಸ್ತ್ರಂ ವಿವಿಧಂ ವೇತ್ತಿ ತ್ರೈಲೋಕ್ಯೇ ಸಚರಾಚರೇ ।
ನೈನಮನ್ಯಃ ಪುಮಾನ್ ವೇತ್ತಿ ನ ಚ ವೇತ್ಸ್ಯಂತಿ ಕೇಚನ ॥ ೨೧೭ ॥

ನ ದೇವಾ ನರ್ಷಯಃ ಕೇಚಿನ್ನಾಸುರಾ ನ ಚ ರಾಕ್ಷಸಾಃ ।
ಗಂಧರ್ವಯಕ್ಷಪ್ರವರಾಃ ಸಕಿನ್ನರಮಹೋರಗಾಃ ॥ ೨೧೮ ॥

ಯಾಗ ದಾನ ಮೊದಲಾದ ಧರ್ಮಗಳೆಲ್ಲವೂ ಫಲವನ್ನು ಕೊಡದೆ ಹಾಳಾಗುವುವು. ಆದುದರಿಂದ ರಾಮನನ್ನು ಕಳುಹಿಸು.

೨೧೫. ಅಸ್ತ್ರವಿದ್ಯೆಯಲ್ಲಿ ರಾಮನು ಪಂಡಿತನಾದರೂ ಅಲ್ಲದಿದ್ದರೂ ಅಗ್ನಿಚಕ್ರವು ಅಮೃತವನ್ನು ಕಾಪಾಡಿದಹಾಗೆ ವಿಶ್ವಾಮಿತ್ರನು ರಾಮನನ್ನು ಕಾಪಾಡುತ್ತಿರಲು ರಾಕ್ಷಸರು ಅವನನ್ನು ಏನುಮಾಡಲೂ ಶಕ್ತರಾಗುವುದಿಲ್ಲ.

೨೧೬. ಈ ಮುನಿಯು ಮೂರ್ತಿಮತ್ತಾಗಿ ಬಂದ ಧರ್ಮದೇವತೆ. ಇವನು ಪರಾಕ್ರಮಶಾಲಿಗಳಲ್ಲಿ ಉತ್ತಮನು. ಬುದ್ಧಿಯಲ್ಲಿ ಇವನಿಗೆ ಮೇಲಾದವನು ಈ ಲೋಕದಲ್ಲಿಲ್ಲ. ತಪಸ್ಸಿಗೆ ಇವನು ತೌರುಮನೆ.

೨೧೭. ಎಲ್ಲಾ ವಿಧವಾದ ಅಸ್ತ್ರಗಳನ್ನು ಚೆನ್ನಾಗಿ ಬಲ್ಲವನು. ಇವನ ಹಾಗೆ ಯಾರೂ ಇಷ್ಟು ಅಸ್ತ್ರಗಳನ್ನು ಮೂರುಲೋಕದಲ್ಲಿಯೂ ಅರಿತಿಲ್ಲ. ಅರಿಯುವುದೂ ಇಲ್ಲ.

೨೧೮. ದೇವತೆಗಳು, ಋಷಿಗಳು, ಅಸುರರು, ರಾಕ್ಷಸರು, ಗಂಧರ್ವರು ಯಕ್ಷರು, ಕಿನ್ನರರು, ಉರಗರು ಮೊದಲಾಗಿ ಯಾರೊಬ್ಬರೂ ಇವನರಿತಿರುವ ಅಸ್ತ್ರಗಳನ್ನು ತಿಳಿಯಲಾರರು.

ಏವಂವೀರ್ಯೋ ಮಹಾತೇಜಾ ವಿಶ್ವಾಮಿತ್ರೋ ಮಹಾಯಶಾಃ ।
ನ ರಾಮಗಮನೇ ರಾಜನ್ ಸಂಶಯಂ ಗಂತುಮರ್ಹಸಿ ॥ ೨೧೯ ॥

ತೇಷಾಂ ನಿಗ್ರಹಣೇ ಶಕ್ತಃ ಸ್ವಯಂ ಚ ಕುಶಿಕಾತ್ಮಜಃ ।
ತವ ಪುತ್ರಹಿತಾರ್ಥಾಯ ತ್ವಾಮುಪೇತ್ಯಾಭಿಯಾಚತೇ ॥ ೨೨೦ ॥

ತಥಾ ವಸಿಷ್ಠೇ ಬ್ರುವತಿ ರಾಜಾ ದಶರಥಃ ಸುತಮ್ ।
ಪ್ರಹೃಷ್ಟವದನೋ ರಾಮಮಾಜುಹಾವ ಸಲಕ್ಷ್ಮಣಮ್ ॥ ೨೨೧ ॥

ಕೃತಸ್ವಸ್ತ್ಯಯನಂ ಮಾತ್ರಾ ಪಿತ್ರಾ ದಶರಥೇನ ಚ ।
ಪುರೋಧಸಾ ವಸಿಷ್ಠೇನ ಮಂಗಲೈರಭಿಮಂತ್ರಿತಮ್ ॥ ೨೨೨ ॥

ಸ ಪುತ್ರಂ ಮೂರ್ಧ್ನ್ಯುಪಾಘ್ರಾಯ ರಾಜಾ ದಶರಥಃ ಪ್ರಿಯಮ್ ।

---

೨೧೯. ಮಹಾ ತೇಜಸ್ವಿಯೂ ಮತ್ತು ಕೀರ್ತಿಶಾಲಿಯೂ ಆದ ವಿಶ್ವಾಮಿತ್ರನು ಇಂತಹ ಸಾಮರ್ಥ್ಯವುಳ್ಳವನು. ಆದುದರಿಂದ ರಾಜನೇ! ಇವನ ಜೊತೆಯಲ್ಲಿ ರಾಮನು ಹೋಗುವ ವಿಷಯದಲ್ಲಿ ಸ್ವಲ್ಪವೂ ಸಂಶಯಪಡ ಬೇಡ.

೨೨೦. ಆ ರಾಕ್ಷಸರನ್ನು ತಾನೇ ಕೊಲ್ಲಲು ಸಮರ್ಥನಾಗಿರುವನಾದರೂ ಕುಶಿಕನಮಗನಾದ ಈ ಮುನಿಯು ನಿನ್ನ ಮಗನ ಕಲ್ಯಾಣಕ್ಕಾಗಿಯೇ ನಿನ್ನ ಬಳಿ ಬಂದು ಹೀಗೆ ಬೇಡುತ್ತಿರುವನು.”

೨೨೧. ಆರೀತಿ ವಸಿಷ್ಠಮುನಿಯು ಹೇಳಲು ದಶರಥರಾಜನು ಸಂತೋಷದಿಂದ ಅರಳಿದ ಮುಖವುಳ್ಳವನಾಗಿ ಲಕ್ಷ್ಮಣನೊಡನೆ ರಾಮನನ್ನು ಕರೆತರಿಸಿದನು.

೨೨೨-೩. ತಾಯಂದಿರು ಮಂಗಳಕೋರಿ ಪುರೋಹಿತನಾದ ವಸಿಷ್ಠನಿಂದ ಮಂಗಳಕರವಾದ ಮಂತ್ರಗಳಿಂದ ಆಶೀರ್ವದಿಸಲ್ಪಟ್ಟ, ತಂದೆಯೆನಿಸಿದ ತನ್ನಿಂದಲೂ ಕೋರಿದ ಶುಭಗಳಿಗೆ ಗಾತ್ರರಾದ ಪ್ರಿಯರಾದ ಆ ಮಕ್ಕಳನ್ನು ತಲೆಯಲ್ಲಿ ಆಘ್ರಾಣಿಸಿ, ದಶರಥನು ಯಾವ ವಿಧವಾದ ಯೋಚನೆಯನ್ನೂ ಮಾಡದೇ ಮನಃಪೂರ್ವಕವಾಗಿ ಕುಶಿಕಪುತ್ರನಾದ ವಿಶ್ವಾಮಿತ್ರ

ದಧೌ ಕುಶಿಕಪುತ್ರಾಯ ಸುಪ್ರೀತೇನಾಂತರಾತ್ಮನಾ || ೨೨೩
ತತೋ ವಾಯುಃ ಸುಖಸ್ಪರ್ಶೋ ವಿರಜಸ್ಕೋ ವವೌ ತದಾ ।
ವಿಶ್ವಾಮಿತ್ರಗತಂ ದೃಷ್ಟ್ವಾ ರಾಮಂ ರಾಜೀವಲೋಚನಮ್ || ೨೨೪ ||
ಪುಷ್ಪವೃಷ್ಟಿರ್ಮಹತ್ಯಾಸೀದ್ದೇವದುಂದುಭಿನಿಸ್ವನೈಃ ।
ಶಂಖದುಂದುಭಿನಿರ್ಘೋಷಃ ಪ್ರಯಾತೇ ತು ಮಹಾತ್ಮನಿ || ೨೨೫ ||
ವಿಶ್ವಾಮಿತ್ರೋ ಯಯಾವಗ್ರೇ ತತೋ ರಾಮೋ ಧನುರ್ಧರಃ ।
ಕಾಕಪಕ್ಷಧರೋ ಧನ್ವೀ ತಂ ಚ ಸೌಮಿತ್ರಿರನ್ವಗಾತ್ || ೨೨೬ ||
ಅಧ್ಯರ್ಧಯೋಜನಂ ಗತ್ವಾ ಸರಯ್ವಾ ದಕ್ಷಿಣೇ ತಟೇ ।
ರಾಮೇತಿ ಮಧುರಾಂ ವಾಣೀಂ ವಿಶ್ವಾಮಿತ್ರೋಽಭ್ಯಭಾಷತ || ೨೨೭ ||

ಮುನಿಗೆ ಒಪ್ಪಿಸಿದನು.

೨೨೪. ಕೆಂದಾವರೆಯ ಕಣ್ಣುಳ್ಳ ರಾಮನನ್ನು ವಿಶ್ವಾಮಿತ್ರನು ಪಡೆದುದನ್ನು ಕಂಡು ಗಾಳಿಯು ಧೂಳು ಸಂಬಂಧವಿಲ್ಲದೇ ಹಿತಕರವಾಗಿ ಮೆಲ್ಲನೆ ಬೀಸಿತು.

೨೨೫. ಮಹಾತ್ಮನಾದ ಮುನಿಯು ಅವನನ್ನು ಕರೆದುಕೊಂಡು ಹೊರಡಲು ದೇವಲೋಕದಿಂದ ಕುಸುಮವೃಷ್ಟಿಯು ಸುರಿಯಿತು. ದೇವಲೋಕದ ದುಂದುಭಿ ವಾದ್ಯಗಳೂ ದಶರಥಮಹಾರಾಜನ ಶಂಖಗಳೂ, ಮತ್ತು ದುಂದುಭಿವಾದ್ಯಗಳೂ ಮೊಳಗಿದವು.

೨೨೬. ವಿಶ್ವಾಮಿತ್ರನು ಮುಂದೆ ಹೊರಡಲು ಅವನ ಹಿಂದೆ ಬಿಲ್ಲನ್ನು ಹಿಡಿದುಕೊಂಡು ರಾಮನು ಹೊರಟನು. ಜೈತಲೆಯನ್ನುಳ್ಳ ಬಿಲ್ಲನ್ನು ಹಿಡಿದಿರುವ ಲಕ್ಷ್ಮಣನು ಅವನನ್ನು ಹಿಂಬಾಲಿಸಿದನು.

೨೨೭-೯. ಒಂದೂವರೆ ಯೋಜನದಷ್ಟು ದೂರ ದಾರಿ ನಡೆದು ಸರಯೂ ನದಿಯ ದಕ್ಷಿಣ ತೀರದಲ್ಲಿ ನಿಂತು ವಿಶ್ವಾಮಿತ್ರಮುನಿಯು ರಾಮ! ಎಂದು ಪ್ರೀತಿಯಿಂದ ಮಧುರವಾಗಿ ಕೂಗಿ ಹೀಗೆ ಹೇಳಿದನು. "ಮಗು

ಗೃಹಾಣ ವತ್ಸ ಸಲಿಲಂ ಮಾ ಭೂತ್ಕಾಲಸ್ಯ ಪರ್ಯಯಃ ॥ ೨೨೮ ॥
ಮಂತ್ರಗ್ರಾಮಂ ಗೃಹಾಣ ತ್ವಂ ಬಲಾಮತಿಬಲಾಂ ತಥಾ ।

ನ ಶ್ರಮೋ ನ ಜ್ವರೋ ವಾ ತೇ ನ ರೂಪಸ್ಯ ವಿಪರ್ಯಯಃ ।
ನ ಚ ಸುಪ್ತಂ ಪ್ರಮತ್ತಂ ವಾ ಧರ್ಷಯಿಷ್ಯಂತಿ ನೈಋತಾಃ ॥
ತ್ರಿಷು ಲೋಕೇಷು ವೈ ರಾಮ ನ ಭವೇತ್ಸದೃಶಸ್ತ್ವಯಾ ॥ ೨೨೯ ॥

ಬಲಾಮತಿಬಲಾಂ ಚೈವ ಪಠತಃ ಪಥಿ ರಾಘವ ।
ಕ್ಷುತ್ಪಿಪಾಸೇ ನ ತೇ ರಾಮ ಭವಿಷ್ಯೇತೇ ನರೋತ್ತಮ ॥ ೨೩೦ ॥
ತತೋ ರಾಮೋ ಜಲಂ ಸ್ಪೃಷ್ಟ್ವಾ ಪ್ರಹೃಷ್ಟವದನಃ ಶುಚಿಃ ।
ಪ್ರತಿಜಗ್ರಾಹ ತೇ ವಿದ್ಯೇ ಮಹರ್ಷೇರ್ಭಾವಿತಾತ್ಮನಃ ॥ ೨೩೧ ॥

ಬೇಗ ಆಚಮನ ಮಾಡು. ಕಾಲವಿಳಂಬ ಮಾಡಬೇಡ. ಎಲ್ಲಾ ಮಂತ್ರಗಳೂ ಅಡಗಿರುವಂತಹ "ಬಲಾ ಅತಿಬಲಾ," ವಿದ್ಯೆಗಳನ್ನು ಸ್ವೀಕರಿಸು. ಇವುಗಳ ಮಹಿಮೆಯಿಂದ ನಿನಗೆ ಶ್ರಮವುಂಟಾಗುವುದಿಲ್ಲ. ತಾಪವು ಸಂಭವಿಸುವುದಿಲ್ಲ. ಶರೀರವು ಬಾಡುವುದಿಲ್ಲ. ನೀನು ನಿದ್ರೆ ಮಾಡುತ್ತಿದ್ದರೂ, ಮೈಮರೆತಿದ್ದರೂ ರಾಕ್ಷಸರು ನಿನಗೆ ಯಾವ ವಿಧವಾದ ಅಪಾಯವನ್ನೂ ಉಂಟುಮಾಡಲು ಸಮರ್ಥರಾಗುವುದಿಲ್ಲ. ಅಲ್ಲದೇ ಮೂರು ಲೋಕದಲ್ಲಿಯೂ ನಿನಗೆ ಯಾವನೂ ಸಮನಾಗತಕ್ಕವನು ಆಗಲಾರನು.

೨೩೦. ರಘುಕುಲದಲ್ಲಿ ಜನಿಸಿದವನೇ! ನರಶ್ರೇಷ್ಠನಾದ ರಾಮ! ಬಲಾ ಅತಿಬಲಗಳೆಂಬ ಈ ಮಂತ್ರಗಳನ್ನು ಜಪಿಸುವ ನಿನಗೆ ದಾರಿಯಲ್ಲಿ ಹಸಿವು ಬಾಯಾರಿಕೆಗಳು ಉಂಟಾಗುವುದಿಲ್ಲ".

೨೩೧. ಎಂದು ಮುನಿಯು ಹೇಳಲು ರಾಮನು ವಿಧಿವತ್ತಾಗಿ ಆಚಮನ ಮಾಡಿ ಸಂತೋಷದಿಂದ ಅರಳಿದ ಮುಖವುಳ್ಳವನಾಗಿ ಶುಚಿಯಾಗಿ ಆತ್ಮ ಸ್ವರೂಪವನ್ನು ಅರಿತಿರುವ ಮುನಿಯಿಂದ ಆ ವಿದ್ಯೆಗಳನ್ನು ಉಪದೇಶ ಹೊಂದಿದನು.

ವಿದ್ಯಾಸಮುದಿತೋ ರಾಮಃ ಶುಶುಭೇ ಭೂರಿವಿಕ್ರಮಃ ।
ಸಹಸ್ರರಶ್ಮಿರ್ಭಗವಾನ್ ಶರದೀವ ದಿವಾಕರಃ ॥ ೨೩೨ ॥
ಊಷುಸ್ತಾಂ ರಜನೀಂ ತೀರೇ ಸರಯ್ವಾಃ ಸುಸುಖಂ ತ್ರಯಃ ॥
ಪ್ರಭಾತಾಯಾಂ ತು ಶರ್ವರ್ಯಾಂ ವಿಶ್ವಾಮಿತ್ರೋ ಮಹಾಮುನಿಃ ।
ಅಭ್ಯಭಾಷತ ಕಾಕುತ್ಸ್ಥಂ ಶಯಾನಂ ಪರ್ಣಸಂಸ್ತರೇ ॥ ೨೩೪ ॥
ಕೌಸಲ್ಯಾಸುಪ್ರಜಾ ರಾಮ ಪೂರ್ವಾ ಸಂಧ್ಯಾ ಪ್ರವರ್ತತೇ ।
ಉತ್ತಿಷ್ಠ ನರಶಾರ್ದೂಲ ಕರ್ತವ್ಯಂ ದೈವಮಾಹ್ನಿಕಮ್ ॥ ೨೩೫ ॥
ತಸ್ಯರ್ಷೇಃ ಪರಮೋದಾರಂ ವಚಃ ಶ್ರುತ್ವಾ ನೃಪಾತ್ಮಜೌ ।
ಸ್ನಾತ್ವಾ ಕೃತೋದಕೌ ವೀರೌ ಜೇಪತುಃ ಪರಮಂ ಜಪಮ್ ॥

---

೨೩೨. ಹಾಗೆ ವಿದ್ಯೆಯನ್ನು ಪಡೆದುಕೊಂಡ, ಮಹಾಪರಾಕ್ರಮಶಾಲಿಯಾದ ರಾಮನು ಸಾವಿರ ಕಿರಣಗಳುಳ್ಳ ಸೂರ್ಯಭಗವಂತನು ಶರತ್ಕಾಲದಲ್ಲಿ ಶೋಭಿಸುವಂತೆ ಬಹಳವಾಗಿ ಶೋಭಿಸಿದನು.

೨೩೩. ಬಳಿಕ ಆ ಮೂವರೂ ಸರಯೂನದಿಯ ದಡದಲ್ಲಿ ಅಂದಿನ ರಾತ್ರಿಯನ್ನು ಸುಖವಾಗಿ ಕಳೆದರು.

೨೩೪. ರಾತ್ರಿ ಕಳೆದು ಬೆಳಗಾಗಲು ಎಲೆಗಳಿಂದ ಕೂಡಿದ ದರ್ಭೆಗಳ ಹಾಸಿಗೆಯಲ್ಲಿ ಮಲಗಿ ನಿದ್ದೆಮಾಡುತ್ತಿರುವ ಕಕುತ್ಸ್ಥವಂಶದಲ್ಲಿ ಜನಿಸಿದರಾಮನನ್ನು ಎಚ್ಚರಗೊಳಿಸಲು ವಿಶ್ವಾಮಿತ್ರಮುನಿಯು ಹೀಗೆ ಕೂಗಿಹೇಳಿದನು.

೨೩೫. "ಕೌಸಲ್ಯೆಯ ಮುದ್ದು ಮಗನೇ! ಮಾನವ ಸಿಂಹನೇ ರಾಮ! ಏಳು; ಪ್ರಾತಃಕಾಲದ ಸಂಧ್ಯೆಯು ಸಮೀಪಿಸಿತು. ದೈವವಿಹಿತವಾಗಿರುವ ನಿತ್ಯಕರ್ಮಗಳನ್ನು ಮಾಡಬೇಕು".

೨೩೬. ಆ ಮುನಿಯ ಗಂಭೀರವಾದ ಮಾತನ್ನು ಕೇಳಿ ವೀರ ರಾಜಕುಮಾರರಿಬ್ಬರೂ ಎದ್ದು ಸ್ನಾನ ಸಂಧ್ಯಾವಂದನೆಗಳನ್ನು ಮಾಡಿ ಜಪಗಳಲ್ಲಿ ಅತ್ಯುತ್ತಮವಾದ ಗಾಯತ್ರೀ ಜಪವನ್ನು ಜಪಿಸಿದರು.

ಕೃತಾನ್ಹಿಕೌ ಮಹಾವೀರ್ಯೌ ವಿಶ್ವಾಮಿತ್ರಂ ತಪೋಧನಮ್ |
ಅಭಿವಾದ್ಯಾಭಿಸಂಹೃಷ್ಟೌ ಗಮನಾಯೋಪತಸ್ಥತುಃ || ೨೩೭ ||
ಸ ವನಂ ಘೋರಸಂಕಾಶಂ ದೃಷ್ಟ್ವಾ ನೃಪವರಾತ್ಮಜಃ |
ಅವಿಪ್ರಹತಮೈಕ್ಷ್ವಾಕಃ ಪಪ್ರಚ್ಛ ಮುನಿಪುಂಗವಮ್ || ೨೩೮ ||
ಅಹೋ ವನಮಿದಂ ದುರ್ಗಂ ಝಿಲ್ಲಿಕಾಗಣನಾದಿತಮ್ |
ಸಂಕೀರ್ಣಂ ಬದರೀಭಿಶ್ಚ ಕಿಂ ನ್ವೇತದ್ದಾರುಣಂ ವನಮ್ || ೨೩೯ ||
ತಮುವಾಚ ಮಹಾತೇಜಾ ವಿಶ್ವಾಮಿತ್ರೋ ಮಹಾಮುನಿಃ |
ಶ್ರೂಯತಾಂ ವತ್ಸ ಕಾಕುತ್ಸ್ಥ ಯಸ್ಯೈತದ್ದಾರುಣಂ ವನಮ್ || ೨೪೦ ||
ಏತೌ ಜನಪದೌ ಸ್ಫೀತೌ ಪೂರ್ವಮಾಸ್ತಾಂ ನರೋತ್ತಮ |
ಮಲದಾಶ್ಚ ಕರೂಶಾಶ್ಚ ದೇವನಿರ್ಮಾಣನಿರ್ಮಿತೌ || ೨೪೧ ||

---

೨೩೭. ಮಹಾವೀರರಾದ ರಾಮಲಕ್ಷ್ಮಣರು ಬೆಳಗ್ಗೆ ಮಾಡಬೇಕಾದ ನಿತ್ಯಕರ್ಮಗಳನ್ನು ಮಾಡಿ ಮುಗಿಸಿ ತಪೋನಿಧಿಯಾದ ಮುನಿಯನ್ನು ನಮಸ್ಕರಿಸಿ ಅವನೊಡನೆ ಸಂತೋಷವಾಗಿ ಅಲ್ಲಿಂದ ಮುಂದೆ ಹೊರಟರು.

೨೩೮-೯. ಎದುರುಗಡೆ ಬಹಳ ಭಯಂಕರವಾದ ಮತ್ತು ಜನಸಂಚಾರವಿಲ್ಲದ ಕಾಡೊಂದನ್ನು ಕಂಡು ರಾಜಕುಮಾರನಾದ ರಾಮನು ಮುನಿಶ್ರೇಷ್ಠನನ್ನು ಕುರಿತು ಕೇಳಿದನು. "ಅಬ್ಬ! ಎಂತಹ ಭಯಂಕರವಾದ ಕಾಡು ಎಲ್ಲೆಲ್ಲೂ ಕ್ಷುಲ್ಲಿಕೆಯೆಂಬ ಕೀಟಕಗಳ ಕೂಗು. ದಟ್ಟವಾಗಿ ಹರಡಿಕೊಂಡಿರುವ ಎಲಚೀಮರಗಳು? ಮುನಿಯೇ! ಭಯಂಕರವಾಗಿರುವ ಇದು, ಯಾವ ಕಾಡು? ಹೇಳು"

೨೪೦. ಇದನ್ನು ಕೇಳಿ ಮಹಾತೇಜಸ್ವಿಯಾದ ವಿಶ್ವಾಮಿತ್ರಮಹಾಮುನಿಯು ರಾಮನನ್ನು ಕುರಿತು ಹೇಳಿದನು. "ಮಗು ರಾಮ! ಕೇಳು. ಈ ಭಯಂಕರ ಕಾಡು ಯಾರದೆಂಬುದನ್ನು ಹೇಳುವೆನು.

೨೪೧. ಹಿಂದೆ ಇವು ದೇವತೆಗಳಿಂದ ನಿರ್ಮಾಣ ಮಾಡಲ್ಪಟ್ಟು ಧನಧಾನ್ಯಗಳಿಂದ ತುಂಬಿದ ಮಲದ ಕರೂಶಗಳೆಂಬ ದೇಶಗಳಾದ್ದವುಗಿ.

ಕಸ್ಯಚಿತ್ವಥ ಕಾಲಸ್ಯ ಯಕ್ಷೀ ವೈ ಕಾಮರೂಪಿಣೀ ।
ಬಲಂ ನಾಗಸಹಸ್ರಸ್ಯ ಧಾರಯಂತೀ ತದಾ ಹ್ಯಭೂತ್ ॥ ೨೪೨ ॥
ತಾಟಕಾ ನಾಮ ಭದ್ರಂ ತೇ ಭಾರ್ಯಾ ಸುಂದಸ್ಯ ಧೀಮತಃ ।
ಮಾರೀಚೋ ರಾಕ್ಷಸಃ ಪುತ್ರೋ ಯಸ್ಯಾಃ ಶಕ್ರಪರಾಕ್ರಮಃ॥ ೨೪೩ ॥
ಇಮೌ ಜನಪದೌ ನಿತ್ಯಂ ವಿನಾಶಯತಿ ರಾಘವ ।
ಮಲದಾಂಶ್ಚ ಕರೂಶಾಂಶ್ಚ ತಾಟಕಾ ದುಷ್ಟಚಾರಿಣೀ ॥ ೨೪೪ ॥
ಸೇಯಂ ಪಂಥಾನಮಾವೃತ್ಯ ವಸತ್ಯಧ್ಯರ್ಧಯೋಜನೇ ।
ನ ಹಿ ಕಶ್ಚಿದಿಮಂ ದೇಶಂ ಶಕ್ನೋತ್ಯಾಗಂತುಮೀದೃಶಮ್ ॥ ೨೪೫ ॥
ಪುರುಷಾದೀ ಮಹಾಯಕ್ಷೀ ವಿರೂಪಾ ವಿಕೃತಾನನಾ ।
ದೇಶಮುತ್ಸಾದಯತ್ಯೇನಮಗಸ್ತ್ಯಚರಿತಂ ಶುಭಮ್ ॥ ೨೪೬ ॥

೨೪೨-೩ ಹೀಗಿರಲು ಒಂದುಸಮಯ ಬೇಕಾದ ರೂಪವನ್ನು ಪಡೆಯುವ ಓರ್ವ ಯಕ್ಷಿಣಿಯು ಸಾವಿರ ಆನೆಯ ಬಲವುಳ್ಳವಳಾಗಿ ಹುಟ್ಟಿದಳು. ಅವಳ ಹೆಸರು ತಾಟಕೆ. ಅವಳು ಕುಶಲನಾದ ಸುಂದನೆಂಬುವನ ಹೆಂಡತಿ. ಇಂದ್ರನಷ್ಟು ಪರಾಕ್ರಮಶಾಲಿಯಾದ ಮಾರೀಚನೆಂಬ ರಾಕ್ಷಸನು ಅವಳ ಮಗ. ಭಯಪಡಬೇಡ.

೨೪೪. ರಾಮ! ದುಷ್ಟಚಾರಿಣಿಯಾದ ಆ ತಾಟಕೆಯು ಮಲದ ಕರೂಶಗಳೆಂಬ ಈ ದೇಶಗಳನ್ನು ನಿತ್ಯವೂ ಹಾಳುಮಾಡುತ್ತಿರುವಳು.

೨೪೫ ಅವಳು ಒಂದೂವರೆ ಯೋಜನ ದೂರದಲ್ಲಿ ಈ ದಾರಿಯನ್ನು ತಡೆದು ವಾಸಮಾಡುತ್ತಿರುವಳು. ಆದಕಾರಣ ಈ ಸ್ಥಳಕ್ಕೆ ಯಾವನೊಬ್ಬನೂ ಭಯದಿಂದ ಬರುವಹಾಗಿಲ್ಲ.

೨೪೬. ವಿಕಾರಗೊಂಡ ಮುಖವುಳ್ಳವಳೂ ಭಯಂಕರವಾದ ಆಕಾರವುಳ್ಳವಳೂ ಆದ ತಾಟಕೆಯು ಮನುಷ್ಯರನ್ನೆಲ್ಲಾ ಭುಜಿಸುವವಳಾಗಿ ಅಗಸ್ತ್ಯಮುನಿಗಳಿಗೆ, ವಾಸಸ್ಥಾನವಾಗಿದ್ದ ಈ ಪವಿತ್ರವಾದ ಪ್ರದೇಶವನ್ನು ಹಾಳುಮಾಡುತ್ತಿರುವಳು.

ಏನಾಂ ರಾಘವ ದುರ್ವೃತ್ತಾಂ ಯಕ್ಷೀಂ ಪರಮದಾರುಣಾವ್ |
ಗೋಬ್ರಾಹ್ಮಣಹಿತಾರ್ಥಾಯ ಜಹಿ ದುಷ್ಟಪರಾಕ್ರಮಾವ್॥ ೨೪೭ ॥
ನ ಹ್ಯೇನಾಂ ಶಾಪಸಂಸ್ಪೃಷ್ಟಾಂ ಕಶ್ಚಿದುತ್ಸಹತೇ ಪುಮಾನ್ |
ನಿಹಂತುಂ ತ್ರಿಷು ಲೋಕೇಷು ತ್ವಾಮೃತೇ ರಘುನಂದನ ॥ ೨೪೮ ॥
ನ ಹಿ ತೇ ಸ್ತ್ರೀವಧಕೃತೇ ಘೃಣಾ ಕಾರ್ಯಾ ನರೋತ್ತಮ |
ಚಾತುರ್ವರ್ಣ್ಯಹಿತಾರ್ಥಾಯ ಕರ್ತವ್ಯಂ ರಾಜಸೂನುನಾ ॥ ೨೪೯ ॥
ನೃಶಂಸಮನೃಶಂಸಂ ವಾ ಪ್ರಜಾರಕ್ಷಣಕಾರಣಾತ್ |
ಪಾವನಂ ವಾ ಸದೋಷಂ ವಾ ಕರ್ತವ್ಯಂ ರಕ್ಷತಾ ಸತಾ ॥ ೨೫೦ ॥
ರಾಜ್ಯಭಾರನಿಯುಕ್ತಾನಾಮೇಷ ಧರ್ಮಃ ಸನಾತನಃ |
ಅಧರ್ಮ್ಯಾಂ ಜಹಿ ಕಾಕುತ್ಸ್ಥ ಧರ್ಮೋ ಹ್ಯಸ್ಯಾ ನ ವಿದ್ಯತೇ॥ ೨೫೧ ॥

---

೨೪೭. ರಾಘವಾ ! ದುಷ್ಟ ನಡತೆಯುಳ್ಳ ಭಯಂಕರ ರೂಪವುಳ್ಳ ಮತ್ತು ನೀಚ ಪರಾಕ್ರಮವನ್ನು ಪಡೆದಿರುವ ಈ ಯಕ್ಷಿಣಿಯನ್ನು ಗೋವುಗಳ ಮತ್ತು ಬ್ರಾಹ್ಮಣರ ಕ್ಷೇಮಕ್ಕಾಗಿ ಸಂಹಾರಮಾಡು.

೨೪೮. ಅಗಸ್ತ್ಯ ಮಹರ್ಷಿಯ ಶಾಪಕ್ಕೆ ಗುರಿಯಾದ ಇವಳನ್ನು ಕೊಲ್ಲುವಂತಹ ಗಂಡಸು ನಿನ್ನನ್ನು ಬಿಟ್ಟರೆ ಮೂರು ಲೋಕಗಳಲ್ಲಿ ಯಾರೂ ಇಲ್ಲ.

೨೪೯. ಮಾನವಶ್ರೇಷ್ಠನೇ! ಹೆಂಗಸನ್ನು ಕೊಲ್ಲುವುದೆಂತೆಂದು ಜುಗುಪ್ಸೆ ಪಡಬಾರದು. ನೀನು ರಾಜಕುಮಾರನಾದುದರಿಂದ, ಬ್ರಹ್ಮ, ಕ್ಷತ್ರಿಯ. ವೈಶ್ಯ ಶೂದ್ರ ಎಂಬ ನಾಲ್ಕು ವರ್ಣಗಳ ಕ್ಷೇಮಕ್ಕಾಗಿ ಇದನ್ನು ಮಾಡಲೇಬೇಕು.

೨೫೦-೧ ಪ್ರಜೆಗಳನ್ನು ರಕ್ಷಿಸಲು ಏರ್ಪಟ್ಟಿರುವವನು ಪ್ರಜೆಗಳಿಗೆ ಕ್ಷೇಮವುಂಟಾಗುವ ಹಾಗಿದ್ದರೆ ಒಳ್ಳೆಯ ಕೆಲಸದಂತೆ ಕ್ರೂರವಾದುವನ್ನು, ಪಾಪಜನಕವಾದುದನ್ನೂ, ನಿಂದಿಸಲ್ಪಡತಕ್ಕದ್ದಾಗಿರುವ ಕಾರ್ಯವನ್ನೂ ಸಹ ಪ್ರಜೆಗಳ ಕ್ಷೇಮವನ್ನುದ್ದೇಶಿಸಿ ಮಾಡುವುದು ತಪ್ಪಲ್ಲ. ರಾಜ್ಯಭಾರವನ್ನು ಹೊತ್ತಿರುವ ರಾಜರಿಗೆ ಇದು ಶಾಶ್ವತವಾದ ಧರ್ಮವೇ ಆಗಿರುವುದು. ಆದಕಾರಣ ಕಾಕುತ್ಸ್ಥ! ಅಧರ್ಮಿಷ್ಠಳಾದ ಇವಳನ್ನು ಸಂಹಾರಮಾಡು. ಇವಳ ವಿಷಯದಲ್ಲಿ ಯಾವ ಧರ್ಮವೂ ಇಲ್ಲ.

ಮುನೇರ್ವಚನಮಕ್ಲೀಬಂ ಶ್ರುತ್ವಾ ನರವರಾತ್ಮಜಃ ।
ರಾಘವಃ ಪ್ರಾಂಜಲಿರ್ಭೂತ್ವಾ ಪ್ರತ್ಯುವಾಚ ದೃಢವ್ರತಃ ॥ ೧೫೨ ॥
ಪಿತುರ್ವಚನನಿರ್ದೇಶಾತ್ಪಿತುರ್ವಚನಗೌರವಾತ್ ।
ವಚನಂ ಕೌಶಿಕಸ್ಯೇತಿ ಕರ್ತವ್ಯಮವಿಶಂಕಯಾ ॥ ೧೫೩ ॥
ಅನುಶಿಷ್ಟೋಽಸ್ಮ್ಯಯೋಧ್ಯಾಯಾಂ ಗುರುಮಧ್ಯೇ ಮಹಾತ್ಮನಾ ।
ಪಿತ್ರಾ ದಶರಥೇನಾಹಂ ನಾವಜ್ಞೇಯಂ ಹಿ ತದ್ವಚಃ ॥ ೧೫೪ ॥
ಸೋಽಹಂ ಪಿತುರ್ವಚಃ ಶ್ರುತ್ವಾ ಶಾಸನಾದ್ಬ್ರಹ್ಮವಾದಿನಃ ।
ಕರಿಷ್ಯಾಮಿ ನ ಸಂದೇಹಸ್ತಾಟಕಾವಧಮುತ್ತಮಮ್ ॥ ೧೫೫ ॥
ಗೋಬ್ರಾಹ್ಮಣಹಿತಾರ್ಥಾಯ ದೇಶಸ್ಯಾಸ್ಯ ಸುಖಾಯ ಚ ।
ತವ ಚೈವಾಪ್ರಮೇಯಸ್ಯ ವಚನಂ ಕರ್ತುಮುದ್ಯತಃ ॥ ೧೫೬ ॥

---

೧೫೨. ಮುನಿಯ ಧೀರವಾದ ಈ ಮಾತನ್ನು ಕೇಳಿ ದೊಡ್ಡವರ ಮಾತನ್ನು ಮೀರಬಾರದೆಂಬ ವ್ರತವನ್ನು ಧೃಡವಾಗಿ ಪಾಲಿಸುವ ರಾಮನು ತನ ಕೈಗಳನ್ನು ಜೋಡಿಸಿಕೊಂಡು ಮುನಿಯನ್ನು ಕುರಿತು ಇಂತೆಂದನು.

೧೫೩-೫೬. "ಮುನಿಯೇ! ನನ್ನ ತಂದೆಯು ನನಗೆ ಮಾಡಿರುವ ಅಪ್ಪಣೆಯಕಾರಣದಿಂದಲೂ ಅದರಲ್ಲಿ ನನಗಿರುವ ಗೌರವದಿಂದಲೂ ಕೌಶಿಕನ ಮಾತೆಂಬುದರಿಂದಲೂ ನೀನು ಹೇಳುವುದೆಲ್ಲವನ್ನೂ ವಿಚಾರ ಮಾಡದೇ ನಡೆಸಲು ಸಿದ್ಧನಾಗಿರುವೆನು. ಅಯೋಧ್ಯೆಯಲ್ಲಿ ದೊಡ್ಡವರ ಮುಂದೆ ಮಹಾತ್ಮನಾದ, ನನ್ನ ತಂದೆಯಾದ ದಶರಥ ಮಹಾರಾಜನು "ವಿಶ್ವಾಮಿತ್ರಮುನಿಯು ಏನನು ಹೇಳುವನೋ ಅದನ್ನು ನೀನು ತಪ್ಪದೇ ನಡೆಸಬೇಕೆಂದು ಅಪ್ಪಣೆ ಮಾಡಿರುವನು. ಅದು ತಳ್ಳತಕ್ಕದ್ದಲ್ಲ. ಆದುದರಿಂದ ನಾನು ನನ್ನ ತಂದೆಯ ಮಾತಿನಂತೆ ಬ್ರಹ್ಮಜ್ಞಾನಿಯಾದ ನಿನ್ನ ಅಪ್ಪಣೆಯಿಂದ ತಾಟಕಿಯನ್ನು ಸಂಹಾರ ಮಾಡುವೆನು. ಹಸುಗಳಿಗೆ, ಬ್ರಾಹ್ಮಣರಿಗೆ, ಹಿತವುಂಟಾಗುವುದಕ್ಕೂ ಮತ್ತು ಈ ದೇಶಕ್ಕೆ ಕ್ಷೇಮವುಂಟಾಗುವುದಕ್ಕಾಗಿಯೂ ಮಹಾಮಹಿಮೆಯುಳ್ಳ ನಿನ್ನ ಮಾತನ್ನು ನಡೆಸಲು ಸಿದ್ಧನಿರುವೆನು".

ಏವಮುಕ್ತ್ವಾ ಧನುರ್ಮಧ್ಯೇ ಬಧ್ವಾ ಮುಷ್ಟಿಮರಿಂದಮಃ |
ಜ್ಯಾಘೋಷಮಕರೋತ್ತೀವ್ರಂ ದಿಶಃ ಶಬ್ದೇನ ನಾದಯನ್ ೨೫೭ ॥
ತಂ ಶಬ್ದಮಭಿನಿಧ್ಯಾಯ ರಾಕ್ಷಸೀ ಕ್ರೋಧಮೂರ್ಛಿತಾ |
ಅಭಿದುದ್ರಾವ ಕಾಕುತ್ಸ್ಥಂ ಲಕ್ಷ್ಮಣಂ ಚ ವಿನೇದುಷೀ ॥ ೨೫೮ ॥
ತಾಮಾಪತಂತೀಂ ವೇಗೇನ ವಿಕ್ರಾಂತಾಮಶನೀಮಿವ |
ಶರೇಣೋರಸಿ ವಿವ್ಯಾಧ ಸಾ ಪಪಾತ ಮಮಾರ ಚ ॥ ೨೫೯ ॥
ತಾಂ ಹತಾಂ ಭೀಮಸಂಕಾಶಾಂ ದೃಷ್ಟ್ವಾ ಸುರಪತಿಸ್ತದಾ |
ಸಾಧು ಸಾಧ್ವಿತಿ ಕಾಕುತ್ಸ್ಥಂ ಸುರಾಶ್ಚ ಸಮಪೂಜಯನ್ ॥ ೨೬೦ ॥
ತತೋ ಮುನಿವರಃ ಪ್ರೀತಸ್ತಾಟಕಾವಧತೋಷಿತಃ |
ಮೂರ್ಧ್ನಿ ರಾಮಮುಪಾಘ್ರಾಯ ಇದಂ ವಚನಮಬ್ರವೀತ್ ॥

---

೨೫೭. ಎಂದು ಹೇಳಿ ಶತ್ರುಗಳನ್ನು ಅಡಗಿಸುವ ರಾಮನು ಬಿಲ್ಲಿನ ಮಧ್ಯಭಾಗವನ್ನು ಗಟ್ಟಿಯಾಗಿ ಕೈಮುಷ್ಟಿಯಿಂದ ಹಿಡಿದಪ್ಪಿ ಬಿಲ್ಲಿನ ದಾರವನ್ನು ಕಟ್ಟಿ ಬಲವಾಗಿ ತಟ್ಟಿದನು. ಅದರಿಂದುಂಟಾದ ಶಬ್ದವು ಹತ್ತು ದಿಕ್ಕುಗಳನ್ನು ಧ್ವನಿಗೊಳಿಸಿತು.

೨೫೮. ಆ ಶಬ್ದವನ್ನು ಕೇಳಿ ಕೋಪಾವೇಶಗೊಂಡು ರಾಕ್ಷಸಿಯು ಗರ್ಜಿಸುತ್ತಾ ರಾಮ ಲಕ್ಷ್ಮಣರ ಮೇಲೆ ನುಗ್ಗಿಬಂದಳು.

೨೫೯. ಸಿಡಿಲು ಬಡಿಯುವಂತೆ ವೇಗವಾಗಿ ಬಂದು ಮೇಲೆ ಬೀಳುತ್ತಿರುವ ಅವಳನ್ನು ರಾಮನು ಬಾಣದಿಂದ ಎದೆಯಲ್ಲಿ ಹೊಡೆದನು. ಅವಳು ಕೆಳಕ್ಕುರುಳಿ ಸತ್ತಳು.

೨೬೦. ಭಯಂಕರ ರೂಪವುಳ್ಳ ಅವಳು ಸತ್ತದ್ದನ್ನು ಕಂಡು ದೇವೇಂದ್ರನು ಮತ್ತು ದೇವತೆಗಳು ಬಂದು “ಸಾಧು ಸಾಧು” ಎಂದು ಬಹಳವಾಗಿ ರಾಮನನ್ನು ಶ್ಲಾಘಿಸಿದರು.

೨೬೧. ತಾಟಕೆಯನ್ನು ಸಂಹರಿಸಿದುದರಿಂದ ಸಂತೋಷಗೊಂಡ ಮುನಿಯು ಬಳಿಕ ಪ್ರೀತಿಯಿಂದ ರಾಮನನ್ನು ತಲೆಯಲ್ಲಿ ಆಘ್ರಾಣಿಸಿ ಈ ಮಾತನ್ನಂದನು.

ಪರಿತುಷ್ಟೋಽಸ್ಮಿ ಭದ್ರಂ ತೇ ರಾಜಪುತ್ರ ಮಹಾಯಶಃ ।
ಪ್ರೀತ್ಯಾ ಪರಮಯಾ ಯುಕ್ತೋ ದದಾಮ್ಯಸ್ತ್ರಾಣಿ ಸರ್ವಶಃ
ದೇವಾಸುರಗಣಾನ್ ವಾಪಿ ಸಗಂಧರ್ವೋರಗಾನಪಿ ।
ಯೈರಮಿತ್ರಾನ್ ಪ್ರಸಹ್ಯಾಜೌ ವಶೀಕೃತ್ಯ ಜೇಷ್ಯಸಿ || ೨೬೩ ||
ಏತಾನ್ ರಾಮ ಮಹಾಬಾಹೋ ಕಾಮರೂಪಾನ್ಮಹಾಬಲಾನ್ ।
ಗೃಹಾಣ ಪರಮೋದಾರಾನ್ ಕ್ಷಿಪ್ರಮೇವ ನೃಪಾತ್ಮಜ || ೨೬೪ ||
ಸ್ಥಿತಸ್ತು ಪ್ರಾಙ್‌ಮುಖೋ ಭೂತ್ವಾ ಶುಚಿರ್ಮುನಿವರಸ್ತದಾ ।
ದದೌ ರಾಮಾಯ ಸುಪ್ರೀತೋ ಮಂತ್ರಗ್ರಾಮಮನುತ್ತಮಮ್ ||
ಪ್ರತಿಗೃಹ್ಯ ತತೋಽಸ್ತ್ರಾಣಿ ಪ್ರಹೃಷ್ಟವದನಃ ಶುಚಿಃ ।

---

೨೬೨. "ಮಹಾಕೀರ್ತಿಯನ್ನು ಪಡೆದಿರುವ ರಾಜಕುಮಾರ! ನೀನು ಮಾಡಿದ ಕಾರ್ಯಗಳಿಂದ ನಾನು ಬಹಳ ಸಂತೋಷಗೊಂಡಿರುವೆನು. ನಿನಗೆ ಕ್ಷೇಮವುಂಟಾಗಲಿ. ನನ್ನ ಮನಸ್ಸಿನಲ್ಲಿ ಉಂಟಾದ ಅತಿಯಾದ ಸಂತೋಷದಿಂದ ನಿನಗೆ ಎಲ್ಲಾ ಅಸ್ತ್ರಗಳನ್ನೂ ಉಪದೇಶ ಮಾಡುವೆನು.

೨೬೩. ಶತ್ರುಗಳಾಗಿ ಗಂಧರ್ವರ, ಮತ್ತು ಉರಗರ, ದೇವತೆಗಳ ಮತ್ತು ಅಸುರರ ಗುಂಪುಗಳು ನಿನ್ನಮೇಲೆ ಯುದ್ಧಮಾಡಲು ಬಂದರೂ, ಅವೆಲ್ಲವನ್ನೂ ನೀನು ಈ ಅಸ್ತ್ರಗಳಿಂದ ಅಡಗಿಸಿ ಜಯವನ್ನು ಪಡೆಯುವಿ.

೨೬೪. ಭುಜಪರಾಕ್ರಮವುಳ್ಳ ರಾಜಪುತ್ರ ರಾಮ! ತಮಗೆ ಇಷ್ಟವಾದ ರೂಪವನ್ನು ತಾಳಬಲ್ಲ ತುಂಬ ಬಲವುಳ್ಳ ಅತಿಶ್ರೇಷ್ಠವಾದ ಈ ಅಸ್ತ್ರಗಳನ್ನು ಬೇಗ ನನ್ನಿಂದ ಸ್ವೀಕರಿಸು".

೨೬೫. ಎಂದು ಹೇಳಿ ಮುನಿಶ್ರೇಷ್ಠನು ಶುಚಿಯಾಗಿ ಪೂರ್ವಾಭಿಮುಖವಾಗಿ ಇದ್ದು ವಿಧಿವತ್ತಾಗಿ ಪ್ರೀತಿಯಿಂದ ರಾಮನಿಗೆ ಎಲ್ಲಾ ಉತ್ತಮೋತ್ತಮವಾದ ಅಸ್ತ್ರಗಳನ್ನು ಉಪದೇಶಮಾಡಿದನು.

೨೬೬. ವಿಶ್ವಾಮಿತ್ರಮುನಿಯಿಂದ ಶುಚಿಯಾಗಿ ಅಸ್ತ್ರಗಳನ್ನು ಸ್ವೀಕರಿಸಿ ಅಧಿಕ ಸಂತೋಷದಿಂದ ಅರಳಿದ ಮುಖವುಳ್ಳ ರಾಮನು ಮುಂದೆ

ಗಚ್ಛನ್ನೇವಾಥ ಕಾಕುತ್ಸ್ಥೋ ವಿಶ್ವಾಮಿತ್ರಮಥಾಬ್ರವೀತ್ ॥ ೨೬೬
ಕಿಂ ನ್ವೇತನ್ಮೇಘಸಂಕಾಶಂ ಪರ್ವತಸ್ಯಾವಿದೂರತಃ ।
ವೃಕ್ಷಷಂಡಮಿವಾಭಾತಿ ಪರಂ ಕೌತೂಹಲಂ ಹಿ ಮೇ ॥ ೨೬೭ ॥
ಸಂಪ್ರಾಪ್ತಾ ಯತ್ರ ತೇ ಪಾಪಾ ಬ್ರಹ್ಮಘ್ನಾ ದುಷ್ಟಚಾರಿಣಃ ।
ತವ ಯಜ್ಞಸ್ಯ ವಿಘ್ನಾಯ ದುರಾತ್ಮಾನೋ ಮಹಾಮುನೇ ॥ ೨೬೮ ॥
ರಕ್ಷಿತವ್ಯಾ ಕ್ರಿಯಾ ಬ್ರಹ್ಮನ್ ಮಯಾ ವಧ್ಯಾಶ್ಚ ರಾಕ್ಷಸಾಃ ।
ಏತತ್ಸರ್ವಂ ಮುನಿಶ್ರೇಷ್ಠ ಶ್ರೋತುಮಿಚ್ಛಾಮಿ ಸುವ್ರತ ॥ ೨೬೯ ॥
ಅಥ ತಸ್ಯಾಪ್ರಮೇಯಸ್ಯ ತದ್ವಚನಂ ಪರಿಪೃಚ್ಛತಃ ।
ವಿಶ್ವಾಮಿತ್ರೋ ಮಹಾತೇಜಾ ವ್ಯಾಖ್ಯಾತುಮುಪಚಕ್ರಮೇ ॥ ೨೭೦ ॥
ಏಷ ಪೂರ್ವಾಶ್ರಮೋ ರಾಮ ವಾಮನಸ್ಯ ಮಹಾತ್ಮನಃ ।

ದಾರಿ ನಡೆಯುತ್ತಲೇ ಮುನಿಯನ್ನು ಈ ರೀತಿ ಪ್ರಶ್ನೆಮಾಡಿದನು.

೨೬೭-೯. "ಮುನಿಯೇ! ಇದೇನು ಪರ್ವತದಬಳಿ ಮೋಡದಂತಿರುವುದು? ನೋಡಿದರೆ ತೋಪಿನಹಾಗೆ ತೋರುತ್ತದೆ. ಇದನ್ನು ತಿಳಿಯಲು ನನಗೆ ಬಹಳ ಆಸೆಯುಂಟಾಗಿದೆ. ಮಹಾಮುನಿಯೇ! ಬ್ರಾಹ್ಮಣರನ್ನು ಕೊಲ್ಲುವ ಪಾಪಿಷ್ಠರಾದ, ಎಲ್ಲರ ಯಾಗವನ್ನು ಹಾಳುಮಾಡುವ ಕೆಟ್ಟ ವ್ಯಾಪಾರದಲ್ಲಿ ನಿರತರಾದ ನೀಚ ರಾಕ್ಷಸರು ಯಾವ ಸ್ಥಳದಲ್ಲಿ ನಿನ್ನ ಯಾಗಕ್ಕೆ ಅಡ್ಡಿಬರುವರು? ಬ್ರಹ್ಮಜ್ಞಾನಿಯೇ! ಎಲ್ಲಿ ನಿನ್ನ ಯಾಗಕ್ರಿಯೆಯನ್ನು ನಾನು ರಕ್ಷಿಸಬೇಕಾದುದು? ಉತ್ತಮ ವ್ರತಗಳನ್ನನುಷ್ಠಿಸುವ ಮುನಿಶ್ರೇಷ್ಠನೇ! ಇದೆಲ್ಲವನ್ನೂ ನಾನು ಕೇಳಲು ಬಯಸುತ್ತೇನೆ.

೨೭೦. ಮನಸ್ಸಿನಿಂದಲೂ ಅಳೆಯಲಾಗದ ಮಹಿಮೆಯುಳ್ಳ ರಾಮನು ಹೀಗೆ ಆ ವಿಚಾರವಾಗಿ ಪ್ರಶ್ನೆ ಮಾಡಲು ಮಹಾತೇಜಸ್ವಿಯಾದ ವಿಶ್ವಾಮಿತ್ರ ಮುನಿಯು ಅದನ್ನು ವಿವರವಾಗಿ ಹೇಳತೊಡಗಿದನು.

೨೭೧. "ರಾಮ! ಇದು ಮೊದಲು ಮಹಾತ್ಮನಾದ ವಾಮನರೂಪದಲ್ಲಿ ಅವತರಿಸಿದ ವಿಷ್ಣುವಿನ ಆಶ್ರಮ. ಇಲ್ಲಿ ಮಹಾತಪಸ್ವಿಯಾದ ಕಾಶ್ಯಪನು ತಪ

ಸಿದ್ಧಾಶ್ರಮ ಇತಿ ಖ್ಯಾತಃ ಸಿದ್ಧೋಹ್ಯತ್ರ ಮಹಾತಪಾಃ ।
ಮಯಾಪಿ ಭಕ್ತ್ಯಾ ತಸ್ಯೈವ ವಾಮನಸ್ಯೋಪಭುಜ್ಯತೇ ॥ ೨೭೧ ॥

ಏತಮಾಶ್ರಮಮಾಯಾಂತಿ ರಾಕ್ಷಸಾ ವಿಘ್ನಕಾರಿಣಃ ।
ಅತ್ರ ತೇ ಪುರುಷವ್ಯಾಘ್ರ ಹಂತವ್ಯಾ ದುಷ್ಟಚಾರಿಣಃ ॥ ೨೭೨ ॥

ಅದ್ಯ ಗಚ್ಛಾಮಹೇ ರಾಮ ಸಿದ್ಧಾಶ್ರಮಮನುತ್ತಮಮ್ ।
ತದಾಶ್ರಮಪದಂ ತಾತ ತವಾಪ್ಯೇತದ್ಯಥಾ ಮಮ ॥ ೨೭೩ ॥

ಇತ್ಯುಕ್ತ್ವಾ ಪರಮಪ್ರೀತೋ ಗೃಹ್ಯ ರಾಮಂ ಸಲಕ್ಷ್ಮಣಮ್ ।
ಪ್ರವಿಶನ್ನಾಶ್ರಮಪದಂ ವ್ಯರೋಚತ ಮಹಾಮುನಿಃ ॥ ೨೭೪ ॥

ತಂ ದೃಷ್ಟ್ವಾ ಮುನಯಃ ಸರ್ವೇ ಸಿದ್ಧಾಶ್ರಮನಿವಾಸಿನಃ ।
ಉತ್ಪತ್ಯೋತ್ಪತ್ಯ ಸಹಸಾ ವಿಶ್ವಾಮಿತ್ರಮಪೂಜಯನ್ ॥ ೨೭೫ ॥

ಸ್ಸಿನ ಸಿದ್ಧಿಯನ್ನು ಪಡೆದನಾದುದರಿಂದ ಇದು ಸಿದ್ಧಾಶ್ರಮವೆಂದು ಪ್ರಸಿದ್ಧಿ ಹೊಂದಿದುದಾಗಿದೆ. ಆ ವಾಮನಾವತಾರಿಯಾದ ಪರಮಾತ್ಮನ ಆಶ್ರಮವನ್ನೇ ಭಕ್ತಿಯಿಂದ ನಾನೂ ಅನುಭವಿಸುತ್ತಲಿರುವೆನು.

೨೭೨. ವಿಘ್ನವನ್ನು ಮಾಡುವ ರಾಕ್ಷಸರು ಈ ಆಶ್ರಮಕ್ಕೇ ಬರುವುದು. ಪುರುಷಶ್ರೇಷ್ಠನೇ! ದುಷ್ಕೃತ್ಯವನ್ನು ಮಾಡುವ ರಾಕ್ಷಸರನ್ನು ಕೊಲ್ಲಬೇಕಾಗಿರುವುದು ಇಲ್ಲಿಯೇ .

೨೭೩. ರಾಮ! ಸರ್ವೋತ್ಕೃಷ್ಟವಾದ ಈ ಸಿದ್ಧಾಶ್ರಮವನ್ನೀಗ ಪ್ರವೇಶಿಸೋಣ. ಅಪ್ಪ! ಈ ಆಶ್ರಮವು ನನ್ನದು ಹೇಗೋ ಹಾಗೆಯೇ ನಿನ್ನದೂ."

೨೭೪. ಎಂದು ಹೇಳಿ ರಾಮ ಲಕ್ಷ್ಮಣರನ್ನು ಕರೆದುಕೊಂಡು ಆಶ್ರಮವನ್ನು ಪ್ರವೇಶಿಸುತ್ತಾ ಮಹಾಮುನಿಯು ಬಹಳ ಸಂತೋಷಗೊಂಡವನಾಗಿ ಹೊಳೆದನು.

೨೭೫. ವಿಶ್ವಾಮಿತ್ರಮುನಿಯು ಬರುತ್ತಿರುವುದನ್ನು ಕಂಡು ಸಿದ್ಧಾಶ್ರಮವಾಸಿಗಳಾದ ಮುನಿಗಳೆಲ್ಲರೂ ಕೂಡಲೇ ಅವನ ಬಳಿಗೆ ಹಾರಿ ಹಾರಿ ಬಂದವರಾಗಿ ಅವನನ್ನು ಕೊಂಡಾಡಿ ಗೌರವಿಸಿದರು.

ತಥೈವ ರಾಜಪುತ್ರಾಭ್ಯಾಮಕುರ್ವನ್ನತಿಥಿಕ್ರಿಯಾಮ್ ॥ ೨೭೬ ॥
ಮುಹೂರ್ತಮಥ ವಿಶ್ರಾಂತೌ ರಾಜಪುತ್ರಾವರಿಂದಮೌ ।
ಪ್ರಾಂಜಲೀ ಮುನಿಶಾರ್ದೂಲಮೂಚತೂ ರಘುನಂದನೌ ॥ ೨೭೭ ॥
ಅದ್ಯೈವ ದೀಕ್ಷಾಂ ಪ್ರವಿಶ ಭದ್ರಂ ತೇ ಮುನಿಪುಂಗವ ।
ಸಿದ್ಧಾಶ್ರಮೋಽಯಂ ಸಿದ್ಧಃ ಸ್ಯಾತ್ಸತ್ಯಮಸ್ತು ವಚಸ್ತವ ॥ ೨೭೮ ॥
ಏವಮುಕ್ತೋ ಮಹಾತೇಜಾ ವಿಶ್ವಾಮಿತ್ರೋ ಮಹಾಮುನಿಃ ।
ಪ್ರವಿವೇಶ ತತೋ ದೀಕ್ಷಾಂ ನಿಯತೋ ನಿಯತೇಂದ್ರಿಯಃ ॥
ಅಥ ತೌ ದೇಶಕಾಲಜ್ಞೌ ರಾಜಪುತ್ರಾವರಿಂದಮೌ ।
ಅನಿದ್ರೌ ಷಡಹೋರಾತ್ರಂ ತಪೋವನಮರಕ್ಷತಾಮ್ ॥ ೨೮೦ ॥
ಉಪಾಸಾಂಚಕ್ರತುರ್ವೀರೌ ಯತ್ತೌ ಪರಮಧನ್ವಿನೌ ।

---

೨೭೬. ಹಾಗೆಯೇ ರಾಜಪುತ್ರರನ್ನೂ ಅತಿಥಿಗಳಿಗೆ ಉಚಿತವಾದ ಸತ್ಕಾರಗಳಿಂದ ಉಪಚರಿಸಿದರು.

೨೭೭-೮ ಶತ್ರುಗಳನ್ನು ದಮನ ಮಾಡುವ ಆ ರಾಜಕುಮಾರರು ಸ್ವಲ್ಪ ಹೊತ್ತು ವಿಶ್ರಾಂತಿಯನ್ನು ಪಡೆದು ಬಳಿಕ ಕೈಜೋಡಿಸಿಕೊಂಡು ಮುನಿಯನ್ನು ಕುರಿತು "ಮುನಿಪುಂಗವನೇ! ಈಗಲೇ ನೀನು ಯಾಗವನ್ನು ಮಾಡಲು ತೊಡಗಬಹುದು. ನಿನಗೆ ಮಂಗಳವಾಗಲಿ. ಈ ಸಿದ್ಧಾಶ್ರಮವು ನಿನ್ನ ಯಾಗವು ಸಿದ್ಧಿ ಹೊಂದುವುದರಿಂದ ನಿಜವಾದ ಹೆಸರುಳ್ಳದುದಾಗಿ ಆಗಲಿ. ನಿನ್ನ ಮಾತು ನಿಜವಾಗಲಿ" ಎಂದುವಿಜ್ಞಾಪಿಸಿಕೊಂಡರು.

೨೭೯. ಈ ರೀತಿ ವಿಜ್ಞಾಪಿಸಿಕೊಳ್ಳಲ್ಪಟ್ಟು ಸಂತೋಷದಿಂದ ಹಸನ್ಮುಖಿಯಾದ ವಿಶ್ವಾಮಿತ್ರ ಮಹಾಮುನಿಯು ಇಂದ್ರಿಯಗಳನ್ನಡಗಿಸಿ ನಿಯಮದಿಂದ ಯಾಗವನ್ನು ಮಾಡಲು ಉಪಕ್ರಮಿಸಿದನು.

೨೮೦-೧. ಅನಂತರ ದೇಶಕಾಲಗಳನ್ನರಿತ, ಶತ್ರುಗಳನ್ನಡಗಿಸಬಲ್ಲವರಾದ ರಾಜಕುಮಾರರೆನಿಸಿದ ರಾಮಲಕ್ಷ್ಮಣರು ಬಿಲ್ಲನ್ನು ಕೈಯಲ್ಲಿ ಹಿಡಿದು ನಿದ್ರೆಯಿಲ್ಲದೇ ಜಾಗರೂಕರಾಗಿ ಆರು ದಿನಗಳು ಹಗಲು ರಾತ್ರಿಯೆನ್ನದೇ ಆ

ರರಕ್ಷತುರ್ಮುನಿವರಂ ವಿಶ್ವಾಮಿತ್ರಮರಿಂದಮಮ್ ॥ ೨೮೧ ॥
ಅಥ ಕಾಲೇ ಗತೇ ತಸ್ಮಿನ್ ಷಷ್ಠೇಽಹನಿ ಸಮಾಗತೇ ।
ಮಂತ್ರವಚ್ಚ ಯಥಾನ್ಯಾಯಂ ಯಜ್ಞೋಽಸೌ ಸಂಪ್ರವರ್ತತೇ ॥
ಏವಂ ಪ್ರವರ್ತಿತೇ ಯಜ್ಞೇ ವಿಶ್ವಾಮಿತ್ರಸ್ಯ ಧೀಮತಃ ।
ಆಕಾಶೇ ಚ ಮಹಾಞ್ಶಬ್ದಃ ಪ್ರಾದುರಾಸೀದ್ಭಯಾನಕಃ ॥ ೨೮೩ ॥
ಮಾರೀಚಶ್ಚ ಸುಬಾಹುಶ್ಚ ತಯೋರನುಚರಾಸ್ತಥಾ ।
ಆಗಮ್ಯ ಭೀಮಸಂಕಾಶಾ ರುಧಿರೌಘಾನವಾಸೃಜನ್ ॥ ೨೮೪ ॥
ತಾಂ ತೇನ ರುಧಿರೌಘೇಣ ವೇದಿಂ ವೀಕ್ಷ್ಯ ಸಮುಕ್ಷಿತಾಮ್ ।
ಸಹಸಾಭಿದ್ರುತೋ ರಾಮಸ್ತಾವಪಶ್ಯತ್ತತೋ ದಿವಿ ॥ ೨೮೫ ॥
ಮಾನವಂ ಪರಮೋದಾರಮಸ್ತ್ರಂ ಪರಮಭಾಸ್ವರಮ್ ।
ಚಿಕ್ಷೇಪ ಪರಮಕ್ರುದ್ಧೋ ಮಾರೀಚೋರಸಿ ರಾಘವಃ ॥ ೨೮೬ ॥

ಆಶ್ರಮವನ್ನೂ, ಶತ್ರುಗಳನ್ನು ಬೂದಿಮಾಡುವ ಸಾಮರ್ಥ್ಯವುಳ್ಳ, ಯಾಗಮಾಡುತ್ತಿರುವ ವಿಶ್ವಾಮಿತ್ರ ಮಹಾಮುನಿಯನ್ನೂ ಕಾಪಾಡಿದರು.

೨೮೨. ಐದು ದಿನಗಳು ಕಳೆದು ಆರನೆಯ ದಿನದಲ್ಲಿ ವಿಧಿವತ್ತಾಗಿ ಕ್ರಮದಿಂದ ಯಾಗವು ಜರುಗುತ್ತಿತ್ತು.

೨೮೩. ಜ್ಞಾನಿಯಾದ ವಿಶ್ವಾಮಿತ್ರನ ಯಾಗವು ಹಾಗೆ ನೆರವೇರುತ್ತಿರಲು ಆಕಾಶದಲ್ಲಿ ಭಯಂಕರವಾದ ದೊಡ್ಡ ಶಬ್ದವುಂಟಾಯಿತು.

೨೮೪. ಮಾರೀಚ, ಸುಬಾಹು, ಮತ್ತು ಅವರ ಅನುಚರರಾದ ರಾಕ್ಷಸರು ಭಯಂಕರ ರೂಪದಿಂದ ತೋರ್ಪಡಿಸಿಕೊಂಡು ಯಾಗಭೂಮಿಯಲ್ಲಿ ರಕ್ತದ ರಾಶಿಯನ್ನು ಸುರಿಸಿದರು.

೨೮೫. ಆ ರಕ್ತದ ರಾಶಿಯಿಂದ ಯಾಗವೇದಿಕೆಯು ನೆನಸಲ್ಪಟ್ಟದ್ದನ್ನು ಕಂಡು ರಾಮನು ಕೂಡಲೆ ಓಡಿ ಹೊರಗೆ ಬಂದು ಆಕಾಶದಲ್ಲಿ ಸುಬಾಹು ಮಾರೀಚರನ್ನು ಕಂಡನು.

೨೮೬. ಅತಿಕೋಪವನ್ನು ತಾಳಿ ರಾಮನು ಬಹಳ ಬಲ ಮತ್ತು ಪ್ರಕಾಶವುಳ್ಳ ಮಾನವಾಸ್ತ್ರವನ್ನು ಮಾರೀಚನ ಎದೆಯಲ್ಲಿ ಪ್ರಯೋಗಮಾಡಿದನು.

ಸ ತೇನ ಪರಮಾಸ್ತ್ರೇಣ ಮಾನವೇನ ಸಮಾಹಿತಃ ।
ಸಂಪೂರ್ಣಂ ಯೋಜನಶತಂ ಕ್ಷಿಪ್ತಃ ಸಾಗರಸಂಪ್ಲವೇ ॥ ೨೮೭ ॥
ಸಂಗೃಹ್ಯ ಸುಮಹಚ್ಚಾಪಮಾಗ್ನೇಯಂ ರಘುನಂದನಃ ।
ಸುಬಾಹೂರಸಿ ಚಿಕ್ಷೇಪ ಸ ವಿದ್ಧಃ ಪ್ರಾಪತದ್ಭುವಿ ॥ ೨೮೮ ॥
ಶೇಷಾನ್ ವಾಯವ್ಯಮಾದಾಯ ನಿಜಘಾನ ಮಹಾಯಶಾಃ ।
ರಾಘವಃ ಪರಮೋದಾರೋ ಮುನೀನಾಂ ಮುದಮಾವಹನ್ ॥
ಸ ಹತ್ವಾ ರಾಕ್ಷಸಾನ್ ಸರ್ವಾನ್ ಯಜ್ಞಘ್ನಾನ್ ರಘುನಂದನಃ ।
ಋಷಿಭಿಃ ಪೂಜಿತಸ್ತತ್ರ ಯಥೇಂದ್ರೋ ವಿಜಯೇ ಪುರಾ ॥ ೨೯೦ ॥
ಅಥ ಯಜ್ಞೇ ಸಮಾಪ್ತೇ ತು ವಿಶ್ವಾಮಿತ್ರೋ ಮಹಾಮುನಿಃ ।
ನಿರೀತಿಕಾ ದಿಶೋ ದೃಷ್ಟ್ವಾ ಕಾಕುತ್ಸ್ಥಮಿದಮಬ್ರವೀತ್ ॥ ೨೯೧ ॥

---

೨೮೭. ಮಾರೀಚನು ಅತ್ಯುತ್ಕೃಷ್ಟವಾದ ಮಾನವಾಸ್ತ್ರದಿಂದ ಹೊಡೆಯಲ್ಪಟ್ಟು ಒಂದುನೂರು ಯೋಜನದಾಚೆ ಸಮುದ್ರಪ್ರವಾಹದಲ್ಲಿ ತಳ್ಳಲ್ಪಟ್ಟನು.

೨೮೮. ಅನಂತರ ರಾಮನು ಮಹತ್ತಾದ ಆಗ್ನೆಯಾಸ್ತ್ರವನ್ನು ಬಿಲ್ಲಿನಲ್ಲಿ ತೊಟ್ಟು ಸುಬಾಹುವಿನ ಎದೆಯಲ್ಲಿ ಎಸೆದನು. ಅದರಿಂದ ಹೊಡೆಯಲ್ಪಟ್ಟ ಸುಬಾಹುವು ನೆಲಕ್ಕುರುಳಿದನು.

೨೮೯. ವಾಯವ್ಯಾಸ್ತ್ರವನ್ನು ಪ್ರಯೋಗಿಸಿ ಬಹಳ ಕೀರ್ತಿಶಾಲಿಯೂ ಪರಾಕ್ರಮಶಾಲಿಯೂ ಆದ ರಾಮನು ಮುನಿಗಳಿಗೆ ಆನಂದವನ್ನುಂಟುಮಾಡುವನಾಗಿ ಉಳಿದವರನ್ನು ಸಂಹಾರಮಾಡಿದನು.

೨೯೦. ಹೀಗೆ ಯಾಗವನ್ನು ಕೆಡಿಸುವ ಎಲ್ಲ ರಾಕ್ಷಸರನ್ನು ಕೊಂದು ರಾಮನು ಅಸುರ ವಿಜಯದ ಸಂದರ್ಭದಲ್ಲಿ ಇಂದ್ರನು ಪೂಜಿಸಲ್ಪಟ್ಟಹಾಗೆ ಅಲ್ಲಿಯ ಋಷಿಗಳಿಂದ ಪೂಜಿಸಲ್ಪಟ್ಟನು.

೨೯೧. ಅನಂತರ ಯಾಗವು ಸಮಾಪ್ತಿಯಾಗಲು ಎಲ್ಲ ದಿಕ್ಕುಗಳೂ ತೊಂದರೆಗಳಿಲ್ಲದೇ ಸುಖವಾಗಿರುವುದನ್ನು ಕಂಡು ವಿಶ್ವಾಮಿತ್ರಮಹಾಮುನಿಯು ರಾಮನನ್ನು ಕುರಿತು ಇದನ್ನು ಹೇಳಿದನು.

ಕೃತಾರ್ಥೋಽಸ್ಮಿ ಮಹಾಬಾಹೋ ಕೃತಂ ಗುರುವಚಸ್ತ್ವಯಾ
ಸಿದ್ಧಾಶ್ರಮಮಿದಂ ಸತ್ಯಂ ಕೃತಂ ರಾಮ ಮಹಾಯಶಃ ॥ ೨೯೨ ॥
ಮೈಥಿಲಸ್ಯ ನರಶ್ರೇಷ್ಠ ಜನಕಸ್ಯ ಭವಿಷ್ಯತಿ ।
ಯಜ್ಞಃ ಪರಮಧರ್ಮಿಷ್ಠಸ್ತಸ್ಯ ಯಾಸ್ಯಾಮಹೇ ವಯಮ್ ॥
ತ್ವಂ ಚೈವ ನರಶಾರ್ದೂಲ ಸಹಾಸ್ಮಾಭಿರ್ಗಮಿಷ್ಯಸಿ ।
ಅದ್ಭುತಂ ಚ ಧನೂರತ್ನಂ ತತ್ರೈಕಂ ದ್ರಷ್ಟುಮರ್ಹಸಿ ॥ ೨೯೪ ॥
ಏವಮುಕ್ತ್ವಾ ಮುನಿವರಃ ಪ್ರಸ್ಥಾನಮಕರೋತ್ತದಾ ।
ಋಷಿಸಙ್ಘೈಃ ಸಕಾಕುತ್ಸ್ಥ ಆಮಂತ್ರ್ಯ ವನದೇವತಾಃ ॥ ೨೯೫ ॥
ಪ್ರದಕ್ಷಿಣಂ ತತಃ ಕೃತ್ವಾ ಸಿದ್ಧಾಶ್ರಮಮನುತ್ತಮಮ್ ।
ಉತ್ತರಾಂ ದಿಶಮುದ್ದಿಶ್ಯ ಪ್ರಸ್ಥಾತುಮುಪಚಕ್ರಮೇ ॥ ೨೯೬ ॥

---

೨೯೨. "ಮಹಾಬಾಹುವೇ! ರಾಮ! ನೀನು ಮಾಡಿದ ಉಪಕಾರದಿಂದ ನನ್ನ ಯಾಗವು ಸರಿಯಾಗಿ ನೆರವೇರಿತು. ತಂದೆಯ ಮಾತನ್ನು ನೀನು ಚೆನ್ನಾಗಿ ನಡೆಸಿದೆ. ಯಶಸ್ವಿಯೇ ! ಈ ಸಿದ್ಧಾಶ್ರಮವನ್ನು ನಿಜವಾದ ಸಿದ್ಧಾಶ್ರಮವನ್ನಾಗಿ ಮಾಡಿದೆ.

೨೯೩. ಮಿಥಿಲಾಧಿಪತಿಯಾದ ಜನಕಮಹಾರಾಜನ ಪರಮೋತ್ಕೃಷ್ಟವಾದ ಯಾಗವೊಂದು ನಡೆಯುವುದು. ಆ ಯಾಗಕ್ಕಾಗಿ ಅಲ್ಲಿಗೆ ನಾವು ಹೋಗುವೆವು.

೨೯೪. "ನರಶ್ರೇಷ್ಠನೇ! ನೀನೂ ನಮ್ಮೊಡನೆ ಬರುವಿಯಾದರೆ ಅಲ್ಲಿ ಆಶ್ಚರ್ಯಕರವಾದ ಶ್ರೇಷ್ಠವಾದ ಬಿಲ್ಲೊಂದನ್ನು ಕಾಣಬಹುದು."

೨೯೫-೬ ಎಂದು ಹೇಳಿ ಮುನಿಶ್ರೇಷ್ಠನು ಪ್ರಯಾಣಮಾಡಿದನು. ಹೊರಡುವಾಗ ಅವನು ವನದೇವತೆಗಳ ಅನುಮತಿಯನ್ನು ಪ್ರಾರ್ಥಿಸಿ ರಾಮಲಕ್ಷ್ಮಣರನ್ನು ಕರೆದುಕೊಂಡು ಮುನಿಗಳ ಗುಂಪಿನೊಡನೆ ಮಹಾಮಹಿಮೆಯುಳ್ಳ ಸಿದ್ಧಾಶ್ರಮವನ್ನು ಪ್ರದಕ್ಷಿಣೆ ಮಾಡಿದವನಾಗಿ ಉತ್ತರದಿಕ್ಕನ್ನು ಕುರಿತು ಹೊರಟನು.

ತೇ ಗತ್ವಾ ದೂರಮಧ್ವಾನಂ ಗತೇಽರ್ಧದಿವಸೇ ತದಾ ।
ಜಾಹ್ನವೀಂ ಸರಿತಾಂ ಶ್ರೇಷ್ಠಾಂ ದದೃಶುರ್ಮುನಿಸೇವಿತಾಮ್ ॥
ತಾಂ ದೃಷ್ಟ್ವಾ ಪುಣ್ಯಸಲಿಲಾಂ ಹಂಸಸಾರಸಸೇವಿತಾಮ್ ।
ಸಂಪ್ರಹೃಷ್ಟಮನಾ ರಾಮೋ ವಿಶ್ವಾಮಿತ್ರಮಥಾಬ್ರವೀತ್ ॥ ೯೮ ॥
ಭಗವನ್ ಶ್ರೋತುಮಿಚ್ಛಾಮಿ ಗಂಗಾಂ ತ್ರಿಪಥಗಾಂ ನದೀಮ್ ।
ತ್ರೈಲೋಕ್ಯಂ ಕಥಮಾಕ್ರಮ್ಯ ಗತಾ ನದನದೀಪತಿಮ್ ॥ ೯೯ ॥
ಚೋದಿತೋ ರಾಮವಾಕ್ಯೇನ ವಿಶ್ವಾಮಿತ್ರೋ ಮಹಾಮುನಿಃ ।
ನಿಖಿಲೇನ ಕಥಾಂ ಸರ್ವಾಮೃಷಿಮಧ್ಯೇ ನ್ಯವೇದಯತ್ ॥ ೧೦೦ ॥
ವಿಶ್ವಾಮಿತ್ರವಚಃ ಶ್ರುತ್ವಾ ರಾಘವಃ ಸಹಲಕ್ಷ್ಮಣಃ ।
ವಿಸ್ಮಯಂ ಪರಮಂ ಗತ್ವಾ ವಿಶ್ವಾಮಿತ್ರಮಥಾಬ್ರವೀತ್॥ ೧೦೧ ॥

---

೯೭. ಅವರು ಬಹಳ ದೂರ ದಾರಿ ನಡೆದು ಮಧ್ಯಾಹ್ನ ಸಮಯದಲ್ಲಿ ಮುನಿಗಳಿಂದ ಪೂಜಿಸಲ್ಪಟ್ಟ, ನದಿಗಳಲ್ಲಿ ಶ್ರೇಷ್ಠವೆನಿಸಿದ ಗಂಗಾನದಿಯನ್ನು ಕಂಡರು.

೯೮. ಹಂಸಗಳಿಂದಲೂ, ಸಾರಸಪಕ್ಷಿಗಳಿಂದಲೂ ತುಂಬಿರುವ, ಪವಿತ್ರವಾದ ನೀರುಳ್ಳ ಆ ನದಿಯನ್ನು ಕಂಡು ರಾಮನು ಆನಂದದಿಂದ ತುಂಬಿದ ಮನಸ್ಸುಳ್ಳವನಾಗಿ ವಿಶ್ವಾಮಿತ್ರನನ್ನು ಕೇಳಿದನು.

೯೯. "ಪೂಜ್ಯರೇ! ಮೂರು ಪ್ರವಾಹವಾಗಿ ಹರಿಯುವ ಗಂಗೆಯ ವೃತ್ತಾಂತವನ್ನು ಕೇಳಲು ಬಯಸುತ್ತೇನೆ. ಇದು ಮೂರು ಲೋಕಗಳನ್ನಾಕ್ರಮಿಸಿ ಯಾವರೀತಿ ಸಮುದ್ರಕ್ಕೆ ಹೋಗಿ ಸೇರಿತು? ಹೇಳಬೇಕು".

೧೦೦. ಈರೀತಿ ರಾಮನ ಮಾತಿನಿಂದ ಪ್ರೇರಿತನಾದ ವಿಶ್ವಾಮಿತ್ರ ಮಹಾಮುನಿಯು ಗಂಗೆಯ ಸಂಪೂರ್ಣ ಚರಿತ್ರೆಯನ್ನು ಋಷಿಗಳ ಮಧ್ಯದಲ್ಲಿ ರಾಮನಿಗೆ ತಿಳಿಸಿದನು.

೧೦೧-೨ ವಿಶ್ವಾಮಿತ್ರನ ಮಾತನ್ನು ಕೇಳಿ ರಾಮನೂ ಲಕ್ಷ್ಮಣನೂ ಅತ್ಯಾಶ್ಚರ್ಯವನ್ನು ಹೊಂದಿದರಲ್ಲದೇ ಮುನಿಯನ್ನು ಕುರಿತು "ಬ್ರಹ್ಮಜ್ಞಾನಿಯೆ!

ಅತ್ಯದ್ಭುತಮಿದಂ ಬ್ರಹ್ಮನ್ ಕಥಿತಂ ಪರಮಂ ತ್ವಯಾ ।
ತರಾವ ಸರಿತಾಂ ಶ್ರೇಷ್ಠಾಂ ಪುಣ್ಯಾಂ ತ್ರಿಪಥಗಾಂ ನದೀಮ್ ॥
ತಸ್ಯ ತದ್ವಚನಂ ಶ್ರುತ್ವಾ ರಾಘವಸ್ಯ ಮಹಾತ್ಮನಃ ।
ಸಂತಾರಂ ಕಾರಯಾಮಾಸ ಸರ್ಷಿಸಂಘಃ ಸರಾಘವಃ ॥ ೩೦೩ ॥
ತತೋ ಮುನಿವರಸ್ತೂರ್ಣಂ ಜಗಾಮ ಸಹರಾಘವಃ ।
ವಿಶಾಲಾಂ ನಗರೀಂ ರಮ್ಯಾಂ ದಿವ್ಯಾಂ ಸ್ವರ್ಗೋಪಮಾಂ ತದಾ ॥
ಸುಮತಿಸ್ತು ಮಹಾತೇಜಾ ವಿಶ್ವಾಮಿತ್ರಮುಪಾಗತಮ್ ।
ಶ್ರುತ್ವಾ ನರವರಶ್ರೇಷ್ಠಃ ಪ್ರತ್ಯುದ್ಗಚ್ಛನ್ಮಹಾಯಶಾಃ ॥ ೩೦೫ ॥
ಪೂಜಾಂ ಚ ಪರಮಾಂ ಕೃತ್ವಾ ಸೋಪಾಧ್ಯಾಯಃ ಸಬಾಂಧವಃ ।
ಪ್ರಾಂಜಲಿಃ ಕುಶಲಂ ಪೃಷ್ಟ್ವಾ ವಿಶ್ವಾಮಿತ್ರಮಥಾಬ್ರವೀತ್ ॥ ೩೦೬ ॥

ನೀನು ಹೇಳಿದ ವೃತ್ತಾಂತವು ಅತ್ಯಾಶ್ಚರ್ಯಕರವಾದುದು. ತ್ರಿಪಥಗೆ ಎಂದು ಪ್ರಸಿದ್ಧವಾದ ಪುಣ್ಯಕರವಾದ, ನದಿಗಳಿಗೆಲ್ಲಾ ಶ್ರೇಷ್ಠವಾದ ಈ ಗಂಗಾ ನದಿಯನ್ನೀಗ ದಾಟೋಣ" ಎಂದರು.

೩೦೩. ಶುದ್ಧಾತ್ಮರಾದ, ರಘುಕುಲದವರೆನಿಸಿದ ಅವರ ಆ ಮಾತನ್ನು ಕೇಳಿ ಮುನಿಯು ಋಷಿಗಣಗಳೊಡನೆಯೂ ಮತ್ತು ರಾಮಲಕ್ಷ್ಮಣರೊಡನೆಯೂ ನದಿಯನ್ನು ದಾಟಿದನು.

೩೦೪. ಬಳಿಕ ಅಲ್ಲಿಂದ ಮುನಿಯು ರಾಮಲಕ್ಷ್ಮಣರನ್ನು ಕರೆದುಕೊಂಡು ಸ್ವರ್ಗದಂತಿದ್ದ ಸುಂದರವಾದ ವಿಶಾಲೆಯೆಂಬ ನಗರಿಗೆ ಬೇಗ ಹೋದನು.

೩೦೫. ಮಹಾತೇಜಸ್ವಿಯೂ ಯಶಸ್ವಿಯೂ ಆದ ವಿಶಾಲಾಧಿಪತಿಯಾದ ಸುಮತಿಯು ವಿಶ್ವಾಮಿತ್ರನು ಬಂದಿರುವುದನ್ನು ಕೇಳಿ ಅವನನ್ನು ಬಂದು ಸ್ವಾಗತಿಸಿದನು.

೩೦೬. ಬಂಧು ಪುರೋಹಿತರೊಡನೆ ರಾಜನು ಮುನಿಗೆ ಉತ್ತಮ ರೀತಿಯ ಸತ್ಕಾರವನ್ನು ಮಾಡಿ ಕ್ಷೇಮಸಮಾಚಾರವನ್ನು ವಿಚಾರಿಸಿ ಕೈಜೋಡಿಸಿಕೊಂಡು ಮುನಿಯನ್ನು ಪ್ರಶ್ನೆಮಾಡಿದನು.

ಇಮೌ ಕುಮಾರೌ ಭದ್ರಂ ತೇ ದೇವತುಲ್ಯಪರಾಕ್ರಮೌ ।
ವರಾಯುಧಧರೌ ವೀರೌ ಶ್ರೋತುಮಿಚ್ಛಾಮಿ ತತ್ತ್ವತಃ ॥ ೩೦೭ ॥
ತಸ್ಯ ತದ್ವಚನಂ ಶ್ರುತ್ವಾ ಯಥಾವೃತ್ತಂ ನ್ಯವೇದಯತ್ ॥ ೩೦೮ ॥
ವಿಶ್ವಾಮಿತ್ರವಚಃ ಶ್ರುತ್ವಾ ರಾಜಾ ಪರಮಹರ್ಷಿತಃ ।
ಪೂಜಯಾಮಾಸ ವಿಧಿವತ್ಸತ್ಕಾರಾರ್ಹೌ ಮಹಾಬಲೌ ॥ ೩೦೯ ॥
ತತಃ ಪರಮಸತ್ಕಾರಂ ಸುಮತೇಃ ಪ್ರಾಪ್ಯ ರಾಘವೌ ।
ಉಷ್ಯ ತತ್ರ ನಿಶಾಮೇಕಾಂ ಜಗ್ಮತುರ್ಮಿಥಿಲಾಂ ತತಃ ॥ ೩೧೦ ॥
ಮಿಥಿಲೋಪವನೇ ತತ್ರ ಆಶ್ರಮಂ ದೃಶ್ಯ ರಾಘವಃ ।
ಪುರಾಣಂ ನಿರ್ಜನಂ ರಮ್ಯಂ ಪಪ್ರಚ್ಛ ಮುನಿಪುಂಗವಮ್ ॥ ೩೧೧ ॥

---

೩೦೭. "ಮುನಿಯೇ! ದೇವತೆಗಳಿಗೆ ಒಪ್ಪುವ ಪರಾಕ್ರಮವುಳ್ಳ ಶ್ರೇಷ್ಠವಾದ ಆಯುಧಗಳನ್ನು ಕೈಲಿ ಹಿಡಿದಿರುವ ವೀರರಾದ ಈ ಕುಮಾರರರು ಯಾರು? ಎಂಬುದನ್ನು ಯಥಾವತ್ತಾಗಿ ಕೇಳಲು ಬಯಸುತ್ತೇನೆ."

೩೦೮. ಅವನ ಆ ಮಾತನ್ನು ಕೇಳಿ ಮುನಿಯು ಎಲ್ಲಾ ಸಮಾಚಾರವನ್ನೂ ಸರಿಯಾಗಿ ರಾಜನಿಗೆ ತಿಳಿಸಿದನು.

೩೦೯. ವಿಶ್ವಾಮಿತ್ರನ ಮಾತನ್ನು ಕೇಳಿ ಅತಿಯಾಗಿ ಸಂತೋಷವನ್ನು ಹೊಂದಿದ ರಾಜನು ಸತ್ಕಾರಕ್ಕೆ ಅರ್ಹರಾದ, ಬಹಳ ಬಲಶಾಲಿಗಳಾದ ರಾಮಲಕ್ಷ್ಮಣರನ್ನು ಅವರ ಯೋಗ್ಯತೆಗೆ ತಕ್ಕಂತೆ ಗೌರವದಿಂದ ಸತ್ಕರಿಸಿದನು.

೩೧೦. ಸುಮತಿರಾಜನ ಸತ್ಕಾರವನ್ನು ಸ್ವೀಕರಿಸಿ ಅಲ್ಲಿಯೇ ಒಂದು ರಾತ್ರಿ ಕಳೆದು ರಾಮಲಕ್ಷ್ಮಣರು ಮುನಿಯೊಡನೆ ಅಲ್ಲಿಂದ ಮಿಥಿಲಾಪಟ್ಟಣಕ್ಕೆ ಹೊರಟರು.

೩೧೧-೨. ಮಿಥಿಲಾಪುರಿಗೆ ಹತ್ತಿರವಿದ್ದ ಕಾಡೊಂದರಲ್ಲಿದ್ದ ಹಳೆಯ, ಜನವಾಸವಿಲ್ಲದ ಮನೋಹರವಾದ ಆಶ್ರಮವನ್ನು ಕಂಡು ರಾಮನು ಮುನಿಶ್ರೇಷ್ಠನನ್ನು ಕುರಿತು "ಪೂಜ್ಯರೇ! ಹಿಂದೊಂದು ಕಾಲದಲ್ಲಿ ಬಹಳ ಪ್ರಸಿದ್ಧವಾದ ಆಶ್ರಮವಾಗಿದ್ದಿರಬಹುದೆಂದು ಹೇಳಬಹುದಾದ ಈ ಪ್ರದೇಶವು

ಶ್ರೀಮದಾಶ್ರಮಸಂಕಾಶಂ ಕಿಂನ್ವಿದಂ ಮುನಿವರ್ಜಿತಮ್ ।
ಶ್ರೋತುಮಿಚ್ಛಾಮಿ ಭಗವನ್ ಕಸ್ಯಾಯಂ ಪೂರ್ವ ಆಶ್ರಮಃ ॥
ತಚ್ಛ್ರುತ್ವಾ ರಾಘವೇಣೋಕ್ತಂ ವಾಕ್ಯಂ ವಾಕ್ಯವಿಶಾರದಃ ।
ಪ್ರತ್ಯುವಾಚ ಮಹಾತೇಜಾ ವಿಶ್ವಾಮಿತ್ರೋ ಮಹಾಮುನಿಃ ॥
ಗೌತಮಸ್ಯ ನರಶ್ರೇಷ್ಠ ಪೂರ್ವಮಾಸೀನ್ಮಹಾತ್ಮನಃ ।
ಆಶ್ರಮೋ ದಿವ್ಯಸಂಕಾಶಃ ಸುರೈರಪಿ ಸುಪೂಜಿತಃ ॥ ೩೧೪ ॥
ಸ ಚೇಹ ತಪ ಆತಿಷ್ಠದಹಲ್ಯಾಸಹಿತಃ ಪುರಾ ।
ವರ್ಷಪೂಗಾನನೇಕಾಂಶ್ಚ ರಾಜಪುತ್ರ ಮಹಾಯಶಃ ॥ ೩೧೫ ॥
ತಸ್ಯಾಂತರಂ ವಿದಿತ್ವಾ ತು ಸಹಸ್ರಾಕ್ಷಃ ಶಚೀಪತಿಃ ।
ಮುನಿವೇಷಧರೋಽಹಲ್ಯಾಮಿದಂ ವಚನಮಬ್ರವೀತ್ ।
ಸಂಗಮಂ ತ್ವಹಮಿಚ್ಛಾಮಿ ತ್ವಯಾ ಸಹ ಸುಮಧ್ಯಮೇ ॥ ೩೧೬ ॥

ಯಾವುದು. ? ಇಲ್ಲಿ ಮುನಿಗಳು ಯಾರೂ ಇರುವಂತೆ ಕಾಣುವುದಿಲ್ಲ. ಇದು ಯಾರ ಆಶ್ರಮ? ಕೇಳಲು ಆಸೆಯಾಗಿದೆ" ಎಂದು ಪ್ರಶ್ನೆಮಾಡಿದನು.

೩೧೩. ರಾಮನಾಡಿದುದನ್ನು ಕೇಳಿ ಮಾತುಬಲ್ಲವರಲ್ಲಿ ಮೇಲೆನಿಸಿದ ಮಹಾತೇಜಸ್ವಿಯಾದ ವಿಶ್ವಾಮಿತ್ರಮಹಾಮುನಿಯು ಉತ್ತರವಿತ್ತನು.

೩೧೪. "ನರಶ್ರೇಷ್ಠನೇ! ಹಿಂದೆ ಇದು ಮಹಾತ್ಮನಾದ ಗೌತಮ ಮಹರ್ಷಿಯ ಆಶ್ರಮವಾಗಿತ್ತು. ದೇವಲೋಕದ ವೈಭವದಿಂದ ಕೂಡಿದ ಈ ಆಶ್ರಮವು ದೇವತೆಗಳಿಂದಲೂ ಸಹ ಬಹಳವಾಗಿ ಪೂಜಿಸಲ್ಪಡುತ್ತಿತ್ತು.

೩೧೫. ಕೀರ್ತಿಗಳಿಸಿದ ರಾಜಕುಮಾರ! ಆ ಮಹರ್ಷಿಯು ಹೆಂಡತಿಯಾದ ಅಹಲ್ಯೆಯೊಡನೆ ಕೂಡಿ ಸಾವಿರಾರು ವರ್ಷಗಳು ಈ ಆಶ್ರಮದಲ್ಲಿ ತಪಸ್ಸನ್ನು ಮಾಡುತ್ತಿದ್ದನು.

೩೧೬. ಒಂದು ದಿನ ಸಹಸ್ರಾಕ್ಷನೆಂದು ಪ್ರಸಿದ್ಧನಾದ ಇಂದ್ರನು ಗೌತಮನಿಲ್ಲದ ಸಮಯವನ್ನು ನೋಡಿ ಗೌತಮಮುನಿಯ ವೇಷಹಾಕಿಕೊಂಡು ಪರಮಸುಂದರಿಯಾದ ಅಹಲ್ಯೆಯಬಳಿಬಂದು "ಸುಂದರ ನಡುವುಳ್ಳ ತರುಣಿಯೇ! ನಿನ್ನೊಡನೆ ಸಂಗವನ್ನು ಮಾಡಲಿಚ್ಛಿಸುವೆ"ನೆಂದು ಹೇಳಿದನು.

ಮುನಿವೇಷಂ ಸಹಸ್ರಾಕ್ಷಂ ವಿಜ್ಞಾಯ ರಘುನಂದನ ।
ಮತಿಂ ಚಕಾರ ದುರ್ಮೇಧಾ ದೇವರಾಜಕುತೂಹಲಾತ್ ॥ ೩೧೭ ॥

ಅಥ ದೃಷ್ಟ್ವಾ ಸಹಸ್ರಾಕ್ಷಂ ಮುನಿವೇಷಧರಂ ಮುನಿಃ ।
ದುರ್ವೃತ್ತಂ ವೃತ್ತಸಂಪನ್ನೋ ರೋಷಾದ್ವಚನಮಬ್ರವೀತ್ ॥
ಮಮ ರೂಪಂ ಸಮಾಸ್ಥಾಯ ಕೃತವಾನಸಿ ದುರ್ಮತೇ ।
ಅಕರ್ತವ್ಯಮಿದಂ ತಸ್ಮಾದ್ವಿಫಲಸ್ತ್ವಂ ಭವಿಷ್ಯಸಿ ॥ ೩೧೯ ॥
ತಥಾ ಶಪ್ತ್ವಾ ಸ ವೈ ಶಕ್ರಮಹಲ್ಯಾಮಪಿ ಶಪ್ತವಾನ್ ।
ಇಹ ವರ್ಷಸಹಸ್ರಾಣಿ ಬಹೂನಿ ತ್ವಂ ನಿವತ್ಸ್ಯಸಿ ॥ ೩೨೦ ॥
ವಾಯುಭಕ್ಷಾ ನಿರಾಹಾರಾ ತಪ್ಯಂತೀ ಭಸ್ಮಶಾಯಿನೀ ।
ಅದೃಶ್ಯಾ ಸರ್ವಭೂತಾನಾಮಾಶ್ರಮೇಽಸ್ಮಿನ್ನಿವತ್ಸ್ಯಸಿ ॥ ೩೨೧ ॥
ಯದಾ ಚೈತದ್ವನಂ ಘೋರಂ ರಾಮೋ ದಶರಥಾತ್ಮಜಃ ।

---

೩೧೭. ಮುನಿವೇಷದಲ್ಲಿ ಬಂದ ಅವನನ್ನು ಇಂದ್ರನೆಂದರಿತೂ ರಾಮ! ಕೆಟ್ಟಯೋಚನೆ ಮಾಡಿದ ಅಹಲ್ಯೆಯು ದೇವತೆಗಳಿಗೆ ರಾಜನವನೆಂಬ ಭಾವನೆಯಿಂದ ಅವನ ಮಾತಿಗೆ ಸಮ್ಮತಿಸಿದಳು.

೩೧೮-೧೯. ಬಳಿಕ ಹಠಾತ್ತನೆ ಅಲ್ಲಿಗೆ ಬಂದ ಮುನಿಯು ತನ್ನ ವೇಷವನ್ನು ಹಾಕಿಕೊಂಡಿರುವ ನೀಚನಡತೆಯುಳ್ಳ ಇಂದ್ರನನ್ನು ನೋಡಿ "ಕೆಟ್ಟಯೋಚನೆ ಉಳ್ಳವನೇ! ನನ್ನ ರೂಪವನ್ನು ಧರಿಸಿ ಮಾಡಬಾರದ ಕೆಲಸವನ್ನು ಮಾಡಿರುವೆಯಾದುದರಿಂದ ನೀನು ಪುಂಸತ್ವವನ್ನು ಕಳೆದುಕೊಂಡವನಾಗು" ಎಂದು ಕೋಪದಿಂದ ಶಪಿಸಿದನು.

೩೨೦-೧. ಆರೀತಿ ಇಂದ್ರನನ್ನು ಶಪಿಸಿ ಅಹಲ್ಯೆಯನ್ನೂ ಶಪಿಸಿದನು. "ನೀನು ಕೆಟ್ಟದಾರಿಯಲ್ಲಿ ಪ್ರವೇಶಿಸಿದೆಯಾದುದರಿಂದ ಅನೇಕ ಸಾವಿರ ವರ್ಷಗಳಕಾಲ ಈ ಆಶ್ರಮದಲ್ಲಿಯೇ ಒಬ್ಬರ ಕಣ್ಣಿಗೂ ಗೋಚರಳಾಗದೇ ವಾಯುವನ್ನು ಕುಡಿಯುತ್ತಾ ಬೇರೆ ಯಾವ ಆಹಾರವೂ ಇಲ್ಲದೇ ಬೂದಿಯ ಮೇಲೆ ಹೊರಳಾಡುತ್ತಾ ಪರಿತಾಪದಿಂದ ಕೂಡಿದವಳಾಗಿ ಇರುವಳಾಗು.

೩೨೨. ದಶರಥಚಕ್ರವರ್ತಿಯ ಮಗನಾದ, ಎದುರಿಸಲಸಾಧ್ಯನಾದ

ಆಗಮಿಷ್ಯತಿ ದುರ್ಧರ್ಷಸ್ತದಾ ಪೂತಾ ಭವಿಷ್ಯಸಿ ॥ ೧೨೨ ॥
ತಸ್ಯಾತಿಥ್ಯೇನ ದುರ್ವೃತ್ತೇ ಲೋಭಮೋಹವಿವರ್ಜಿತಾ ।
ಮತ್ಸಕಾಶೇ ಮುದಾ ಯುಕ್ತಾ ಸ್ವಂ ವಪುರ್ಧಾರಯಿಷ್ಯಸಿ ॥
ಏವಮುಕ್ತ್ವಾ ಮಹಾತೇಜಾ ಗೌತಮೋ ದುಷ್ಟಚಾರಿಣೀಮ್ ।
ಇಮಮಾಶ್ರಮಮುತ್ಸೃಜ್ಯ ಸಿದ್ಧಚಾರಣಸೇವಿತೇ ।
ಹಿಮವಚ್ಛಿಖರೇ ರಮ್ಯೇ ತಪಸ್ತೇಪೇ ಮಹಾತಪಾಃ ॥ ೧೨೪ ॥
ತದಾಗಚ್ಛ ಮಹಾತೇಜ ಆಶ್ರಮಂ ಪುಣ್ಯಕರ್ಮಣಃ ।
ತಾರಯೈನಾಂ ಮಹಾಭಾಗಾಮಹಲ್ಯಾಂ ದೇವರೂಪಿಣೀಮ್ ॥
ವಿಶ್ವಾಮಿತ್ರವಚಃ ಶ್ರುತ್ವಾ ರಾಘವಃ ಸಹಲಕ್ಷ್ಮಣಃ ।
ವಿಶ್ವಾಮಿತ್ರಂ ಪುರಸ್ಕೃತ್ಯ ತಮಾಶ್ರಮಮಥಾವಿಶತ್ ॥ ೧೨೬ ॥

ರಾಮನು ಈ ಗೊಂಡಾರಣ್ಯಕ್ಕೆ ಎಂದು ಬರುವನೋ ಅಂದು ನೀನು ಪಾಪ ವಿಮೋಚನೆಯನ್ನು ಪಡೆಯುವಿ.

೧೨೩. ದುರ್ವೃತ್ತಳೇ ಲೋಭ ಮೋಹಗಳ ಗಂಧವಿಲ್ಲದವಳಾಗಿ ನೀನು ಇಲ್ಲಿಗೆ ಬಂದ ರಾಮನಿಗೆ ಅತಿಥಿಪೂಜೆಯನ್ನು ಮಾಡುವುದರಿಂದ ನಿನ ಮೊದಲಿನ ರೂಪವನ್ನು ಪಡೆದು ನನ್ನೊಡನೆ ಸೇರುವೆ.”

೧೨೪. ಎಂಬುದಾಗಿ ದುಷ್ಕೃತ್ಯವನ್ನು ಮಾಡಿದ ಅಹಲ್ಯೆಯನ್ನು ಶಪಿಸಿ ಮಹಾತೇಜಸ್ವಿಯೂ ಮಹಾತಪಸ್ವಿಯೂ ಆದ ಗೌತಮನು ಈ ಆಶ್ರಮವನ್ನು ಬಿಟ್ಟು ಸಿದ್ಧಚಾರಣರಿಂದ ಆಶ್ರಯಿಸಲ್ಪಟ್ಟಿರುವ ಮನೋಹರವಾದ ಹಿಮವತ್ಪರ್ವತದ ಶಿಖರದಲ್ಲಿ ತಪಸ್ಸನ್ನು ಮಾಡಲಾರಂಭಿಸಿದನು.

೧೨೫. ಆದುದರಿಂದ ತೇಜಸ್ವಿಯಾದ ರಾಮ! ಪುಣ್ಯಕಾರ್ಯಗಳನ್ನು ಅನುಷ್ಠಿಸುವ ಗೌತಮನ ಆಶ್ರಮಕ್ಕೆ ಬಾ. ದೇವಸ್ತ್ರೀಯ ರೂಪವುಳ್ಳ ಮಹಾಭಾಗ್ಯಶಾಲಿನಿಯಾದ ಈ ಅಹಲ್ಯೆಯನ್ನು ಶಾಪವಿಮುಕ್ತಳನ್ನಾಗಿ ಮಾಡುವಿ.

೧೨೬. ವಿಶ್ವಾಮಿತ್ರನ ಮಾತನ್ನು ಕೇಳಿ ರಾಮನು ಲಕ್ಷ್ಮಣನಕೂಡ ವಿಶ್ವಾಮಿತ್ರನನ್ನು ಮುಂದುಮಾಡಿಕೊಂಡು ಆ ಆಶ್ರಮವನ್ನು ಪ್ರವೇಶಿಸಿದನು.

**ದದರ್ಶ ಚ ಮಹಾಭಾಗಾಂ ತಪಸಾ ದ್ಯೋತಿತಪ್ರಭಾಮ್ ।
ಲೋಕೈರಪಿ ಸಮಾಗಮ್ಯ ದುರ್ನಿರೀಕ್ಷ್ಯಾಂ ಸುರಾಸುರೈಃ ।
ಪ್ರಯತ್ನಾನ್ನಿರ್ಮಿತಾಂ ಧಾತ್ರಾ ದಿವ್ಯಾಂ ಮಾಯಾಮಯೀಮಿವ ॥
ಸಾ ಹಿ ಗೌತಮವಾಕ್ಯೇನ ದುರ್ನಿರೀಕ್ಷ್ಯಾ ಬಭೂವ ಹ ।
ತ್ರಯಾಣಾಮಪಿ ಲೋಕಾನಾಂ ಯಾವದ್ರಾಮಸ್ಯ ದರ್ಶನಮ್ ।
ಶಾಪಸ್ಯಾಂತಮುಪಾಗಮ್ಯ ತೇಷಾಂ ದರ್ಶನಮಾಗತಾ ॥ ೩೨೮ ॥
ಸ್ಮರಂತೀ ಗೌತಮವಚಃ ಪ್ರತಿಜಗ್ರಾಹ ಸಾ ಚ ತೌ ।
ಪಾದ್ಯಮರ್ಘ್ಯಂ ತಥಾತಿಥ್ಯಂ ಚಕಾರ ಸುಸಮಾಹಿತಾ ॥ ೩೨೯ ॥
ಪುಷ್ಪವೃಷ್ಟಿರ್ಮಹತ್ಯಾಸೀದ್ದೇವದುಂದುಭಿನಿಸ್ವನೈಃ ।
ಗಂಧರ್ವಾಪ್ಸರಸಾಂ ಚಾಪಿ ಮಹಾನಾಸೀತ್ಸಮಾಗಮಃ ॥ ೩೩೦ ॥**

---

೩೨೭. ಮತ್ತು ಮನುಷ್ಯರೊ, ಸುರರೋ, ಅಸುರರೋ ಯಾರೂ ಹತ್ತಿರ ಬಂದು ಸುಖವಾಗಿ ನೋಡಲಾರದ ಹಾಗೆ ತನ್ನ ತಪೋಬಲದಿಂದ ಬೆಳಗುವ ತೇಜಸ್ಸನ್ನು ಪಡೆದಿರುವ, ಸೃಷ್ಟಿಕರ್ತೃವಿನಿಂದ ಬಹಳ ಪ್ರಯತ್ನದಿಂದ ಮನಸ್ಸಿನಿಂದಲೇ ಸೃಷ್ಟಿಸಲ್ಪಟ್ಟಿರುವ ಮನುಷ್ಯರಿಗೆ ಸಿಗಲಾರದ ರೂಪದಿಂದ ಹೊಳೆಯುತ್ತಾ ಮಾಯೆಯಿಂದಲೇ ನಿರ್ಮಾಣಮಾಡಲ್ಪಟ್ಟಿರುವಂತೆ ಕಾಣಿಸುವ ಮಹಾಭಾಗ್ಯಶಾಲಿನಿಯಾದ ಅಹಲ್ಯೆಯನ್ನು ಅಲ್ಲಿ ನೋಡಿದನು.

೩೨೮. ಗೌತಮನ ಶಾಪದ ನುಡಿಯಿಂದ ಅವಳು ರಾಮನ ದರ್ಶನವಾಗುವವರೆಗೆ ಮೂರುಲೋಕದವರಿಗೂ ಗೋಚರವಾಗದವಳಾಗಿದ್ದು ಆಗ ಶಾಪವನ್ನು ಕಳೆದು ಅವರಿಗೆ ಗೋಚರಳಾದಳು.

೩೨೯. ಮತ್ತು ಗೌತಮನ ಮಾತನ್ನು ನೆನಪಿಗೆ ತಂದುಕೊಂಡು ಅವಳು ರಾಮಲಕ್ಷ್ಮಣರನ್ನು ಅತಿಥಿಸತ್ಕಾರಗಳಿಂದ ಭಕ್ತಿಯಿಂದ ಪೂಜಿಸಿದಳು.

೩೩೦. ಆ ಸಮಯದಲ್ಲಿ ದೇವದುಂದುಭಿಗಳು ಮೊಳಗಿದವು. ಆಕಾಶದಿಂದ ಕುಸುಮವೃಷ್ಟಿಯು ಬಹಳವಾಗಿ ಸುರಿಯಿತು. ಗಂಧರ್ವರಿಗೂ ಅಪ್ಸರೆಯರಿಗೂ ಬಹಳ ಸಂತೋಷವುಂಟಾಯಿತು.

ಸಾಧು ಸಾಧ್ವಿತಿ ದೇವಾಸ್ತಾಮಹಲ್ಯಾಂ ಸಮಪೂಜಯನ್ ।
ತಪೋಬಲವಿಶುದ್ಧಾಂಗೀಂ ಗೌತಮಸ್ಯ ವಶಾನುಗಾಮ್ ॥ ೩೧ ॥
ಗೌತಮೋಽಪಿ ಮಹಾತೇಜಾ ಅಹಲ್ಯಾಸಹಿತಃ ಸುಖೀ ।
ರಾಮಂ ಸಂಪೂಜ್ಯ ವಿಧಿವತ್ತಪಸ್ತೇಪೇ ಮಹಾತಪಾಃ ॥ ೩೨ ॥
ರಾಮೋಽಪಿ ಪರಮಾಂ ಪೂಜಾಂ ಗೌತಮಸ್ಯ ಮಹಾಮುನೇಃ ।
ಸಕಾಶಾದ್ವಿಧಿವತ್ಪ್ರಾಪ್ಯ ಜಗಾಮ ಮಿಥಿಲಾಂ ತತಃ ॥ ೩೩ ॥
ತತಃ ಪ್ರಾಗುತ್ತರಾಂ ಗತ್ವಾ ರಾಮಃ ಸೌಮಿತ್ರಿಣಾಸಹ ।
ವಿಶ್ವಾಮಿತ್ರಂ ಪುರಸ್ಕೃತ್ಯ ಯಜ್ಞವಾಟಮುಪಾಗಮತ್ ॥ ೩೪ ॥
ವಿಶ್ವಾಮಿತ್ರಮನುಪ್ರಾಪ್ತಂ ಶ್ರುತ್ವಾ ಸ ನೃಪತಿಸ್ತದಾ ।
ಶತಾನಂದಂ ಪುರಸ್ಕೃತ್ಯ ಪುರೋಹಿತಮನಿಂದಿತಮ್ ।
ಪತ್ಯುಜ್ಜಗಾಮ ಸಹಸಾ ವಿನಯೇನ ಸಮಾನಿತಃ ॥ ೩೫ ॥

---

೩೧. ತಾನು ಮಾಡಿದ ತಪಸ್ಸಿನ ಬಲದಿಂದ ಪರಿಶುದ್ಧವಾದ ಶರೀರವುಳ್ಳವಳಾಗಿ ಗೌತಮನಿಂದ ಅಂಗೀಕರಿಸಲ್ಪಡುವ ಯೋಗ್ಯತೆಯನ್ನು ಪಡೆದ ಆ ಅಹಲ್ಯೆಯನ್ನು ದೇವತೆಗಳೂ ಬಹಳವಾಗಿ ಕೊಂಡಾಡಿದರು.

೩೨. ಆ ಸಮಯದಲ್ಲಿ ಅಲ್ಲಿಗೆ ಬಂದ ಮಹಾತೇಜಸ್ವಿಯೂ ತಪಸ್ವಿಯೂ ಆದ ಗೌತಮಮುನಿಯೂ ರಾಮನನ್ನು ಸಂತೋಷದಿಂದ ವಿಧಿವತ್ತಾಗಿ ಪೂಜಿಸಿ ಅಹಲ್ಯೆಯೊಡನೆಕೂಡಿ ಅಲ್ಲಿಯೇ ತಪಸ್ಸುಮಾಡಲು ತೊಡಗಿದನು.

೩೩. ಗೌತಮಮುನಿಯಿಂದ ಗೌರವಪೂರ್ಣವಾದ ಉಪಚಾರಗಳನ್ನು ವಿಧಿವತ್ತಾಗಿ ಹೊಂದಿ ರಾಮನೂ ಅಲ್ಲಿಂದ ಮಿಥಿಲೆಗೆ ಹೊರಟನು.

೩೪. ಆಶ್ರಮದಿಂದ ಈಶಾನ್ಯದಿಕ್ಕಿಗೆ ಹೊರಟ ರಾಮನು ವಿಶ್ವಾಮಿತ್ರನನ್ನು ಮುಂದು ಮಾಡಿಕೊಂಡು ಸುಮಿತ್ರೆಯ ಮಗನಾದ ಲಕ್ಷ್ಮಣನೊಡನೆ ಜನಕರಾಜನ ಯಾಗಶಾಲೆಗೆ ಬಂದು ಸೇರಿದನು.

೩೫. ವಿಶ್ವಾಮಿತ್ರನು ಬಂದ ಸಮಾಚಾರವನ್ನು ಕೇಳಿ ಮಿಥಿಲಾಧಿಪತಿಯಾದ ಜನಕನು ಕೂಡಲೇ ಪುರೋಹಿತನಾದ ಶತಾನಂದನನ್ನು ಮುಂದೆ ಇಟ್ಟುಕೊಂಡು ವಿನಯದಿಂದ ಬಂದು ಅವನನ್ನು ಸ್ವಾಗತಿಸಿದನು.

ಋತ್ವಿಜೋಽಪಿ ಮಹಾತ್ಮಾನಸ್ತ್ವರ್ಘ್ಯಮಾದಾಯ ಸತ್ವರಮ್ ।
ವಿಶ್ವಾಮಿತ್ರಾಯ ಧರ್ಮೇಣ ದದುರ್ಮಂತ್ರಪುರಸ್ಕೃತಮ್ ॥ ೩೩೬ ॥
ಪ್ರತಿಗೃಹ್ಯ ತು ತಾಂ ಪೂಜಾಂ ಜನಕಸ್ಯ ಮಹಾತ್ಮನಃ ।
ಪಪ್ರಚ್ಛ ಕುಶಲಂ ರಾಜ್ಞೋ ಯಜ್ಞಸ್ಯ ಚ ನಿರಾಮಯಮ್ ॥ ೩೩೭ ॥
ಅಥ ರಾಜಾ ಮುನಿಶ್ರೇಷ್ಠಂ ಕೃತಾಂಜಲಿರಭಾಷತ ।
ಆಸನೇ ಭಗವಾನಾಸ್ತಾಂ ಸಹೈಭಿರ್ಮುನಿಪುಂಗವೈಃ ॥ ೩೩೮ ॥
ಜನಕಸ್ಯ ವಚಃ ಶ್ರುತ್ವಾ ನಿಷಸಾದ ಮಹಾಮುನಿಃ ॥ ೩೩೯ ॥
ಆಸನೇಷು ಯಥಾನ್ಯಾಯಮುಪವಿಷ್ಟಾನ್ ಸಮಂತತಃ ।
ದೃಷ್ಟ್ವಾ ಸ ನೃಪತಿಸ್ತತ್ರ ವಿಶ್ವಾಮಿತ್ರಮಥಾಬ್ರವೀತ್ ॥ ೩೪೦ ॥
ಧನ್ಯೋಽಸ್ಮ್ಯನುಗೃಹೀತೋಽಸ್ಮಿ ಯಸ್ಯ ಮೇ ಮುನಿಪುಂಗವ

---

೩೩೬. ಕೂಡಲೇ ಶುದ್ಧ ಮನಸುಳ್ಳ ಋತ್ವಿಕ್ಕುಗಳು ಪೂಜಾಸಾಮಗ್ರಿಗಳನ್ನು ತಂದು ವಿಶ್ವಾಮಿತ್ರಮುನಿಗೆ ಮಂತ್ರಪೂರ್ವಕವಾಗಿ ಧರ್ಮಬುದ್ಧಿಯಿಂದ ಉಪಚಾರಮಾಡಿದರು.

೩೩೭. ಮುನಿಯು ಮಹಾತ್ಮನಾದ ಜನಕನಿಂದ ಏರ್ಪಡಿಸಲ್ಪಟ್ಟ ಸತ್ಕಾರವನ್ನು ಸ್ವೀಕರಿಸಿ ಅವನ ಯೋಗಕ್ಷೇಮವನ್ನೂ, ಯಾಗವು ವಿಘ್ನವಿಲ್ಲದೇ ನಡೆಯುತ್ತಿರುವ ವಿಷಯವನ್ನೂ ವಿಚಾರಿಸಿದನು.

೩೩೮. ಅನಂತರ ರಾಜನು ಕೈಜೋಡಿಸಿಕೊಂಡು ವಿಶ್ವಾಮಿತ್ರಮಹಾಮುನಿಯನ್ನು "ಪೂಜ್ಯನೇ! ನೀನು ಮುನಿಶ್ರೇಷ್ಠರ ಸಂಗಡ ಪೀಠದಲ್ಲಿ ಕುಳಿತುಕೊಳ್ಳಬೇಕು" ಎಂದು ಪ್ರಾರ್ಥಿಸಿದನು.

೩೩೯. ಜನಕನ ಮಾತನ್ನುಕೇಳಿ ಮಹಾಮುನಿಯು ಹಾಗೆಯೇ ಮುನಿಗಳಸಂಗಡ ಕುಳಿತುಕೊಂಡನು.

೩೪೦. ಸುತ್ತಲೂ ಯೋಗ್ಯತೆಗನುಗುಣವಾಗಿ ಆಸನಗಳಲ್ಲಿಅವರು ಕುಳಿತುಕೊಂಡದ್ದನ್ನು ನೋಡಿ ಜನಕನು ವಿಶ್ವಾಮಿತ್ರನನ್ನು ಕುರಿತು ಹೇಳಿದನು.

೩೪೧. "ಮುನಿಶ್ರೇಷ್ಠನೇ! ಮುನಿಗಳೊಡನೆ ನೀನು ನನ್ನ ಯಾಗಶಾಲೆ

ಯಜ್ಞೋಽಪಸದನಂ ಬ್ರಹ್ಮನ್ ಪ್ರಾಪ್ತೋಽಸಿ ಮುನಿಭಿಃ ಸಹ ॥ ೩೪೧ ॥
ಇತ್ಯುಕ್ತ್ವಾ ಮುನಿಶಾರ್ದೂಲಂ ಪ್ರಹೃಷ್ಟವದನಸ್ತದಾ ।
ಪುನಸ್ತಂ ಪರಿಪಪ್ರಚ್ಛ ಪ್ರಾಂಜಲಿಃ ಪ್ರಣತೋ ನೃಪಃ ॥ ೩೪೨ ॥
ಇಮೌ ಕುಮಾರೌ ಭದ್ರಂ ತೇ ದೇವತುಲ್ಯಪರಾಕ್ರಮೌ ।
ಗಜಸಿಂಹಗತೀ ವೀರೌ ಶಾರ್ದೂಲವೃಷಭೋಪಮೌ ॥ ೩೪೩ ॥
ಅಶ್ವಿನಾವಿವ ರೂಪೇಣ ಸಮುಪಸ್ಥಿತಯೌವನೌ ।
ಯದೃಚ್ಛಯೈವ ಗಾಂ ಪ್ರಾಪ್ತೌ ದೇವಲೋಕಾದಿವಾಮರೌ ॥ ೩೪೪ ॥
ರೂಪೌದಾರ್ಯಗುಣೈಃ ಪುಂಸಾಂ ದೃಷ್ಟಿಚಿತ್ತಾಪಹಾರಿಣೌ ।
ವರಾಯುಧಧರೌ ವೀರೌ ಕಸ್ಯ ಪುತ್ರೌ ಮಹಾಮುನೇ ॥ ೩೪೫ ॥
ಪರಸ್ಪರಸ್ಯ ಸದೃಶೌ ಪ್ರಮಾಣೇಂಗಿತಚೇಷ್ಟಿತೈಃ ।

ಗೆ ಬಂದೆಯಾದುದರಿಂದ ನಾನಿಂದು ಧನ್ಯನಾದೆ. ಬ್ರಹ್ಮಜ್ಞಾನಿಯೇ, ನನ್ನ ಮನೋರಥವು ನೆರವೇರಿತು.

೩೪೨. ಎಂದು ಹೇಳಿ ರಾಜನು ಸಂತೋಷದಿಂದ ಅರಳಿದ ಮುಖವುಳ್ಳವನಾಗಿ, ಮುನಿಶ್ರೇಷ್ಠನನ್ನು ನಮಸ್ಕರಿಸಿ ಕೈಮುಗಿದುಕೊಂಡು ಮತ್ತೆ ಈ ರೀತಿ ಪ್ರಶ್ನೆಮಾಡಿದನು.

೩೪೩-೬. ಮುನಿಪುಂಗವ! ದೇವತೆಗಳಿಗೊಪ್ಪುವ ಪರಾಕ್ರಮವುಳ್ಳ, ಆನೆಯ ಮತ್ತು ಸಿಂಹದ ನಡಿಗೆಯನ್ನು ಹೋಲುವ ನಡಿಗೆಯುಳ್ಳ, ಶ್ರೇಷ್ಠ ಜಾತಿಯ ಹುಲಿಯ ಸಾಮರ್ಥ್ಯವುಳ್ಳ ಈ ವೀರಕುಮಾರರು ಯಾರು? ರೂಪದಲ್ಲಿ ಅಶ್ವಿನೀದೇವತೆಗಳಂತಿರುವ, ದೇವಲೋಕದಿಂದ ಆಕಸ್ಮಿಕವಾಗಿ ಭೂಲೋಕಕ್ಕೆ ಬಂದ ಅಮರರೆಂದು ತಿಳಿಯಲ್ಪಡುವಂತಹ, ತರುಣರಾದ, ರೂಪ, ಔದಾರ್ಯ ಮುಂತಾದ ಗುಣಗಳಿಂದ ಗಂಡಸರ ದೃಷ್ಟಿ, ಮನಸ್ಸುಗಳನ್ನೂ ಸಹ ಕಲಕಿಸುವ ಮತ್ತು ಉತ್ತಮ ಆಯುಧಗಳನ್ನು ಧರಿಸಿರುವ ಈ ವೀರರು ಯಾರ ಪುತ್ರರು? ಶರೀರಪ್ರಮಾಣದಲ್ಲಿಯೂ, ಇಂಗಿತಗಳಲ್ಲಿಯೂ, ಮಾತುಗಳಲ್ಲಿಯೂ ಒಬ್ಬರನ್ನೊಬ್ಬರು ಹೋಲುವ, ಬೈತಲೆಯುಳ್ಳವರಾಗಿರುವವರಾ

ಕಾಕಪಕ್ಷಧರೌ ವೀರೌ ಶ್ರೋತುಮಿಚ್ಛಾಮಿ ತತ್ವತಃ || ೩೪೬ ||
ತಸ್ಯ ತದ್ವಚನಂ ಶ್ರುತ್ವಾ ಜನಕಸ್ಯ ಮಹಾತ್ಮನಃ |
ನ್ಯವೇದಯದಮೇಯಾತ್ಮಾ ಪುತ್ರೌ ದಶರಥಸ್ಯ ತೌ || ೩೪೭ ||
ಸಿದ್ಧಾಶ್ರಮನಿವಾಸಂ ಚ ರಾಕ್ಷಸಾನಾಂ ವಧಂ ತಥಾ |
ತಚ್ಚಾಗಮನಮವ್ಯಗ್ರಂ ವಿಶಾಲಾಯಾಶ್ಚ ದರ್ಶನಮ್ || ೩೪೮ ||
ಅಹಲ್ಯಾದರ್ಶನಂ ಚೈವ ಗೌತಮೇನ ಸಮಾಗಮಮ್ |
ಮಹಾಧನುಷಿ ಜಿಜ್ಞಾಸಾಂ ಕರ್ತುಮಾಗಮನಂ ತಥಾ || ೩೪೯ ||
ತಸ್ಯ ತದ್ವಚನಂ ಶ್ರುತ್ವಾ ವಿಶ್ವಾಮಿತ್ರಸ್ಯ ಧೀಮತಃ |
ಜನಕಃ ಪ್ರಾಂಜಲಿರ್ವಾಕ್ಯಮುವಾಚ ಕುಶಿಕಾತ್ಮಜಮ್ || ೩೫೦ ||
ಧನ್ಯೋಽಸ್ಮ್ಯನುಗೃಹೀತೋಽಸ್ಮಿ ಯಸ್ಯ ಮೇ ಮುನಿಪುಂಗವ |

ದರೂ ಸಮರದಲ್ಲಿ ಭಾಗವಹಿಸುವ ಸಾಮರ್ಥ್ಯವುಳ್ಳ ಇವರ ವಿಷಯವನ್ನು ಸರಿಯಾಗಿ ಕೇಳಲು ಬಯಸುತ್ತೇನೆ.”

೩೪೭-೯. ಮಹಾತ್ಮನಾದ ಜನಕನಾಮಾತನ್ನು ಕೇಳಿ ಅಳೆಯಲಾರದ ಮಹಿಮೆಯುಳ್ಳ ಮುನಿಯು, ಆ ಕುಮಾರರು ದಶರಥನ ಮಕ್ಕಳೆಂಬುದನ್ನು ತಿಳಿಸಿ ಅವರು ಸಿದ್ಧಾಶ್ರಮದಲ್ಲಿ ಬಂದು ವಾಸಮಾಡಿದುದು, ರಾಕ್ಷಸರನ್ನು ಸಂಹಾರಮಾಡಿದುದು, ಅಲ್ಲಿಂದ ಮುಂದೆ ಸುಖವಾಗಿ ಯಾತ್ರೆಮಾಡಿದುದು ವಿಶಾಲೆಯನ್ನು ಕಂಡುದು, ಶಾಪವಿಮುಕ್ತಳಾದ ಅಹಲ್ಯೆಯನ್ನು ಸಂದರ್ಶಿಸಿದುದು, ಗೌತಮನೊಡನೆ ಕಲೆತುದು, ಮತ್ತು ಅತಿಶಯವಾದ ಬಿಲ್ಲನ್ನು ಕಾಣುವಸಲುವಾಗಿ ಅಲ್ಲಿಗೆ (ಮಿಥಿಲೆಗೆ) ಬಂದುದು, ಇವೆಲ್ಲನ್ನೂ ರಾಜನಿಗೆ ವಿಶದವಾಗಿ ಹೇಳಿದನು.

೩೫೦. ಜ್ಞಾನಿಯಾದ ವಿಶ್ವಾಮಿತ್ರಮುನಿಯ ಆ ಮಾತನ್ನು ಕೇಳಿ ಜನಕನು ಕೈ ಜೋಡಿಸಿಕೊಂಡು ಕುಶಿಕನ ಮಗನಾದ ಮುನಿಯನ್ನು ಕುರಿತು ಈ ಮಾತನ್ನಾಡಿದನು.

೩೫೧. “ಮುನಿಶ್ರೇಷ್ಠನೇ! ನನ್ನ ಯಾಗಕ್ಕೆ ಈ ರಾಜಕುಮಾರರನ್ನು

ಯಜ್ಞಂ ಕಾಕುತ್ಸ್ಥಸಹಿತಃ ಪ್ರಾಪ್ತವಾನಸಿ ಧಾರ್ಮಿಕ || ೩೫೧ ||
ಪಾವಿತೋಽಹಂ ತ್ವಯಾ ಬ್ರಹ್ಮನ್ ದರ್ಶನೇನ ಮಹಾಮುನೆ |
ಗುಣಾ ಬಹುವಿಧಾಃ ಪ್ರಾಪ್ತಾಸ್ತವ ಸಂದರ್ಶನಾನ್ಮಯಾ || ೩೫೨ ||
ಭಗವನ್ ಸ್ವಾಗತಂ ತೇಽಸ್ತು ಕಿಂ ಕರೋಮಿ ತವಾನಘ |
ಭವಾನಾಜ್ಞಾಪಯತು ಮಾಮಾಜ್ಞಾಪ್ಯೋ ಭವತಾ ಹ್ಯಹಮ್ ||
ಏವಮುಕ್ತಃ ಸ ಧರ್ಮಾತ್ಮಾ ಜನಕೇನ ಮಹಾತ್ಮನಾ |
ಪ್ರತ್ಯುವಾಚ ಮುನಿರ್ವೀರಂ ವಾಕ್ಯಂ ವಾಕ್ಯವಿಶಾರದಃ || ೩೫೪ ||
ಪುತ್ರೌ ದಶರಥಸ್ಯೇಮೌ ಕ್ಷತ್ರಿಯೌ ಲೋಕವಿಶ್ರುತೌ |
ದ್ರಷ್ಟುಕಾಮೌ ಧನುಶ್ರೇಷ್ಠಂ ಯದೇತತ್ತ್ವಯಿ ತಿಷ್ಠತಿ || ೩೫೫ ||

ಕರೆದುಕೊಂಡು ನೀನು ಬಂದುದರಿಂದ ನಾನು ಬಹಳ ಧನ್ಯನಾದೆ. ಧಾರ್ಮಿಕನೇ! ಅನುಗೃಹೀತನಾದೆ.

೩೫೨. ಬ್ರಹ್ಮಜ್ಞಾನವುಳ್ಳ ಮಹಾಮುನಿಯೇ! ನೀನು ನಿನ್ನ ದರ್ಶನ ಕೊಡುವುದರಿಂದ ನನ್ನನ್ನು ಪುನೀತನನ್ನಾಗಿ ಮಾಡಿರುವೆ. ನಿನ್ನ ದರ್ಶನಮಾತ್ರದಿಂದಲೇ ನನಗೆ ಅನೇಕ ವಿಧವಾದ ಪುಣ್ಯಗಳು ಉಂಟಾದವು.

೩೫೩. ಪೂಜ್ಯನೇ! ನಿನ್ನ ಆಗಮನವು ಸುಖವನ್ನು ಉಂಟುಮಾಡುವಂತಹುದಾಗಲಿ. ಪಾಪ ಗಂಧವಿಲ್ಲದವನೇ! ನಿನಗೆ ನಾನೇನು ಮಾಡಲಿ? ನೀನು ಹೇಳುವುದನ್ನು ನಡೆಸಲು ಕಾದಿರುವೆನು. ಅಪ್ಪಣೆ ಮಾಡಬೇಕು."

೩೫೪. ಮಹಾತ್ಮನಾದ ಜನಕನಿಂದ ಈ ರೀತಿ ಹೇಳಲ್ಪಟ್ಟ, ಧರ್ಮಾತ್ಮನೂ, ಅರ್ಥಗರ್ಭಿತವಾದ ಮಾತನ್ನಾಡುವವನೂ ಆದ ಮುನಿಯು ವೀರರಾಜನಿಗೆ ಉತ್ತರವಾಗಿ ಈ ಮಾತನ್ನಂದನು.

೩೫೫. "ದಶರಥನ ಪುತ್ರರಾದ ಇವರು ಲೋಕದಲ್ಲಿ ವೀರಕ್ಷತ್ರಿಯರೆಂದು ಪ್ರಸಿದ್ಧಿ ಹೊಂದಿರುವರು. ಇವರು ನಿನ್ನಲ್ಲಿರುವ ಉತ್ತಮ ಧನುಸ್ಸನ್ನು ನೋಡಲು ಅಪೇಕ್ಷೆಯುಳ್ಳವರಾಗಿದ್ದಾರೆ.

ಏತದ್ದರ್ಶಯ ಭದ್ರಂ ತೇ ಕೃತಕಾಮೌ ನೃಪಾತ್ಮಜೌ |
ದರ್ಶನಾದಸ್ಯ ಧನುಷೋ ಯಥೇಷ್ಟಂ ಪ್ರತಿಯಾಸ್ಯತಃ || ೩೫೬ ||
ಏವಮುಕ್ತಸ್ತು ಜನಕಃ ಪ್ರತ್ಯುವಾಚ ಮಹಾಮುನಿಮ್ |
ಶ್ರೂಯತಾಮಸ್ಯ ಧನುಷೋ ಯದರ್ಥಮಿಹ ತಿಷ್ಠತಿ || ೩೫೭ ||
ದೇವರಾತ ಇತಿ ಖ್ಯಾತೋ ನಿಮೇಷ್ಷಷ್ಠೋ ಮಹೀಪತಿಃ |
ನ್ಯಾಸೋಽಯಂ ತಸ್ಯ ಭಗವನ್ ಹಸ್ತೇ ದತ್ತೋ ಮಹಾತ್ಮನಾ ||
ದಕ್ಷಯಜ್ಞವಧೇ ಪೂರ್ವಂ ಧನುರಾಯಮ್ಯ ವೀರ್ಯವಾನ್ |
ರುದ್ರಸ್ತು ತ್ರಿದಶಾನ್ ರೋಷಾತ್ಸಲೀಲಮಿದಮಬ್ರವೀತ್ || ೩೫೯ ||
ಯಸ್ಮಾದ್ಭಾಗಾರ್ಥಿನೋ ಭಾಗಾನ್ನಾಕಲ್ಪಯತ ಮೇ ಸುರಾಃ |
ವರಾಂಗಾಣಿ ಮಹಾರ್ಹಾಣಿ ಧನುಷಾ ಶಾತಯಾಮಿ ವಃ || ೩೬೦ ||

---

೩೫೬. ರಾಜನೇ! ಇದನ್ನು ಇವರಿಗೆ ತೋರಿಸು. ನಿನಗೆ ಒಳ್ಳೆಯದಾಗುವುದು. ಇದನ್ನು ನೋಡಿ ಈ ರಾಜಕುಮಾರರು ತಮ್ಮ ಬಯಕೆಯನ್ನು ಪೂರ್ತಿಮಾಡಿಕೊಂಡವರಾಗಿ ಹೋಗಲಿ."

೩೫೭. ಎಂದು ಹೇಳಲ್ಪಟ್ಟ ಜನಕನು ಮಹಾಮುನಿಗೆ ಹೇಳಿದನು. "ಮುನಿಯೇ! ಈ ಬಿಲ್ಲಿನ ವಿಷಯವು ಕೇಳಲ್ಪಡಲಿ. ಇದು ಹೇಗೆ ಯಾವ ಪ್ರಯೋಜನಕ್ಕಾಗಿ ಇಲ್ಲಿದೆಯೆಂಬುದನ್ನು ಹೇಳುತ್ತೇನೆ.

೩೫೮. ನಮ್ಮ ವಂಶದ ಮೂಲಪುರುಷನಾದ ನಿಮಿಯೆಂಬುವನಿಗೆ ಆರನೆಯವನು ದೇವರಾತನೆಂದು ಪ್ರಸಿದ್ಧಿ ಹೊಂದಿದ ರಾಜನು. ಪೂಜ್ಯನೇ! ಜಾಗರೂಕತೆಯಿಂದ ರಕ್ಷಿಸುವುದಕ್ಕಾಗಿ ಅವನ ಕೈಲಿ ದೇವತೆಗಳಿಂದ ಕೊಡಲ್ಪಟ್ಟ ಧನುಸ್ಸಿದು.

೩೫೯-೬೦ ಹಿಂದೆ ದಕ್ಷಪ್ರಜಾಪ್ರತಿಯು ನಡೆಸಿದ ಯಜ್ಞದಲ್ಲಿ ರುದ್ರನು ಈ ಧನುಸ್ಸನ್ನೇ ಬಗ್ಗಿಸಿ ಹಿಡಿದು ಕೋಪಾವೇಶದಿಂದ ದೇವತೆಗಳನ್ನು ಕುರಿತು "ಎಲೈ ದೇವತೆಗಳೇ! ನನಗೆ ಸಲ್ಲಬೇಕಾದ ಭಾಗವನ್ನು ಸಲ್ಲಿಸದೇ ಅದನ್ನೂ ನೀವೇ ಅಪೇಕ್ಷಿಸಿ ಇಲ್ಲಿರುವಿರಾದ ಕಾರಣ ಈ ಬಿಲ್ಲಿನಿಂದ ನಿಮ್ಮ ಶ್ರೇಷ್ಠವಾದ ಅವಯವಗಳನ್ನು ತುಂಡುಮಾಡುವೆನೆ"ಂದು ಹೇಳಿದನು.

ತತೋ ವಿಮನಸಃ ಸರ್ವೇ ದೇವಾ ವೈ ಮುನಿಪುಙ್ಗವ ।
ಪ್ರಸಾದಯಂತಿ ದೇವೇಶಂ ತೇಷಾಂ ಪ್ರೀತೋಽಭವದ್ಭವಃ ।
ಪ್ರೀತಿಯುಕ್ತಃ ಸ ಸರ್ವೇಷಾಂ ದದೌ ತೇಷಾಂ ಮಹಾತ್ಮನಾಮ್ ॥
ತದೇತದ್ದೇವದೇವಸ್ಯ ಧನೂರತ್ನಂ ಮಹಾತ್ಮನಃ ।
ನ್ಯಾಸಭೂತಂ ತದಾ ನ್ಯಸ್ತಮಸ್ಮಾಕಂ ಪೂರ್ವಕೇ ವಿಭೋ ॥ ೩೬೨ ॥
ಅಥ ಮೇ ಕೃಷತಃ ಕ್ಷೇತ್ರಾ ಲಾಙ್ಗಲಾದುತ್ಥಿತಾ ಮಯಾ ।
ಕ್ಷೇತ್ರಂ ಶೋಧಯತಾ ಲಬ್ಧಾ ನಾಮ್ನಾ ಸೀತೇತಿ ವಿಶ್ರುತಾ ॥ ೩೬೩ ॥
ಭೂತಲಾದುತ್ಥಿತಾಂ ತಾಂ ತು ವರ್ಧಮಾನಾಂ ಮಮಾತ್ಮಜಾಮ್ ।
ವರಯಾಮಾಸುರಾಗಮ್ಯ ರಾಜಾನೋ ಮುನಿಪುಂಗವ ॥ ೩೬೪ ॥
ತೇಷಾಂ ವರಯತಾಂ ಕನ್ಯಾಂ ಸರ್ವೇಷಾಂ ಪೃಥಿವೀಕ್ಷಿತಾಮ್ ।

---

೩೬೧ "ಮುನಿಪುಂಗವ! ಅದರಿಂದ ಹೆದರಿದ ದೇವತೆಗಳು ಆಗ ಶಂಕರನನ್ನು ಸ್ತುತಿಸಿ ತಮ್ಮನ್ನು ಅನುಗ್ರಹಿಸುವಂತೆ ಕೇಳಿಕೊಂಡರು. ಬಳಿಕ ಅವರ ವಿಷಯದಲ್ಲಿ ಈಶ್ವರನು ಪ್ರೀತನಾದನು. ಪ್ರೀತನಾಗಿ ಆ ಧನುಸ್ಸನ್ನು ಮಹಾತ್ಮರಾದ ಆ ದೇವತೆಗಳಿಗೇ ಒಪ್ಪಿಸಿಬಿಟ್ಟನು.

೩೬೨. ಎಲ್ಲವನ್ನೂ ಅರಿತವನೇ! ಹೀಗೆ ಈ ಬಿಲ್ಲು, ಹಿಂದೆ ದೇವತೆಗಳು ನಮ್ಮ ಪೂರ್ವಿಕರಲ್ಲಿ ನ್ಯಾಸವಾಗಿಟ್ಟ ಮಹಾತ್ಮನಾದ ಶಂಕರನ ರತ್ನದಂತಹ ಬಿಲ್ಲು.

೩೬೩. ಹೀಗಿರಲು ಒಂದು ಸಮಯ ನಾನು ಯಾಗಭೂಮಿಯನ್ನು ನೇಗಿಲಿನಿಂದ ಉಳುತ್ತಿರಲು ಆ ಉತ್ತಭೂಮಿಯಿಂದ ಒಬ್ಬ ಕನ್ಯೆಯು ಉದಿಸಿದಳು. ಉತ್ತ ಭೂಮಿಯಲ್ಲಿ ಹುಟ್ಟಿದಳೆಂಬ ಕಾರಣದಿಂದ ಸೀತೆಯೆಂದು ಅವಳಿಗೆ ಹೆಸರಿಟ್ಟೆ.

೩೬೪. ಮುನಿಪುಂಗವನೇ! ಭೂಮಿಯಿಂದ ಆವಿರ್ಭವಿಸಿ ನನ್ನ ಮಗಳಾಗಿ ವೃದ್ಧಿಹೊಂದುತ್ತಲಿದ್ದ ಅವಳನ್ನು ಮದುವೆ ಮಾಡಿಕೊಳ್ಳಲು ಅನೇಕ ರಾಜರು ಬಂದು ನನ್ನನ್ನು ಪ್ರಾರ್ಥಿಸಿದರು.

೩೬೫. ಪೂಜ್ಯನೇ! "ಈ ಬಿಲ್ಲನ್ನು ಯಾರು ಬಗ್ಗಿಸಿ ಹುರಿಕಟ್ಟುವರೋ

ವೀರ್ಯಶುಲ್ಕೇತಿ ಭಗವನ್ ನ ದದಾಮಿ ಸುತಾಮಹಮ್ ॥ ೩೬೫ ॥
ತತಃ ಸರ್ವೇ ನೃಪತಯಃ ಸಮೇತ್ಯ ಮುನಿಪುಂಗವ ।
ಮಿಥಿಲಾಮಭ್ಯುಪಾಗಮ್ಯ ವೀರ್ಯಜಿಜ್ಞಾಸವಸ್ತದಾ ॥ ೩೬೬ ॥
ತೇಷಾಂ ಜಿಜ್ಞಾಸಮಾನಾನಾಮೈಶಂ ಧನುರುಪಾಹೃತಮ್ ।
ನ ಶೇಕುರ್ಗ್ರಹಣೇ ತಸ್ಯ ಧನುಷಸ್ತೋಲನೇಽಪಿ ವಾ ॥ ೩೬೭ ॥
ತದೇತನ್ಮುನಿಶಾರ್ದೂಲ ಧನುಃ ಪರಮಭಾಸ್ವರಮ್ ।
ರಾಮಲಕ್ಷ್ಮಣಯೋಶ್ಚಾಪಿ ದರ್ಶಯಿಷ್ಯಾಮಿ ಸುವ್ರತ ॥ ೩೬೮ ॥
ಯದ್ಯಸ್ಯ ಧನುಷೋ ರಾಮಃ ಕುರ್ಯಾದಾರೋಪಣಂ ಮುನೇ ।
ಸುತಾಮಯೋನಿಜಾಂ ಸೀತಾಂ ದದ್ಯಾಂ ದಾಶರಥೇರಹಮ್ ॥
ಜನಕಸ್ಯ ವಚಃ ಶ್ರುತ್ವಾ ವಿಶ್ವಾಮಿತ್ರೋ ಮಹಾಮುನಿಃ ।
ಧನುರ್ದರ್ಶಯ ರಾಮಾಯ ಇತಿ ಹೋವಾಚ ಪಾರ್ಥಿವಮ್ ॥

ಅವರಿಗೇನೇ ಇವಳನ್ನು ಕೊಡುವುದೆಂ” ದು ನಾನು ನಿಶ್ಚಯಮಾಡಿ ನನ್ನನು ಪ್ರಾರ್ಥಿಸಲು ಬಂದ ರಾಜರಿಗೆ ನನ್ನ ಮಗಳನ್ನು ಕೊಡಲಿಲ್ಲ.

೩೬೬. ಬಳಿಕ ಮುನಿಶ್ರೇಷ್ಠನೇ! ಎಲ್ಲ ರಾಜರೂ ಕೂಡಿ ಮಿಥಿಲೆಗೆ ಬಂದು ಈ ಧನುಸ್ಸಿನ ಬಲವನ್ನು ಪರೀಕ್ಷೆಮಾಡಲಪೇಕ್ಷಿಸಿದರು.

೩೬೭. ಆರೀತಿ ಪರೀಕ್ಷೆಮಾಡಲಪೇಕ್ಷೆಯುಳ್ಳ ಅವರ ಬಳಿಗೆ ಈಶನ್ನ ಆ ಧನುಸ್ಸು ತರಿಸಲ್ಪಟ್ಟಿತು. ಅವರದನ್ನು ಹಿಡಿದೆತ್ತುವುದಿರಲಿ ಆಡಿಸುವುದಕ್ಕೂ ಸಮರ್ಥರಾಗಲಿಲ್ಲ.

೩೬೮. ಉತ್ತಮವ್ರತಗಳನ್ನನುಷ್ಠಿಸುವ ಮುನಿಶ್ರೇಷ್ಠನೇ! ಬಹಳ ಪ್ರಭಾವವುಳ್ಳ ಆ ಈ ಧನುಸ್ಸನ್ನು ರಾಮಲಕ್ಷ್ಮಣರಿಗೂ ತೋರುವೆನು.

೩೬೯. ಮುನಿಯೇ! ರಾಮನು ಈ ಧನುಸ್ಸನ್ನು ಬಗ್ಗಿಸಿ ಮೌರ್ವಿಯನ್ನು ಕಟ್ಟಿದರೆ ಅಯೋನಿಜೆಯಾದ ನನ್ನ ಮಗಳು ಸೀತೆಯನ್ನು ಅವನಿಗೇ ನಾನು ಕೊಡುವೆನು.”

೩೭೦. ಜನಕನ ಮಾತನ್ನು ಕೇಳಿ ವಿಶ್ವಾಮಿತ್ರಮಹಾಮುನಿಯು “ರಾಮನಿಗೆ ಆ ಬಿಲ್ಲನ್ನು ತೋರು.” ಎಂದು ರಾಜನಿಗೆ ಹೇಳಿದನು.

ತತಃ ಸ ರಾಜಾ ಜನಕಃ ಸಚಿವಾನ್ ವ್ಯಾದಿದೇಶ ಹ ।
ಧನುರಾನೀಯತಾಂ ದಿವ್ಯಂ ಗಂಧಮಾಲ್ಯವಿಭೂಷಿತಮ್॥ ೩೭೧ ॥
ಜನಕೇನ ಸಮಾದಿಷ್ಟಾಃ ಸಚಿವಾಃ ಪ್ರಾವಿಶನ್ ಪುರೀಮ್ ।
ತದ್ಧನುಃ ಪುರತಃ ಕೃತ್ವಾ ನಿರ್ಜಗ್ಮುಃ ಪಾರ್ಥಿವಾಜ್ಞಯಾ ॥ ೩೭೨ ॥
ತಾಮಾದಾಯ ತು ಮಂಜೂಷಾಮಾಯಸೀಂ ಯತ್ರ ತದ್ಧನುಃ ।
ಸುರೋಪಮಂ ತೇ ಜನಕಮೂಚುರ್ನೃಪತಿಮಂತ್ರಿಣಃ ॥ ೩೭೩ ॥
ಇದಂ ಧನುರ್ವರಂ ರಾಜನ್ ಪೂಜಿತಂ ಸರ್ವರಾಜಭಿಃ ।
ಮಿಥಿಲಾಧಿಪ ರಾಜೇಂದ್ರ ದರ್ಶನೀಯಂ ಯದಿಚ್ಛಸಿ ॥ ೩೭೪ ॥
ತೇಷಾಂ ನೃಪೋ ವಚಃ ಶ್ರುತ್ವಾ ಕೃತಾಂಜಲಿರಭಾಷತ ।
ಇದಂ ಧನುರ್ವರಂ ಬ್ರಹ್ಮನ್ ಜನಕೈರಭಿಪೂಜಿತಮ್ ।

---

೩೭೧ ಬಳಿಕ ಜನಕ ರಾಜನು "ಗಂಧಪುಷ್ಪಗಳಿಂದ ಅಲಂಕೃತವಾಗಿ ಪೂಜಿಸಲ್ಪಡುವ ದಿವ್ಯವಾದ ಆ ಧನುಸ್ಸನ್ನು ತರಿಸಿರೆಂದು" ಮಂತ್ರಿಗಳಿಗೆ ಅಪ್ಪಣೆಮಾಡಿದನು.

೩೭೨. ಜನಕನಿಂದ ಅಪ್ಪಣೆಮಾಡಲ್ಪಟ್ಟ ಮಂತ್ರಿಗಳು ಮಿಥಿಲಾನಗರದೊಳಗೆ ಹೋಗಿ ರಾಜನ ಅಪ್ಪಣೆಯಂತೆ ಆ ಬಿಲ್ಲನ್ನು ಮುಂದಿಟ್ಟುಕೊಂಡು ಬಂದರು.

೩೭೩. ಬಿಲ್ಲನ್ನು ಇಟ್ಟಿದ್ದ ಕಬ್ಬಿಣದ ಪೆಟ್ಟಿಗೆಯನ್ನು ತೆಗೆದುಕೊಂಡು ಬಂದು ರಾಜನ ಮಂತ್ರಿಗಳು ದೇವತೆಗಳ ವೈಭವವುಳ್ಳ ಜನಕನನ್ನು ಕುರಿತು ಅರಿಕೆಮಾಡಿಕೊಂಡರು.

೩೭೪. "ಮಿಥಿಲಾಧಿಪನೇ! ರಾಜಶ್ರೇಷ್ಠನೇ! ಇಗೋ! ನೀನು ತೋರಿಸಬೇಕೆಂದಿರುವ, ಎಲ್ಲ ರಾಜರಿಂದ ಪೂಜಿಸಲ್ಪಟ್ಟ ಈ ಧನುಸ್ಸನ್ನು ತಂದಿರುವೆವು."

೩೭೫. ಅವರ ಮಾತನ್ನು ಕೇಳಿ ರಾಜನು ಕೈಜೋಡಿಸಿಕೊಂಡು ಮುನಿಯನ್ನು ಕುರಿತು "ಬ್ರಹ್ಮಜ್ಞಾನಿಯೇ! ಇಗೋ ಇದು ಜನಕಕುಮಾರ

ದರ್ಶಯೈತನ್ಮಹಾಭಾಗ ಅನಯೋ ರಾಜಪುತ್ರಯೋಃ ॥ ೩೭೫ ॥
ವಿಶ್ವಾಮಿತ್ರಸ್ತು ಧರ್ಮಾತ್ಮಾ ಶ್ರುತ್ವಾ ಜನಕಭಾಷಿತಮ್ ।
ವತ್ಸ ರಾಮ ಧನುಃ ಪಶ್ಯ ಇತಿ ರಾಘವಮಬ್ರವೀತ್ ॥ ೩೭೬ ॥
ಬ್ರಹ್ಮರ್ಷೇರ್ವಚನಾದ್ರಾಮೋ ಯತ್ರ ತಿಷ್ಠತಿ ತದ್ಧನುಃ ।
ಮಂಜೂಷಾಂ ತಾಮಪಾವೃತ್ಯ ದೃಷ್ಟ್ವಾ ಧನುರಥಾಬ್ರವೀತ್ ॥
ಇದಂ ಧನುರ್ವರಂ ಬ್ರಹ್ಮನ್ ಸಂಸ್ಪೃಶಾಮೀಹ ಪಾಣಿನಾ ।
ಯತ್ನವಾಂಶ್ಚ ಭವಿಷ್ಯಾಮಿ ತೋಲನೇ ಪೂರಣೇಽಪಿ ವಾ ॥ ೩೭೮ ॥
ಬಾಢಮಿತ್ಯೇವ ತಂ ರಾಜಾ ಮುನಿಶ್ಚ ಸಮಭಾಷತ ॥ ೩೭೯ ॥
ಲೀಲಯಾ ಸ ಧನುರ್ಮಧ್ಯೇ ಜಗ್ರಾಹ ವಚನಾನ್ಮುನೇಃ ।
ಪಶ್ಯತಾಂ ನೃಸಹಸ್ರಾಣಾಂ ಬಹೂನಾಂ ರಘುನಂದನಃ ॥ ೩೮೦ ॥

ರಿಂದ ಪೂಜಿಸಲ್ಪಡುತ್ತಿರುವ ಧನುಸ್ಸು. ಪುಣ್ಯಶಾಲಿಯೇ! ಇದನ್ನು ಈ ರಾಜಕುಮಾರರಿಗೆ ತೋರಿಸು" ಎಂದು ವಿಜ್ಞಾಪಿಸಿಕೊಂಡನು.

೩೭೬. ಧರ್ಮಾತ್ಮನಾದ ವಿಶ್ವಾಮಿತ್ರನು ಜನಕನ ಮಾತನ್ನು ಕೇಳಿ "ಅಪ್ಪ ರಾಮ! ಬಿಲ್ಲನ್ನು ನೋಡು" ಎಂದು ರಾಮನಿಗೆ ಹೇಳಿದನು.

೩೭೭-೮ ಬ್ರಹ್ಮರ್ಷಿಯ ಮಾತಿನಂತೆ ರಾಮನು ಬಿಲ್ಲಿರುವ ಆ ಪೆಟ್ಟಿಗೆಯನ್ನು ತೆರೆದು ಬಿಲ್ಲನ್ನು ನೋಡಿ "ಪೂಜ್ಯನೇ! ಈ ಉತ್ತಮ ಬಿಲ್ಲನ್ನು ಕೈಯಿಂದ ಮುಟ್ಟಲೇ? ಎತ್ತಲು ಮತ್ತು ಹೆದೆಯೇರಿಸಲು ಪ್ರಯತ್ನಮಾಡಬಹುದೇ?" ಎಂದು ಮುನಿಯನ್ನು ಕೇಳಿದನು.

೩೭೯. ಮುನಿಯು ಮತ್ತು ರಾಜನು ಹಾಗೆಯೇ ಆಗಬಹುದೆಂದು ರಾಮನಿಗೆ ಹೇಳಿದರು.

೩೮೦. ರಘುನಂದನನು ಮುನಿಯ ಮಾತನ್ನು ಕೇಳಿ ಅನೇಕ ಸಾವಿರ ಜನರು ನೋಡುತ್ತಿರುವ ಹಾಗೆ ಅನಾಯಾಸವಾಗಿ ಬಿಲ್ಲನ್ನು ಹಿಡಿದು ಪೆಟ್ಟಿಗೆಯಿಂದ ಹೊರಗೆ ತೆಗೆದನು.

ಆರೋಪಯಿತ್ವಾ ಧರ್ಮಾತ್ಮಾ ಪೂರಯಾಮಾಸ ತದ್ಧನುಃ ।
ತದ್ಬಭಞ್ಜ ಧನುರ್ಮಧ್ಯೇ ನರಶ್ರೇಷ್ಠೋ ಮಹಾಯಶಾಃ । ॥ ೩೮೧ ॥
ತಸ್ಯ ಶಬ್ದೋ ಮಹಾನಾಸೀನ್ನಿರ್ಘಾತಸಮನಿಸ್ವನಃ ।
ಭೂಮಿಕಂಪಶ್ಚ ಸುಮಹಾನ್ ಪರ್ವತಸ್ಯೇವ ದೀರ್ಯತಃ ॥ ೩೮೨ ॥
ನಿಪೇತುಶ್ಚ ಜನಾಃ ಸರ್ವೇ ತೇನ ಶಬ್ದೇನ ಮೋಹಿತಾಃ ।
ವರ್ಜಯಿತ್ವಾ ಮುನಿವರಂ ರಾಜಾನಂ ತೌ ಚ ರಾಘವೌ ॥ ೩೮೩ ॥
ಪ್ರತ್ಯಾಶ್ವಸ್ತೇ ಜನೇ ತಸ್ಮಿನ್ ರಾಜಾ ವಿಗತಸಾಧ್ವಸಃ ।
ಉವಾಚ ಪ್ರಾಂಜಲಿರ್ವಾಕ್ಯಂ ವಾಕ್ಯಜ್ಞೋ ಮುನಿಪುಂಗವಮ್ ॥
ಭಗವನ್ ದೃಷ್ಟವೀರ್ಯೋ ಮೇ ರಾಮೋ ದಶರಥಾತ್ಮಜಃ ।
ಅತ್ಯದ್ಭುತಮಚಿಂತ್ಯಂ ಚ ನ ತರ್ಕಿತಮಿದಂ ಮಯಾ ॥ ೩೮೫ ॥

---

೩೮೧. ಧರ್ಮಾತ್ಮನೂ, ಮಹಾಯಶಸ್ವಿಯೂ, ಉತ್ತಮನೂ ಆದ ರಾಮನು ಆ ಬಿಲ್ಲನ್ನು ಬಗ್ಗಿಸಿ ಹಗ್ಗ ಕಟ್ಟಲು ಹೋದನು. ಆಗ ಆ ಬಿಲ್ಲು ಮಧ್ಯ ಭಾಗದಲ್ಲಿ ತುಂಡಾಗಿ ಒಡೆಯಿತು.

೩೮೨. ಸಿಡಿಲುಬಡಿತದ ಶಬ್ದದಂತೆ ಬಹಳ ಹೆಚ್ಚಾದ ಶಬ್ದವು ಅದರಿಂದ ಉಂಟಾಯಿತು. ಪರ್ವತವು ಸೀಳಿಹೋದರೆ ಆಗುವ ಹಾಗೆ ಭೂಮಿಕಂಪವೂ ಉಂಟಾಯಿತು.

೩೮೩. ಆ ಶಬ್ದದಿಂದ ಮುನಿಶ್ರೇಷ್ಠ, ರಾಜ, ಮತ್ತು ಆ ರಾಮಲಕ್ಷ್ಮಣರು ವಿನಹ ಉಳಿದ ಎಲ್ಲ ಜನರೂ ಹೆದರಿ ಮೂರ್ಛಿತರಾಗಿ ನೆಲದ ಮೇಲೆ ಬಿದ್ದರು.

೩೮೪. ಆ ಜನರು ಮೂರ್ಛೆ ತಿಳಿದು ಎಚ್ಚತ್ತ ಬಳಿಕ ಭಯಪಟ್ಟ ಜನಕನು ಕೈ ಜೋಡಿಸಿಕೊಂಡು ಮುನಿಶ್ರೇಷ್ಠನನ್ನು ಕುರಿತು ಇಂತೆಂದನು.

೩೮೫. "ಪೂಜ್ಯನೇ! ದಶರಥನ ಮಗನಾದ ರಾಮನ ಪರಾಕ್ರಮವನ್ನು ಕಂಡೆನು. ಇದು ಅತ್ಯಾಶ್ಚರ್ಯಕರವಾದುದೂ, ಯಾರಿಂದಲೂ ಆಲೋಚನೆಮಾಡಲ್ಪಡಲಾಗದೂ ಆಗಿದೆ. ಹೀಗಾಗುವುದೆಂದು ನಾನು ಊಹಿಸಿಯೂ ಸಹ ಇರಲಿಲ್ಲ.

ಜನಕಾನಾಂ ಕುಲೇ ಕೀರ್ತಿಮಾಹರಿಷ್ಯತಿ ಮೇ ಸುತಾ ।
ಸೀತಾ ಭರ್ತಾರಮಾಸಾದ್ಯ ರಾಮಂ ದಶರಥಾತ್ಮಜಮ್ ॥ ೩೮೬ ॥

ಮಮ ಸತ್ಯಾ ಪ್ರತಿಜ್ಞಾ ಚ ವೀರ್ಯಶುಲ್ಕೇತಿ ಕೌಶಿಕ ।
ಸೀತಾ ಪ್ರಾಣೈರ್ಬಹುಮತಾ ದೇಯಾ ರಾಮಾಯ ಮೇ ಸುತಾ ॥

ಭವತೋಽನುಮತೇ ಬ್ರಹ್ಮನ್ ಶೀಘ್ರಂ ಗಚ್ಛಂತು ಮಂತ್ರಿಣಃ ।
ಮಮ ಕೌಶಿಕ ಭದ್ರಂ ತೇ ಅಯೋಧ್ಯಾಂ ತ್ವರಿತಾ ರಥೈಃ ॥ ೩೮೮ ॥

ರಾಜಾನಂ ಪ್ರಶ್ರಿತೈರ್ವಾಕ್ಯೈರಾನಯಂತು ಪುರಂ ಮಮ ।
ಪ್ರದಾನಂ ವೀರ್ಯಶುಲ್ಕಾಯಾಃ ಕಥಯಂತು ಚ ಸರ್ವಶಃ ॥

ಕೌಶಿಕಶ್ಚ ತಥೇತ್ಯಾಹ ರಾಜಾ ಚಾಭಾಷ್ಯ ಮಂತ್ರಿಣಃ ।
ಅಯೋಧ್ಯಾಂ ಪ್ರೇಷಯಾಮಾಸ ಧರ್ಮಾತ್ಮಾ ಕೃತಶಾಸನಾನ್ ।

---

೩೮೬. ನನ್ನ ಮಗಳು ಸೀತೆಯು ಧಶರಥನ ಮಗನಾದ ರಾಮನನ್ನು ಗಂಡನನ್ನಾಗಿ ಪಡೆದು ಜನಕಕುಲಕ್ಕೆ ಕೀರ್ತಿಯನ್ನು ತರುವಳು.

೩೮೭. ಕೌಶಿಕನೇ! ಬಿಲ್ಲನ್ನು ಬಗ್ಗಿಸಿ ಹಗ್ಗ ಕಟ್ಟುವವರಿಗೆ ಸೀತೆಯನ್ನು ಕೊಡಬೇಕೆಂಬ ನನ್ನ ಪ್ರತಿಜ್ಞೆಯು ನಿಜವಾಯಿತು. ನನ್ನ ಪ್ರಾಣಕ್ಕಿಂತಲೂ ಮೇಲಾಗಿ ಭಾವಿಸಿಕೊಂಡಿರುವ ಸೀತೆಯನ್ನು ರಾಮನಿಗೆ ಕೊಡುತ್ತೇನೆ.

೩೮೮. ಬ್ರಹ್ಮಜ್ಞಾನಿಯೇ! ಈಗಲೇ ನಿನ್ನ ಅನುಮತಿಯನ್ನು ಪಡೆದು ನನ್ನ ಮಂತ್ರಿಗಳು ರಥಗಳಿಂದ ಬೇಗ ಅಯೋಧ್ಯೆಗೆ ಹೋಗಲಿ.

೩೮೯. ರಾಮನು ಬಿಲ್ಲು ಮುರಿದುದು, ಅದಕ್ಕಾಗಿ ಸೀತೆಯನ್ನು ಮದುವೆ ಮಾಡಿಕೊಳ್ಳಬೇಕಾಗಿಬಂದುದು, ನಿನ್ನ ಜೊತೆಯಲ್ಲಿ ಇವರು ಇರುವುದು ಮುಂತಾದ ಸಮಾಚಾರವನ್ನು ವಿನಯಪೂರ್ಣವಾದ ಮಾತುಗಳಿಂದ ರಾಜನಿಗೆ ತಿಳಿಸಿ ಅವನನ್ನು ಈ ನನ್ನ ಪಟ್ಟಣಕ್ಕೆ ಕರೆತರಲಿ".

೩೯೦. ವಿಶ್ವಾಮಿತ್ರಮುನಿಯು ಅದಕ್ಕೊಪ್ಪಿದನು. ಬಳಿಕ ಧರ್ಮಾತ್ಮನಾದ ರಾಜನು ಮಂತ್ರಿಗಳನ್ನು ಕರೆದು ಅವರಲ್ಲಿ ಶುಭಸಂದೇಶಪತ್ರವನ್ನು ಕೊಟ್ಟು ನಡೆದ ಸಮಾಚಾರವನ್ನೆಲ್ಲಾ ತಿಳಿಸಿ ರಾಜನನ್ನು ಕರೆತರಲು

ಯಥಾವೃತ್ತಂ ಸಮಾಖ್ಯಾತುಮಾನೇತುಂ ಚ ನೃಪಂ ತದಾ ॥
ಜನಕೇನ ಸಮಾದಿಷ್ಟಾ ದೂತಾಸ್ತೇ ಕ್ಲಾಂತವಾಹನಾಃ ।
ತ್ರಿರಾತ್ರಮುಷಿತಾ ಮಾರ್ಗೇ ತ್ವಯೋಧ್ಯಾಂ ಪ್ರಾವಿಶನ್ ಪುರೀಮ್ ॥
ರಾಜ್ಞೋ ಭವನಮಾಸಾದ್ಯ ದ್ವಾರಸ್ಥಾನಿದಮಬ್ರುವನ್ ।
ಶೀಘ್ರಂ ನಿವೇದ್ಯತಾಂ ರಾಜ್ಞೇ ದೂತಾನ್ನೋ ಜನಕಸ್ಯ ಚ ॥ ೩೨ ॥
ಇತ್ಯುಕ್ತಾ ದ್ವಾರಪಾಲಾಸ್ತೇ ರಾಘವಾಯ ನ್ಯವೇದಯನ್ ॥ ೩೩ ॥
ತೇ ರಾಜವಚನಾದ್ದೂತಾ ರಾಜವೇಶ್ಮ ಪ್ರವೇಶಿತಾಃ ।
ದದೃಶುರ್ದೇವಸಂಕಾಶಂ ವೃದ್ಧಂ ದಶರಥಂ ನೃಪಮ್ ॥ ೩೪ ॥
ಬದ್ಧಾಂಜಲಿಪುಟಾಃ ಸರ್ವೇ ದೂತಾ ವಿಗತಸಾಧ್ವಸಾಃ ।
ರಾಜಾನಂ ಪ್ರಯತಾ ವಾಕ್ಯಮಬ್ರುವನ್ ಮಧುರಾಕ್ಷರಮ್ ॥
ಪೃಷ್ಟ್ವಾ ಕುಶಲಮವ್ಯಗ್ರಂ ವೈದೇಹೋ ಮಿಥಿಲಾಧಿಪಃ ।

ಅಯೋಧ್ಯೆಗೆ ಕಳುಹಿದನು.

೩೧ ಜನಕನಿಂದ ಅಪ್ಪಣೆಮಾಡಲ್ಪಟ್ಟ ಆ ದೂತರು ಅವರ ಕುದುರೆಗಳು ದಣಿಯುವಷ್ಟು ವೇಗವಾಗಿ ಹೋಗುವರಾಗಿ ಮೂರು ರಾತ್ರಿ ದಾರಿಯಲ್ಲಿ ಕಳೆದು ಅಯೋಧ್ಯಾಪಟ್ಟಣವನ್ನು ಸೇರಿದರು.

೩೨. ದಶರಥರಾಜನ ಅರಮನೆಯನ್ನು ಸೇರಿ ಬಾಗಿಲಲ್ಲಿದ್ದ ಕಾವಲುಗಾರರನ್ನು ಕುರಿತು "ಜನಕನ ದೂತರು ನಾವು ಬಂದಿರುವೆವೆಂದು ಜೇಗ ರಾಜನಿಗೆ ತಿಳಿಸಿ" ಎಂದು ಹೇಳಿದರು.

೩೩. ಹೀಗೆ ಹೇಳಲ್ಪಟ್ಟ ಆ ದ್ವಾರಪಾಲಕರು ದಶರಥನಿಗೆ ಆ ಸಮಾಚಾರವನ್ನು ತಿಳಿಸಿದರು.

೩೪. ರಾಜನ ಮಾತಿನಂತೆ ಅರಮನೆಯೊಳಗೆ ಪ್ರವೇಶಮಾಡಿಸಲ್ಪಟ್ಟವರಾಗಿ ಆ ದೂತರು ದೇವನಂತಿರುವ ವೃದ್ಧ ದಶರಥರಾಜನನ್ನು ನೋಡಿದರು.

೩೫. ಎಲ್ಲ ದೂತರು ಅಂಜಲಿಬಂಧಮಾಡಿಕೊಂಡು ಗಾಬರಿಗೊಳ್ಳದೆ ಜಾಗರೂಕತೆಯಿಂದ ಮಧುರವಾಗಿ ರಾಜನಲ್ಲಿ ಅರಿಕೆಮಾಡಿಕೊಂಡರು.

೩೬. "ಪ್ರಭುವೇ! ಮಿಥಿಲಾಧಿಪತಿಯಾದ ಜನಕನು ಎಲ್ಲರ ಯೋಗ

ಕೌಶಿಕಾನುಮತೋ ವಾಕ್ಯಂ ಭವಂತಮಿದಮಬ್ರವೀತ್ || ೩೯೫ ||
ಪೂರ್ವಂ ಪ್ರತಿಜ್ಞಾ ವಿದಿತಾ ವೀರ್ಯಶುಲ್ಕಾ ಮಮಾತ್ಮಜಾ |
ರಾಜಾನಶ್ಚ ಕೃತಾಮರ್ಷಾ ನಿರ್ವೀರ್ಯಾ ವಿಮುಖೀಕೃತಾಃ ||
ಸೇಯಂ ಮಮ ಸುತಾ ರಾಜನ್ ವಿಶ್ವಾಮಿತ್ರಪುರಸ್ಸರೈಃ |
ಯದೃಚ್ಛಯಾಗತೈರ್ವೀರೈರ್ನಿರ್ಜಿತಾ ತವ ಪುತ್ರಕೈಃ || ೩೯೭ ||
ತಚ್ಚ ರಾಜನ್ ಧನುರ್ದಿವ್ಯಂ ಮಧ್ಯೇ ಭಗ್ನಂ ಮಹಾತ್ಮನಾ |
ರಾಮೇಣ ಹಿ ಮಹಾವೀರ ಯಜ್ಞಾನ್ತೇ ಜನಸಂಸದಿ || ೩೯೮ ||
ಅಸ್ಮೈ ದೇಯಾ ಮಯಾ ಸೀತಾ ವೀರ್ಯಶುಲ್ಕಾ ಮಹಾತ್ಮನೇ |
ಪ್ರತಿಜ್ಞಾಂ ತರ್ತುಮಿಚ್ಛಾಮಿ ತದನುಜ್ಞಾತುಮರ್ಹಸಿ || ೩೯೯ ||

ಕ್ಷೇಮವನ್ನು ವಿಚಾರಿಸಿ ವಿಶ್ವಾಮಿತ್ರಮುನಿಯ ಒಪ್ಪಿಗೆ ಹೊಂದಿ ತಮಗೆ ಇದನ್ನು ತಿಳಿಸುತ್ತಾನೆ.

೩೯೬. "ಬಿಲ್ಲನ್ನು ಕಟ್ಟುವ ವೀರನಿಗೇನೇ ಕೊಡಲ್ಪಡತಕ್ಕವಳು ನನ್ನ ಮಗಳು" ಎಂಬ ನನ್ನಹಿಂದಿನ ಪ್ರತಿಜ್ಞೆಯು ತಮಗೆ ತಿಳಿದಿದೆಯಷ್ಟೆ. ರಾಜರನೇಕರು ಆ ಬಿಲ್ಲನ್ನು ಕಟ್ಟಲು ಸಾಮರ್ಥ್ಯವಿಲ್ಲದೇ ಅಸಮಾಧಾನಪಟ್ಟು ಕೊಂಡು ಹಿಂತಿರುಗಿದರು ಎಂಬುದೂ ತಿಳಿದಿರಬಹುದು.

೩೯೭. ಮಹಾರಾಜನೇ! ಆ ನನ್ನ ಮಗಳು ವಿಶ್ವಾಮಿತ್ರಮುನಿಯನ್ನು ಮುಂದಿಟ್ಟುಕೊಂಡು ಇಲ್ಲಿಗೆ ಬಂದ ನಿನ್ನ ಮಕ್ಕಳಿಂದ ಜಯಿಸಲ್ಪಟ್ಟಳು.

೩೯೮. ಮಹಾವೀರ ರಾಜನೇ! ಆ ದಿವ್ಯವಾದ ಧನುಸ್ಸು ಯಾಗದ ಸಮಾಪ್ತಿ ವೇಳೆಯಲ್ಲಿ ಸೇರಿದ್ದ ಮಹಾಜನರ ಸಭೆಯಲ್ಲಿ ಮಹಾತ್ಮನಾದ ರಾಮನಿಂದ ಮಧ್ಯದಲ್ಲಿ ಮುರಿಯಲ್ಪಟ್ಟಿತು.

೩೯೯. ಅದರಿಂದ ವೀರ್ಯಶುಲ್ಕಳಾದ ನನ್ನ ಮಗಳು ಸೀತೆಯನ್ನು ಮಹಾತ್ಮನಾದ ರಾಮನಿಗೇನೇ ಕೊಟ್ಟು ನನ್ನ ಪ್ರತಿಜ್ಞೆಯನ್ನು ನಡೆಸಲು ಬಯಸುತ್ತೇನೆ. ಅದಕ್ಕೆ ನೀನು ಸಮ್ಮತಿಸಬೇಕು.

ಸೋಪಾಧ್ಯಾಯೋ ಮಹಾರಾಜ ಪುರೋಹಿತಪುರಸ್ಸರಃ ।
ಶೀಘ್ರಮಾಗಚ್ಛ ಭದ್ರಂ ತೇ ದ್ರಷ್ಟುಮರ್ಹಸಿ ರಾಘವೌ ।
ಪ್ರತಿಜ್ಞಾಂ ಮಮ ರಾಜೇಂದ್ರ ನಿರ್ವರ್ತಯಿತುಮರ್ಹಸಿ ॥ ೪೦೦ ॥

ಏವಂ ವಿದೇಹಾಧಿಪತಿಃ ಮಧುರಂ ವಾಕ್ಯಮಬ್ರವೀತ್ ।
ಇತ್ಯುಕ್ತ್ವಾ ವಿರತಾ ದೂತಾ ರಾಜಗೌರವಶಂಕಿತಾಃ ॥ ೪೦೧ ॥

ದೂತವಾಕ್ಯಂ ತು ತಚ್ಛ್ರುತ್ವಾ ರಾಜಾ ಪರಮಹರ್ಷಿತಃ ।
ವಸಿಷ್ಠಂ ವಾಮದೇವಂ ಚ ಮಂತ್ರಿಣೋऽನ್ಯಾಂಶ್ಚ ಸೋऽಬ್ರವೀತ್॥
ಗುಪ್ತಃ ಕುಶಿಕಪುತ್ರೇಣ ಕೌಸಲ್ಯಾನಂದವರ್ಧನಃ ।
ಲಕ್ಷ್ಮಣೇನ ಸಹ ಭ್ರಾತ್ರಾ ವಿದೇಹೇಷು ವಸತ್ಯಸೌ ॥ ೯೦೩ ॥

ದೃಷ್ಟವೀರ್ಯಸ್ತು ಕಾಕುತ್ಸ್ಥೋ ಜನಕೇನ ಮಹಾತ್ಮನಾ ।
ಸಂಪ್ರದಾನಂ ಸುತಾಯಾಸ್ತು ರಾಘವೇ ಕರ್ತುಮಿಚ್ಛತಿ ॥ ೪೦೪ ॥

---

೪೦೦. ಮಹಾರಾಜನೇ! ಉಪಾಧ್ಯಾಯರು ಪುರೋಹಿತರೊಡನೆ ಕೂಡಿ ಬೇಗ ಇಲ್ಲಿಗೆ ಬಂದು ನಿನ್ನ ಮಕ್ಕಳನ್ನು ಅನುಗ್ರಹಿಸಿ ರಾಜಶ್ರೇಷ್ಠನೇ ! ನನ್ನ ಪ್ರತಿಜ್ಞೆಯನ್ನು ನಡೆಸಿಕೊಡಬೇಕು.

೪೦೧. ಎಂದು ವಿದೇಹಾಧಿಪತಿಯು ತನಗೆ ಮಧುರಸಂದೇಶವನ್ನು ಹೇಳಿಕಳುಹಿಸಿರುವನೆಂದು ಹೇಳಿ ದೂತರು ರಾಜಮರ್ಯಾದೆಗೆ ಕುಂದುಂಟಾದೀತೆಂಬ ಶಂಕೆಯಿಂದ ಮಾತನ್ನು ನಿಲ್ಲಿಸಿದರು.

೪೦೨. ದೂತರ ಆ ಮಾತನ್ನು ಕೇಳಿ ಅತಿಯಾಗಿ ಸಂತೋಷಪೊಂದಿದ ಆ ದಶರಥರಾಜನು ವಸಿಷ್ಠ, ವಾಮದೇವ ಮತ್ತು ಇತರ ಮಂತ್ರಿಗಳನ್ನು ಕುರಿತು "ಕೌಸಲ್ಯೆಯ ಮುದ್ದು ಮಗ ರಾಮನು ವಿಶ್ವಾಮಿತ್ರನಿಂದ ರಕ್ಷಿಸಲ್ಪಟ್ಟು ಈಗ ತಮ್ಮ ಲಕ್ಷ್ಮಣನೊಡನೆ ಮಿಥಿಲಾಪುರಿಯಲ್ಲಿ ವಾಸವಾಗಿರುವನು. ಮಹಾತ್ಮನಾದ ಜನಕನು ರಾಮನ ಪರಾಕ್ರಮವನ್ನು ಕಣ್ಣಿಂದ ಕಂಡು ರಾಮನಿಗೆ ತನ್ನ ಮಗಳನ್ನು ಕೊಡಲು ಇಷ್ಟಪಡುತ್ತಿರುವನು. ಮಹಾತ್ಮನಾದ ಜನಕನೊಡನೆ ಸಂಬಂಧವು ನಿಮಗೆ ಸಮ್ಮತವಾದರೆ

ಯದಿ ವೋ ರೋಚತೇ ವೃತ್ತಂ ಜನಕಸ್ಯ ಮಹಾತ್ಮನಃ ।
ಪುರೀಂ ಗಚ್ಛಾಮಹೇ ಶೀಘ್ರಂ ಮಾಭೂತ್ಕಾಲಸ್ಯ ಪರ್ಯಯಃ ॥
ಮಂತ್ರಿಣೋ ಬಾಢಮಿತ್ಯಾಹುಃ ಸಹ ಸರ್ವೈರ್ಮಹರ್ಷಿಭಿಃ ।
ರಾಜಾ ದಶರಥೋ ಹೃಷ್ಟಃ ಸುಮಂತ್ರಮಿದಮಬ್ರವೀತ್ ॥ ೧೦೬ ॥

ಅದ್ಯ ಸರ್ವೇ ಧನಾಧ್ಯಕ್ಷಾ ಧನಮಾದಾಯ ಪುಷ್ಕಲಮ್ ।
ವ್ರಜಂತ್ವಗ್ರೇ ಸುವಿಹಿತಾ ನಾನಾರತ್ನಸಮನ್ವಿತಾಃ ।
ಚತುರಂಗಬಲಂ ಸರ್ವಂ ಶೀಘ್ರಂ ನಿರ್ಯಾತು ಸರ್ವಶಃ ॥ ೧೦೭ ॥

ವಸಿಷ್ಠೋ ವಾಮದೇವಶ್ಚ ಜಾಬಾಲಿರಥ ಕಾಶ್ಯಪಃ ।
ಮಾರ್ಕಂಡೇಯಃ ಸುದೀರ್ಘಾಯೂ ಋಷಿಃ ಕಾತ್ಯಾಯನಸ್ತಥಾ ॥
ಏತೇ ದ್ವಿಜಾಃ ಪ್ರಯಾಂತ್ವಗ್ರೇ ಸ್ಯಂದನಂ ಯೋಜಯಸ್ವ ಮೇ ।
ಯಥಾ ಕಾಲಾತ್ಯಯೋ ನ ಸ್ಯಾದ್ದೂತಾ ಹಿ ತ್ವರಯಂತಿ ಮಾಮ್ ॥

ಮಿಥಿಲಾಪುರಿಗೆ ಬೇಗ ಹೋಗೋಣ. ಕಾಲತಾಮಸವಾಗುವುದು ಬೇಡ” ಎಂದನು.

೧೦೬. ಮಂತ್ರಿಗಳು ಮಹರ್ಷಿಗಳೊಂದಿಗೆ ರಾಜನ ಮಾತನ್ನು ಸಮ್ಮತಿಸಿದರು. ಅದರಿಂದ ಸಂತೋಷಗೊಂಡ ದಶರಥರಾಜನು ಸುಮಂತ್ರನಿಗೆ ಹೀಗೆ ಆಜ್ಞೆಯಿತ್ತನು.

೧೦೭. “ಎಲ್ಲ ಕೋಶಾಧಿಕಾರಿಗಳು ಯಥೇಷ್ಟವಾಗಿ ಹಣವನ್ನೂ, ನಾನಾಬಗೆಯ ರತ್ನಗಳನ್ನೂ ತೆಗೆದುಕೊಂಡು ಸರಿಯಾದ ರಕ್ಷಣೆಯೊಂದಿಗೆ ಇಂದೇ ಮುಂದೆ ಹೋಗಲಿ. ನಮ್ಮ ಚತುರಂಗ ಸೇನೆಯೆಲ್ಲವೂ ಸಹ ಬೇಗ ಹೊರಡಲಿ.

೧೦೮-೯. ವಸಿಷ್ಠ, ವಾಮದೇವ, ಜಾಬಾಲಿ, ಕಾಶ್ಯಪ. ದೀರ್ಘಾಯುಸ್ಸಾಗಿರುವ ಮಾರ್ಕಂಡೇಯ ಋಷಿ, ಕಾತ್ಯಾಯನ ಮೊದಲಾದ ಬ್ರಾಹ್ಮಣರೂ ಮುಂದೆ ಹೊರಡಲಿ. ಬೇಗ ನನ್ನ ರಥವನ್ನು ಅಣಿಮಾಡು. ಕಾಲವಿಳಂಬವಾಗಬಾರದು. ಜನಕನ ದೂತರು ನನ್ನನ್ನು ತ್ವರೆಮಾಡುತ್ತಿರುವರು.”

ಇತ್ಯುಕ್ತ್ವಾ ಸ ಮಹಾತೇಜಾ ರಾಜಾ ದಶರಥೋ ರಥಮ್ ।
ಆರುರೋಹ ಯಥಾ ಭಾನುಃ ಭಗವಾನ್ ರಘುನಂದನಃ ॥ ೪೧೦ ॥

ವಚನಾತ್ತು ನರೇಂದ್ರಸ್ಯ ಸಾ ಸೇನಾ ಚತುರಂಗಿಣೀ ।
ರಾಜಾನಮೃಷಿಭಿಃ ಸಾರ್ಧಂ ವ್ರಜಂತಂ ಪೃಷ್ಠತೋಽನ್ವಗಾತ್ ॥೪೧೧॥

ಗತ್ವಾ ಚತುರಹಂ ಮಾರ್ಗಂ ವಿದೇಹಾನಭ್ಯುಪೇಯಿವಾನ್ ।
ರಾಜಾ ಚ ಜನಕಃ ಶ್ರೀಮಾನ್ ಶ್ರುತ್ವಾ ಪೂಜಾಮಕಲ್ಪಯತ್ ॥

ತತೋ ರಾಜಾನಮಾಸಾದ್ಯ ವೃದ್ಧಂ ದಶರಥಂ ನೃಪಮ್ ।
ಉವಾಚ ಚ ನರಶ್ರೇಷ್ಠೋ ನರಶ್ರೇಷ್ಠಂ ಮುದಾನ್ವಿತಃ ॥ ೪೧೩ ॥

ಸ್ವಾಗತಂ ತೇ ಮಹಾರಾಜ ದಿಷ್ಟ್ಯಾ ಪ್ರಾಪ್ತೋಽಸಿ ರಾಘವ ।
ಪುತ್ರಯೋರುಭಯೋಃ ಪ್ರೀತಿಂ ಲಪ್ಸ್ಯಸೇ ವೀರ್ಯನಿರ್ಜಿತಾಮ್॥

---

೪೧೦. ಎಂದು ಹೇಳಿ ಮಹಾತೇಜಸ್ವಿಯಾದ ದಶರಥರಾಜನು ಕೂಡಲೇ ಅಲ್ಲಿಗೆ ತರಲ್ಪಟ್ಟ ರಥವನ್ನು ಪೂಜ್ಯ ಸೂರ್ಯನೋಪಾದಿಯಲ್ಲಿ ಏರಿದನು.

೪೧೧. ಬಳಿಕ ಋಷಿಗಳೊಡನೆ ಹೊರಟ ರಾಜನನ್ನು ಅವನ ಅಪ್ಪಣೆಯಿಂದ ಚತುರಂಗಸೇನೆಯು ಹಿಂಬಾಲಿಸಿ ಹೊರಟಿತು.

೪೧೨. ನಾಲ್ಕು ದಿನಗಳು ದಾರಿ ನಡೆದು ವಿದೇಹ ದೇಶವನ್ನವರು ಸೇರಿದರು. ದಶರಥರಾಜನು ಬಂದ ಸಮಾಚಾರವನ್ನು ಕೇಳಿ ಸಂತೋಷಗೊಂಡ ಜನಕನು ಅವನಿಗೆ ಗೌರವಸತ್ಕಾರಗಳನ್ನು ಸಲ್ಲಿಸಿದನು.

೪೧೩. ಬಳಿಕ ಮಹಾಭಾಗ್ಯಶಾಲಿಯಾದ ವೃದ್ಧ ದಶರಥರಾಜನನ್ನು ಬರಮಾಡಿಕೊಂಡು ನರಶ್ರೇಷ್ಠನಾದ ಜನಕನು ಅತಿಯಾದ ಸಂತೋಷದಿಂದ ಕೂಡಿ ಅವನ ಬಳಿ ವಿಜ್ಞಾಪಿಸಿಕೊಂಡನು.

೪೧೪. ಮಹಾರಾಜನೇ! ಪ್ರಯಾಣವು ಸುಖವಾಗಿ ಆಯಿತಷ್ಟೆ? ನನ್ನ ಭಾಗ್ಯದಿಂದ ನೀನಿಲ್ಲಿಗೆ ಬಂದಿರುವೆ. ನಿನ್ನ ಮಕ್ಕಳ ಪರಾಕ್ರಮವನ್ನು ಕಂಡು ಆನಂದ ಹೊಂದುವಿ.

ದಿಷ್ಟ್ಯಾ ಪ್ರಾಪ್ತೋ ಮಹಾತೇಜಾ ವಸಿಷ್ಠೋ ಭಗವಾನೃಷಿಃ |
ಸಹ ಸರ್ವೈರ್ದ್ವಿಜಶ್ರೇಷ್ಠೈರ್ದೇವೈರಿವ ಶತಕ್ರತುಃ || ೪೧೫ ||

ದಿಷ್ಟ್ಯಾ ಮೇ ನಿರ್ಜಿತಾ ವಿಘ್ನಾ ದಿಷ್ಟ್ಯಾ ಮೇ ಪೂಜಿತಂ ಕುಲಮ್ |
ರಾಘವೈಃ ಸಹ ಸಂಬಂಧಾದ್ವೀರ್ಯಶ್ರೇಷ್ಠೈರ್ಮಹಾತ್ಮಭಿಃ || ೪೧೬ ||

ಶ್ವಃ ಪ್ರಭಾತೇ ನರೇಂದ್ರ ತ್ವಂ ನಿರ್ವರ್ತಯಿತುಮರ್ಹಸಿ |
ಯಜ್ಞಸ್ಯಾಂತೇ ನರಶ್ರೇಷ್ಠ ವಿವಾಹಮೃಷಿಸಂಮತಮ್ || ೪೧೭ ||

ತಸ್ಯ ತದ್ವಚನಂ ಶ್ರುತ್ವಾ ಋಷಿಮಧ್ಯೇ ನರಾಧಿಪಃ |
ವಾಕ್ಯಂ ವಾಕ್ಯವಿದಾಂ ಶ್ರೇಷ್ಠಃ ಪ್ರತ್ಯುವಾಚ ಮಹೀಪತಿಮ್ ||

ಪ್ರತಿಗ್ರಹೋ ದಾತೃವಶಃ ಶ್ರುತಮೇತನ್ಮಯಾ ಪುರಾ |
ಯಥಾ ವಕ್ಷ್ಯಸಿ ಧರ್ಮಜ್ಞ ತತ್ಕರಿಷ್ಯಾಮಹೇ ವಯಮ್ || ೪೧೯ ||

---

೪೧೫. ಮಹಾತೇಜಸ್ವಿಯೂ, ತ್ರಿಕಾಲಜ್ಞಾನಿಯೂ ಆದ ಪೂಜ್ಯ ವಸಿಷ್ಠನು ಎಲ್ಲ ಋಷಿಗಳೊಡನೆ ದೇವತೆಗಳೊಂದಿಗೆ ಇಂದ್ರನು ಬಂದಹಾಗೆ ಇಲ್ಲಿಗೆ ಬಂದಿರುವುದು ನನ್ನದೊಂದು ಭಾಗ್ಯ.

೪೧೬. ರಾಜನೇ! ಇಂದು ನಾನು ಭಾಗ್ಯದಿಂದ ಎಲ್ಲ ವಿಘ್ನಗಳನ್ನು ದಾಟಿದಂತಾಯಿತು. ಪರಾಕ್ರಮದಿಂದ ಶ್ರೇಷ್ಠರೆನಿಸಿದ ರಘುಕುಲದವರೊಡನೆ ಸಂಬಂಧ ಬೆಳೆಯುವುದರಿಂದ ನನ್ನ ಕುಲಕ್ಕೆ ಮನ್ನಣೆ ಬಂದುದು ನನ್ನ ಭಾಗ್ಯ.

೪೧೭. ಪುರುಷಶ್ರೇಷ್ಠನೇ! ನಾಳೆ ಬೆಳಿಗ್ಗೆ ಯಜ್ಞವು ಕೊನೆಗಾಣಲು ಋಷಿಸಮ್ಮತವಾದ ವಿವಾಹವನ್ನು ನಡೆಸಿಕೊಡಬೇಕು”

೪೧೮-೧೯. ಋಷಿಗಳ ಮಧ್ಯದಲ್ಲಿ ಅವನ ಆ ಮಾತನ್ನು ಕೇಳಿ ಮಾತು ಬಲ್ಲವರಲ್ಲಿ ಶ್ರೇಷ್ಠನಾದ ದಶರಥನು ಜನಕರಾಜನನ್ನು ಕುರಿತು ಹೇಳಿದನು. “ತೆಗೆದುಕೊಳ್ಳುವುದು ಕೊಡುವವನನ್ನು ಅವಲಂಬಿಸಿದೆಯೆಂಬುದನ್ನು ನಾನು ಕೇಳಿರುವೆನು. ಆದುದರಿಂದ ಧರ್ಮವನ್ನರಿತವನೇ! ಕನ್ಯಾದಾನಮಾಡುವ ನೀನು ಹೇಳುವ ಹಾಗೆ ನಡೆಯಲು ನಾವು ಸಿದ್ಧವಾಗಿರುವೆವು.

ಏವಂ ಬ್ರುವಾಣಂ ಜನಕಃ ಪ್ರತ್ಯುವಾಚ ಕೃತಾಂಜಲಿಃ ।
ಸೀತಾಂ ರಾಮಾಯ ಭದ್ರಂ ತೇ ಊರ್ಮಿಲಾಂ ಲಕ್ಷ್ಮಣಾಯ ಚ ॥
ದದಾಮಿ ಪರಮಪ್ರೀತೋ ವಧ್ವೌ ತೇ ರಘುನಂದನ ॥ ೪೨೦ ॥
ರಾಮಲಕ್ಷ್ಮಣಯೋ ರಾಜನ್ ಗೋದಾನಂ ಕಾರಯಸ್ವ ಹ ।
ಪಿತೃಕಾರ್ಯಂ ಚ ಭದ್ರಂ ತೇ ತತೋ ವೈವಾಹಿಕಂ ಕುರು ॥ ೪೨೧ ॥
ತಮುಕ್ತವಂತಂ ವೈದೇಹಂ ವಿಶ್ವಾಮಿತ್ರೋ ಮಹಾಮುನಿಃ ।
ಉವಾಚ ವಚನಂ ವೀರಂ ವಸಿಷ್ಠಸಹಿತೋ ನೃಪಮ್ ॥ ೪೨೨ ॥
ಅಚಿನ್ತ್ಯಾನ್ಯಪ್ರಮೇಯಾನಿ ಕುಲಾನಿ ನರಪುಙ್ಗವ ।
ಇಕ್ಷ್ವಾಕೂಣಾಂ ವಿದೇಹಾನಾಂ ನೈಷಾಂ ತುಲ್ಯೋಽಸ್ತಿ ಕಶ್ಚನ ॥
ಸದೃಶೋ ಧರ್ಮಸಂಬಂಧಃ ಸದೃಶೋ ರೂಪಸಂಪದಾ ।

---

೪೨೦. ಎಂದೀರೀತಿ ಹೇಳುತ್ತಿರುವ ದಶರಥನನ್ನು ಕುರಿತು ಜನಕನು ಕೈ ಜೋಡಿಸಿಕೊಂಡು "ರಘುಶ್ರೇಷ್ಠನೇ! ನನ್ನ ಮಗಳು ಸೀತೆಯನ್ನು ರಾಮನಿಗೂ, ಊರ್ಮಿಳೆಯನ್ನು ಲಕ್ಷ್ಮಣನಿಗೂ, ಬಹಳ ಸಂತೋಷದಿಂದ ವಿವಾಹ ಮಾಡಿಕೊಡುವೆನು. ಅವರಿಬ್ಬರೂ ನಿನಗೆ ಸೊಸೆಯರಾಗಿ ಆಗಲಿ.

೪೨೧. ರಾಮಲಕ್ಷ್ಮಣರಿಗೆ ವಿವಾಹಕ್ಕೆ ಅಂಗವಾಗಿ ಮಾಡಬೇಕಾದ ಸಮಾವರ್ತನ, ನಾಂದೀಶ್ರಾದ್ಧ ಮುಂತಾದ ಕಾರ್ಯಗಳನ್ನು ನಡೆಸುವನಾಗು ಎಂದು ವಿಜ್ಞಾಪಿಸಿಕೊಂಡನು.

೪೨೨. ಜನಕನು ಈರೀತಿ ಹೇಳಲು ವಸಿಷ್ಠನೊಂದಿಗೆ ಅಲ್ಲಿದ್ದ ವಿಶ್ವಾಮಿತ್ರ ಮಹಾಮುನಿಯು ವೀರನಾದ ಜನಕರಾಜನನ್ನು ಕುರಿತು ಈರೀತಿ ಹೇಳಿದನು.

೪೨೩-೪೨೪. "ಪುರುಷಶ್ರೇಷ್ಠನೇ! ಇಕ್ಷ್ವಾಕುನಿಮಿಕುಲಗಳ ಮಹತ್ವವನ್ನು ಇಷ್ಟೆಂದು ಹೇಳಲು ಸಾಧ್ಯವಿಲ್ಲ. ಹೇಳುವಂತಿರಲಿ, ಯೋಚಿಸಲೂ ಸಹ ಶಕ್ಯವಿಲ್ಲ. ಈ ಕುಲಗಳಿಗೆ ಸರಿಸಮನಾದುದು ಮತ್ತೊಂದಿಲ್ಲ. ಈ ಕುಲಗಳಿಗೆ ಧಾರ್ಮಿಕಸಂಬಂಧವು ಅನುಗುಣವಾದುದು. ಅಲ್ಲದೆ ರಾಜನೇ! ರೂಪ

ರಾಮಲಕ್ಷ್ಮಣಯೋ ರಾಜನ್ ಸೀತಾ ಚೋರ್ಮಿಳಯಾ ಸಹ ||
ವಕ್ತವ್ಯಂ ಚ ನರಶ್ರೇಷ್ಠ ಶ್ರೂಯತಾಂ ವಚನಂ ಮಮ |
ಭ್ರಾತಾ ಯವೀಯಾನ್ ಧರ್ಮಜ್ಞ ಏಷ ರಾಜಾ ಕುಶಧ್ವಜಃ ||
ಅಸ್ಯ ಧರ್ಮಾತ್ಮನೋ ರಾಜನ್ ರೂಪೇಣಾಪ್ರತಿಮಂ ಭುವಿ |
ಸುತಾದ್ವಯಂ ನರಶ್ರೇಷ್ಠ ಪತ್ನ್ಯರ್ಥಂ ವರಯಾಮಹೇ |
ಭರತಸ್ಯ ಕುಮಾರಸ್ಯ ಶತ್ರುಘ್ನಸ್ಯ ಚ ಧೀಮತಃ || ೪೨೬ ||
ವಿಶ್ವಾಮಿತ್ರವಚಃ ಶ್ರುತ್ವಾ ವಸಿಷ್ಠಸ್ಯ ಮತೇ ತದಾ |
ಜನಕಃ ಪ್ರಾಞ್ಜಲಿರ್ವಾಕ್ಯಮುವಾಚ ಮುನಿಪುಂಗವೌ || ೪೨೭ ||
ಕುಲಂ ಧನ್ಯಮಿದಂ ಮನ್ಯೇ ಯೇಷಾಂ ನೋ ಮುನಿಪುಙ್ಗವೌ |
ಸದೃಶಂ ಕುಲಸಂಬಂಧಂ ಯದಾಜ್ಞಾಪಯಥಸ್ಸ್ವಯಮ್ || ೪೨೮ ||

ಸಂಪತ್ತಿನಿಂದ ರಾಮಲಕ್ಷ್ಮಣರಿಗೆ ಅನುರೂಪರಾದವರು ಸೀತಾ ಊರ್ಮಿಳೆಯರೇ. ಸೀತಾ ಊರ್ಮಿಳೆಯರಿಗೆ ಅನುರೂಪರಾದವರುರಾಮ ಲಕ್ಷ್ಮಣರೇ.

೪೨೫-೨೬. ರಾಜನೇ ! ನನ್ನದೊಂದು ಹೇಳಬೇಕಾದ ಮಾತಿರುವುದು. ಕೇಳು. ಇವನು ನಿನ್ನ ಚಿಕ್ಕ ತಮ್ಮನಾದ ಧರ್ಮವನ್ನರಿತ ಕುಶಧ್ವಜನೇ ಅಲ್ಲವೇ ? ಧರ್ಮಿಷ್ಠನಾದ ಇವನ ಅನುಪಮ ಸೌಂದರ್ಯವುಳ್ಳ ಇಬ್ಬರು ಹೆಣ್ಣುಮಕ್ಕಳನ್ನೂ ದಶರಥಪುತ್ರರಾದ ಭರತ ಮತ್ತು ಶತ್ರುಘ್ನರಿಗೆ ಮದುವೆ ಮಾಡಿಕೊಡಲು ವರಿಸುತ್ತೇವೆ.”

೪೨೭. ಈರೀತಿ ವಸಿಷ್ಠನ ಅಭಿಪ್ರಾಯದಂತೆ ವಿಶ್ವಾಮಿತ್ರನು ಹೇಳಿದ್ದ ಮಾತನ್ನು ಕೇಳಿ ಜನಕನು ಅಂಜಲಿಬಂಧಮಾಡಿಕೊಂಡು ಮುನಿಶ್ರೇಷ್ಠರನು ಕುರಿತು ಹೀಗೆ ವಿಜ್ಞಾಪಿಸಿಕೊಂಡನು.

೪೨೮. “ಮುನಿವರ್ಯರೇ ! ನಮ್ಮಾ ಕುಲವು ಇಕ್ಷ್ವಾಕುವಂಶದೊಡನೆ ಸಂಬಂಧ ಹೊಂದಲು ಯೋಗ್ಯವೆಂದು ಮುನಿಶ್ರೇಷ್ಠರಾದ ನೀವು ತಾವಾಗಿಯೇ ಅಪ್ಪಣೆಕೊಡಿಸುವಿರಾದ ಕಾರಣ ಈ ನಮ್ಮ ಕುಲವು ಭಾಗ್ಯಶಾಲಿಯಾದುದೆಂದು ಭಾವಿಸುತ್ತೇನೆ.

ಏವಂ ಭವತು ಭದ್ರಂ ವಃ ಕುಶಧ್ವಜಸುತೇ ಇಮೇ ।
ಪತ್ನ್ಯೌ ಭಜೇತಾಂ ಸಹಿತೌ ಶತ್ರುಘ್ನಭರತಾವುಭೌ ॥ ೪೨೯ ॥
ಏಕಾಹ್ನಾ ರಾಜಪುತ್ರೀಣಾಂ ಚತಸೄಣಾಂ ಮಹಾಮುನೇ ।
ಪಾಣೀನ್ ಗೃಹ್ಣಂತು ಚತ್ವಾರೋ ರಾಜಪುತ್ರಾ ಮಹಾಬಲಾಃ ।
ಪರೋ ಧರ್ಮಃ ಕೃತೋ ಮಹ್ಯಂ ಶಿಷ್ಯೋಽಸ್ಮಿ ಭವತೋಃ ಸದಾ ॥
ತಮಾಪೃಷ್ಟ್ವಾ ನರಪತಿಂ ರಾಜಾ ದಶರಥಸ್ತದಾ ।
ಮುನೀಂದ್ರೌ ತೌ ಪುರಸ್ಕೃತ್ಯ ಜಗಾಮಾಶು ಮಹಾಯಶಾಃ ॥ ೪೩೧ ॥
ತತಸ್ತ್ವಾಮುಷಿತೋ ರಾತ್ರಿಂ ಸಹ ಪುತ್ರೈರ್ಮಹಾತ್ಮಭಿಃ ।
ಪ್ರಭಾತೇ ಕಾಲ್ಯಮುತ್ಥಾಯ ಕೃತ್ವಾ ಕರ್ಮಾಣಿ ಕರ್ಮವಿತ್ ।
ಋಷೀಂಸ್ತದಾ ಪುರಸ್ಕೃತ್ಯ ಯಜ್ಞವಾಟಮುಪಾಗಮತ್ ॥ ೪೩೨ ॥

---

೪೨೯. ಒಳ್ಳೆಯದು ಹಾಗೆಯೇ ಆಗಲಿ. ಕುಶಧ್ವಜನ ಈ ಕನ್ಯೆಯರಿಬ್ಬರನ್ನು ಒಬ್ಬರನ್ನೊಬ್ಬರು ಬಿಟ್ಟಗಲದಿರುವ ಭರತ ಶತ್ರುಘ್ನರು ಮದುವೆಮಾಡಿಕೊಳ್ಳಲಿ.

೪೩೦. ಮಹಾಮುನಿಯೇ ! ಮಹಾ ಬಲಿಷ್ಠರಾದ ನಾಲ್ಕು ಜನ ರಾಜಪುತ್ರರೂ ಒಂದೇ ದಿನ ನಾಲ್ಕು ಜನ ರಾಜಕನ್ಯೆಯರನ್ನು ಮದುವೆಮಾಡಿಕೊಳ್ಳಲಿ. ನನ್ನ ವಿಷಯದಲ್ಲಿ ತಾವು ಮಾಡಿರುವುದು ಉತ್ತಮವಾದ ಧರ್ಮವಾಗಿರುವುದು. ತಮ್ಮ ಆಜ್ಞೆಯನ್ನು ನಡೆಸಲು ಯಾವಾಗಲೂ ಸಿದ್ಧನಿರುವೆನು.

೪೩೧. ಬಳಿಕ ಕೀರ್ತಿಯನ್ನು ಗಳಿಸಿರುವ ದಶರಥರಾಜನು ಜನಕರಾಜನ ಅನುಮತಿಯನ್ನು ಹೊಂದಿ ಮುನಿಶ್ರೇಷ್ಠರಾದ ವಸಿಷ್ಠ, ವಿಶ್ವಾಮಿತ್ರರನ್ನು ಮುಂದಿಟ್ಟುಕೊಂಡು ತನಗಾಗಿ ಏರ್ಪಡಿಸಿದ್ದ ಮನೆಗೆ ಹೋಗಿಸೇರಿದನು.

೪೩೨. ಅಲ್ಲಿ ಅಂದಿನ ರಾತ್ರಿಯನ್ನು ಕಳೆದು ಕರ್ಮಗಳ ಮರ್ಮವನ್ನು ಅರಿತ ದಶರಥನು ಮುಂಜಾನೆ ಮಹಿಮಾಸಂಪನ್ನರಾದ ತನ್ನ ಮಕ್ಕಳೊಡನೆ ಎಲ್ಲ ಕರ್ಮಗಳನ್ನು ನಡೆಸಿ ಋಷಿಗಳನ್ನು ಮುಂದಿಟ್ಟುಕೊಂಡು ಯಾಗಶಾಲೆಗೆ ಬಂದು ಸೇರಿದನು.

ಯುಕ್ತೇ ಮುಹೂರ್ತೇ ವಿಜಯೇ ಸರ್ವಾಭರಣಭೂಷಿತೈಃ ।
ಭ್ರಾತೃಭಿಃ ಸಹಿತೋ ರಾಮಃ ಕೃತಕೌತುಕಮಂಗಲಃ ॥ ೪೩೩ ॥

ವಸಿಷ್ಠಂ ಪುರತಃ ಕೃತ್ವಾ ಮಹರ್ಷೀನಪರಾನಪಿ ।
ಪಿತುಃ ಸಮೀಪಮಾಶ್ರಿತ್ಯ ತಸ್ಥೌ ಭ್ರಾತೃಭಿರಾವೃತಃ ॥ ೪೩೪ ॥

ವಸಿಷ್ಠೋ ಭಗವಾನೇತ್ಯ ವೈದೇಹಮಿದಮಬ್ರವೀತ್ ।
ರಾಜಾ ದಶರಥೋ ರಾಜನ್ ಕೃತಕೌತುಕಮಂಗಲೈಃ ॥ ೪೩೫ ॥

ಪುತ್ರೈರ್ನರವರಶ್ರೇಷ್ಠ ದಾತಾರಮಭಿಕಾಂಕ್ಷತೇ ।
ಸ್ವಧರ್ಮಂ ಪ್ರತಿಪದ್ಯಸ್ವ ಕೃತ್ವಾ ವೈವಾಹ್ಯಮುತ್ತಮಮ್ ॥ ೪೩೬ ॥

ಇತ್ಯುಕ್ತಃ ಪರಮೋದಾರೋ ವಸಿಷ್ಠೇನ ಮಹಾತ್ಮನಾ ।
ಪ್ರತ್ಯುವಾಚ ಮಹಾತೇಜಾ ವಾಕ್ಯಂ ಪರಮಧರ್ಮವಿತ್ ॥ ೪೩೭ ॥

ಕೃತಕೌತುಕಸರ್ವಸ್ವಾ ವೇದಿಮೂಲಮುಪಾಗತಾಃ ।
ಮಮ ಕನ್ಯಾ ಮುನಿಶ್ರೇಷ್ಠ ದೀಪ್ತಾ ವಹ್ನೇರ್ಯಥಾಽರ್ಚಿಷಃ ॥

೪೩೩-೪೩೪. ಎಲ್ಲ ಆಭರಣಗಳಿಂದ ಅಲಂಕೃತರಾದ ಸಹೋದರರೊಡನೆ ರಾಮನು ವಿವಾಹಯೋಗ್ಯವಾದ ಶುಭಪ್ರದವೇಳೆಯಲ್ಲಿ ವಸಿಷ್ಠಮುನಿಯನ್ನೂ, ಇತರ ಮಹರ್ಷಿಗಳನ್ನೂ ಮುಂದುಮಾಡಿಕೊಂಡು ತಂದೆಯ ಹತ್ತಿರ ಬಂದು ತಮ್ಮಂದಿರ ನಡುವೆ ನಿಂತನು

೩೩೫-೪೩೬. ಪೂಜ್ಯ ವಸಿಷ್ಠನು ಜನಕನ ಬಳಿ ಹೋಗಿ "ರಾಜಶ್ರೇಷ್ಠನೇ ! ವಿವಾಹಸೂತ್ರಧಾರಿಗಳಾದ ಮಕ್ಕಳೊಡನೆ ದಶರಥರಾಜನು ದಾತೃವಾದ ನಿನ್ನನ್ನೇ ನಿರೀಕ್ಷಿಸುತ್ತಿರುವನು. ಈ ಉತ್ತಮ ವಿವಾಹಕಾರ್ಯವನ್ನು ನಡೆಸಿ ನಿನ್ನ ಪ್ರತಿಜ್ಞೆಯನ್ನು ಸಫಲಗೊಳಿಸು" ಎಂದು ಹೇಳಿದನು.

೪೩೭-೪೩೯. ಬಹಳ ಉದಾರಿಯೂ, ಮಹಾತೇಜಸ್ವಿಯೂ, ಧರ್ಮಗಳ ಮರ್ಮವನ್ನರಿತವನೂ ಆದ ಜನಕನು ಮಹಾತ್ಮನಾದ ವಸಿಷ್ಠನಿಂದ ಈರೀತಿ ಹೇಳಲ್ಪಟ್ಟವನಾಗಿ ಅವನನ್ನು ಕುರಿತು "ಮುನಿಶ್ರೇಷ್ಠನೇ ! ನನ್ನ ಕನ್ಯೆಯರು ವಿವಾಹಕ್ಕೆ ಬೇಕಾದ ಮಂಗಳಕಾರ್ಯಗಳನ್ನೆಲ್ಲಾ ಮುಗಿಸಿ

ಸಜ್ಜೋಽಹಂ ತ್ವತ್ಪ್ರತೀಕ್ಷೋಽಸ್ಮಿ ವೇದ್ಯಾಮಸ್ಯಾಂ ಪ್ರತಿಷ್ಠಿತಃ ।
ಅವಿಘ್ನಂ ಕ್ರಿಯತಾಂ ಸರ್ವಂ ಕಿಮರ್ಥಂ ಹಿ ವಿಲಂಬ್ಯತೇ ॥ ೪೯ ॥
ಅಥ ರಾಜಾ ದಶರಥಃ ಪುತ್ರೈಃ ಸ್ತ್ರೀಭಿಶ್ಚ ಸಂವೃತಃ ।
ಸರ್ವಾನೃಷೀನ್ ಪುರಸ್ಕೃತ್ಯ ಪ್ರವಿವೇಶ ಮಹಾದ್ಯುತಿಃ ॥ ೫೦ ॥
ಪ್ರವೇಶ್ಯಮಾನಂ ರಾಜಾನಂ ವಸಿಷ್ಠಂ ಗಾಧಿನಃ ಸುತಮ್ ।
ಸರ್ವಾನ್ ನೃಪವರಾನ್ ವಿಪ್ರಾನ್ ಜನಕೋ ಧರ್ಮವತ್ಸಲಃ ॥
ವಸ್ತ್ರೈರಾಭರಣೈಶ್ಚೈವ ಗಂಧಪುಷ್ಪೈಶ್ಚ ಸಾಕ್ಷತೈಃ ।
ಪೂಜಯಾಮಾಸ ವಿಧಿವದ್ಯಥಾಯೋಗ್ಯಂ ಯಥಾಕ್ರಮಮ್ ॥೫೨॥
ತತೋ ರಾಜಾ ವಿದೇಹಾನಾಂ ವಸಿಷ್ಠಮಿದಮಬ್ರವೀತ್ ।
ಕಾರಯಸ್ವ ಋಷೇ ಸರ್ವಮೃಷಿಭಿಃ ಸಹ ಧಾರ್ಮಿಕ ।

ಕೊಂಡು ಬಂದು ವಿವಾಹಮಂಟಪದಲ್ಲಿ ಬೆಂಕಿಯ ಜ್ವಾಲೆಯಂತೆ ಹೊಳೆಯು ತ್ತಿರುವರು. ನಿಮ್ಮನ್ನೇ ಎದುರು ನೋಡುತ್ತಾ ಇಲ್ಲೇ ವೇದಿಕೆಯಲ್ಲಿ ನಿಂತು ನಾನೂ ಸಿದ್ಧನಾಗಿರುವೆನು. ಸಾಂಗವಾಗಿ ತಡೆಯಿಲ್ಲದೇ ಎಲ್ಲ ಕಾರ್ಯಗಳೂ ನಡೆಯಲಿ. "ಸಾವಕಾಶವೇಕೆ ?" ಎಂದು ವಿಜ್ಞಾಪಿಸಿಕೊಂಡನು.

೫೦. ಅನಂತರ ಕಾಂತಿಯಿಂದ ಹೊಳೆಯುತ್ತಿದ್ದ ದಶರಥರಾಜನು ಮಕ್ಕಳು ಹೆಂಗಸರೊಡನೆ ಕೂಡಿ ಎಲ್ಲಾ ಮಹರ್ಷಿಗಳನ್ನೂ ಮುಂದಿಟ್ಟು ಕೊಂಡು ವಿವಾಹಮಂಟಪವನ್ನು ಪ್ರವೇಶಿಸಿದನು.

೫೧-೫೨. ಧರ್ಮದಲ್ಲಿ ಬಹಳವಾಗಿ ಆಸಕ್ತಿಯುಳ್ಳ ಜನಕನು ಪ್ರವೇಶಿಸುವ ದಶರಥನನ್ನು, ವಸಿಷ್ಠ, ಗಾಧಿಯ ಮಗ ವಿಶ್ವಾಮಿತ್ರ, ರಾಜ ಶ್ರೇಷ್ಠರು, ಬ್ರಾಹ್ಮಣರು ಆದಿಯಾಗಿ ಎಲ್ಲರನ್ನೂ ಕ್ರಮವಾಗಿ ಅವರವರ ಯೋಗ್ಯತೆಗೆ ತಕ್ಕಂತೆ ವಿಧಿವತ್ತಾಗಿ ವಸ್ತ್ರ, ಆಭರಣ, ಗಂಧ, ಪುಷ್ಪ, ಅಕ್ಷತೆ ಗಳಿಂದ ಗೌರವಿಸಿ ಸತ್ಕರಿಸಿದನು.

೫೩. ಸತ್ಕಾರವಾದ ಬಳಿಕ ವಿದೇಹಾಧಿಪತಿಯಾದ ಜನಕನು "ಸರ್ವ ಸಾಮರ್ಥ್ಯವುಳ್ಳ, ಧಾರ್ಮಿಕನಾದ ಮುನಿಯೇ ! ಲೋಕದವರೆಲ್ಲರಿಗೂ

ರಾಮಸ್ಯ ಲೋಕರಾಮಸ್ಯ ಕ್ರಿಯಾಂ ವೈವಾಹಿಕೀಂ ಪ್ರಭೋ ||೪೪೩||
ತಥೇತ್ಯುಕ್ತ್ವಾ ತು ಜನಕಂ ವಸಿಷ್ಠೋ ಭಗವಾನೃಷಿಃ ।
ವಿಶ್ವಾಮಿತ್ರಂ ಪುರಸ್ಕೃತ್ಯ ಶತಾನಂದಂ ಚ ಧಾರ್ಮಿಕಮ್ || ೪೪೪ ||
ಪ್ರಪಾಮಧ್ಯೇ ತು ವಿಧಿವದ್ವೇದಿಂ ಕೃತ್ವಾ ಮಹಾತಪಾಃ ।
ಅಲಂಚಕಾರ ತಾಂ ವೇದಿಂ ಗಂಧಪುಷ್ಪೈಃ ಸಮಂತತಃ || ೪೪೫ ||
ಅಗ್ನಿಮಾಧಾಯ ವೇದ್ಯಾಂ ತು ವಿಧಿಮಂತ್ರಪುರಸ್ಕೃತಮ್ ।
ಜುಹಾವಾಗ್ನೌ ಮಹಾತೇಜಾ ವಸಿಷ್ಠೋ ಭಗವಾನೃಷಿಃ || ೪೪೬ ||
ತತಃ ಸೀತಾಂ ಸಮಾನೀಯ ಸರ್ವಾಭರಣಭೂಷಿತಾಮ್ ।
ಸಮಕ್ಷಮಗ್ನೇಃ ಸಂಸ್ಥಾಪ್ಯ ರಾಘವಾಭಿಮುಖೇ ತದಾ ।
ಅಬ್ರವೀಜ್ಜನಕೋ ರಾಜಾ ಕೌಸಲ್ಯಾನಂದವರ್ಧನಮ್ || ೪೪೭ ||

ಆನಂದವನ್ನುಂಟುಮಾಡುವಂತಹವನಾದ ರಾಮನಿಗೆ ವಿವಾಹಕಾರ್ಯವೆಲ್ಲವನ್ನೂ ತಾವು ನಡೆಸಿಕೊಡಬೇಕು" ಎಂದು ವಸಿಷ್ಠನನ್ನು ಪ್ರಾರ್ಥಿಸಿಕೊಂಡನು.

೪೪೪-೪೪೫. ಹಾಗೆಯೇ ಆಗಲೆಂದು ಜನಕನಿಗೆ ಮಹಾತಪಸ್ಸನ್ನಾಚರಿಸಿದ, ಮಂತ್ರಗಳೆಲ್ಲವನ್ನು ಕಂಡುಕೊಂಡಿರುವ ಪೂಜ್ಯ ವಸಿಷ್ಠನು ವಿಶ್ವಾಮಿತ್ರನನ್ನು, ಮತ್ತು ಧಾರ್ಮಿಕನಾದ ಶತಾನಂದನನ್ನು ಮುಂದಿಟ್ಟುಕೊಂಡು, ಸೋಗೆಯಗರಿ ಮೊದಲಾದವುಗಳಿಂದ ನಿರ್ಮಾಣಮಾಡಿದ ಮಂಟಪದ ನಡುವೆ ಶಾಸ್ತ್ರವತ್ತಾಗಿ ಜಗುಲಿಯನ್ನು ಮಾಡಿ ಸುತ್ತಲೂ ಗಂಧಪುಷ್ಪಗಳಿಂದ ಆ ಜಗುಲಿಯನ್ನು ಅಲಂಕರಿಸಿದನು.

೪೪೬. ಜಗುಲಿಯ ಮೇಲೆ ಮಂತ್ರಪೂರ್ವಕವಾಗಿ ಅಗ್ನಿಯನ್ನು ಪ್ರತಿಷ್ಠೆ ಮಾಡಿ ಮಹಾತೇಜಸ್ವಿಯಾದ ವಸಿಷ್ಠನು ಅಗ್ನಿಯಲ್ಲಿ ಹೋಮಮಾಡಿದನು.

೪೪೭. ಬಳಿಕ ಎಲ್ಲಾ ಆಭರಣಗಳಿಂದ ಅಲಂಕೃತಳಾದ ಸೀತೆಯನ್ನು ಕರೆತಂದು ಅಗ್ನಿಯ ಹತ್ತಿರ ರಾಮನೆದುರಿಗೆ ನಿಲ್ಲಿಸಿ ಜನಕರಾಜನು ಕೌಸಲ್ಯೆಗೆ ಆನಂದವನ್ನು ಬೆಳೆಸುವ ಅವನನ್ನು ಕುರಿತು ಈರೀತಿ ಹೇಳಿದನು.

ಇಯಂ ಸೀತಾ ಮಮ ಸುತಾ ಸಹಧರ್ಮಚರೀ ತವ ।
ಪ್ರತೀಚ್ಛ ಚೈನಾಂ ಭದ್ರಂ ತೇ ಪಾಣಿಂ ಗೃಹ್ಣೀಷ್ವ ಪಾಣಿನಾ ॥ ೪೪೮ ॥
ಪತಿವ್ರತಾ ಮಹಾಭಾಗಾ ಛಾಯೇವಾನುಗತಾ ಸದಾ ।
ಇತ್ಯುಕ್ತ್ವಾ ಪ್ರಾಕ್ಷಿಪದ್ರಾಜಾ ಮನ್ತ್ರಪೂತಂ ಜಲಂ ತದಾ ॥ ೪೪೯ ॥
ಏವಂ ದತ್ವಾ ಸುತಾಂ ಸೀತಾಂ ಮನ್ತ್ರೋದಕಪುರಸ್ಕೃತಾಮ್ ।
ಅಬ್ರವೀಜ್ಜನಕೋ ರಾಜಾ ಹರ್ಷೇಣಾಭಿಪರಿಪ್ಲುತಃ ॥ ೪೫೦ ॥
ಲಕ್ಷ್ಮಣಾಗಚ್ಛ ಭದ್ರಂ ತೇ ಊರ್ಮಿಲಾಮುದ್ಯತಾಂ ಮಯಾ ।
ಪ್ರತೀಚ್ಛ ಪಾಣಿಂ ಗೃಹ್ಣೀಷ್ವ ಮಾ ಭೂತ್ಕಾಲಸ್ಯ ಪರ್ಯಯಃ ॥
ತಮೇವಮುಕ್ತ್ವಾ ಜನಕೋ ಭರತಂ ಚಾಭ್ಯಭಾಷತ ।
ಪಾಣಿಂ ಗೃಹಾಣ ಮಾಂಡವ್ಯಾಃ ಪಾಣಿನಾ ರಘುನಂದನ ॥ ೪೫೨ ॥

೪೪೮-೪೪೯. "ರಾಮ ! ವರ್ಣಿಸಲಾಗದ ಸೌಂದರ್ಯವುಳ್ಳ ಇವಳು ಸದಾಚಾರಸಂಪನ್ನಳಾದ ನನ್ನ ಮಗಳು. ನಿನ್ನ ಕೂಡ ಧರ್ಮಗಳನ್ನು ಆಚರಿಸಲು ಸಿದ್ಧಳಿರುವಳು. ಇವಳನ್ನು ಸ್ವೀಕರಿಸು. ನಿನಗೆ ಮಂಗಳವಾಗಲಿ. ನಿನ್ನ ಕೈಯಿಂದ ಇವಳ ಕೈಯನ್ನು ಹಿಡಿದುಕೊ. ಇವಳು ನೆರಳಿನಂತೆ ಯಾವಾಗಲೂ ನಿನ್ನನ್ನೇ ಹಿಂಬಾಲಿಸುವವಳಾಗಿ ಉತ್ತಮ ಪತಿವ್ರತೆಯೆಂದೆನಿಸಿಕೊಳ್ಳುವ ಮಹಾಭಾಗ್ಯಶಾಲಿನಿಯಾಗಿರುವಳು" ಎಂದು ಹೇಳಿ ಮಂತ್ರಗಳಿಂದ ಪವಿತ್ರವಾದ ನೀರನ್ನು ಧಾರೆಯೆರೆದನು.

೪೫೦. ಈರೀತಿ ಮಂತ್ರೋದಕದೊಡನೆ ಸೀತೆಯನ್ನು ದಾನಮಾಡಿ ತುಂಬಿದ ಸಂತೋಷವುಳ್ಳ ಜನಕರಾಜನು ಲಕ್ಷ್ಮಣನನ್ನು ಕುರಿತು ಹೇಳಿದನು.

೪೫೧. "ಲಕ್ಷ್ಮಣ! ಬಾ, ನಿನಗೆ ಮಂಗಳವಾಗಲಿ. ನನಗೆ ಹುಟ್ಟಿದ ಈ ಊರ್ಮಿಳೆಯನ್ನು ಸ್ವೀಕರಿಸು. ನಿನ್ನ ಕೈಯಿಂದ ಇವಳ ಕೈಯನ್ನು ಹಿಡಿ. ಕಾಲತಾಮಸವಾಗುವುದು ಬೇಡ."

೪೫೨. ಅವನಿಗೀರೀತಿ ಹೇಳಿ "ರಘುಶ್ರೇಷ್ಠನೇ ! ಮಾಂಡವಿಯ ಕೈಯನ್ನು ನಿನ್ನ ಕೈಯಿಂದ ಹಿಡಿದುಕೊ" ಎಂದು ಭರತನಿಗೆ ಹೇಳಿದನು.

ಶತ್ರುಘ್ನಂ ಚಾಽಪಿ ಧರ್ಮಾತ್ಮಾ ಅಬ್ರವಿಜ್ಜನಕೇಶ್ವರಃ ।
ಶ್ರುತಕೀರ್ತ್ಯಾ ಮಹಾಬಾಹೋ ಪಾಣಿಂ ಗೃಹ್ಣೀಷ್ವ ಪಾಣಿನಾ ॥

ಜನಕಸ್ಯ ವಚಃ ಶ್ರುತ್ವಾ ಪಾಣೀನ್ ಪಾಣಿಭಿರಸ್ಪೃಶನ್ ।
ಚತ್ವಾರಸ್ತೇ ಚತಸೃಣಾಂ ವಸಿಷ್ಠಸ್ಯ ಮತೇ ಸ್ಥಿತಾಃ ॥ ೪೫೪ ॥

ಅಗ್ನಿಂ ಪ್ರದಕ್ಷಿಣೀಕೃತ್ಯ ವೇದಿಂ ರಾಜಾನಮೇವ ಚ ।
ಋಷೀಂಶ್ಚೈವ ಮಹಾತ್ಮಾನಃ ಸಭಾರ್ಯಾ ರಘುಸತ್ತಮಾಃ ।
ಯಥೋಕ್ತೇನ ತದಾ ಚಕ್ರುಃ ವಿವಾಹಂ ವಿಧಿಪೂರ್ವಕಮ್ ॥

ಪುಷ್ಪವೃಷ್ಟಿರ್ಮಹತ್ಯಾಸೀದಂತರಿಕ್ಷಾತ್ಸುಭಾಸ್ವರಾ ।
ದಿವ್ಯದುಂದುಭಿನಿರ್ಘೋಷೈರ್ಗೀತವಾದಿತ್ರನಿಸ್ವನೈಃ ॥ ೪೫೬ ॥

ನನೃತುಶ್ಚಾಪ್ಸರಃಸಙ್ಘಾ ಗಂಧರ್ವಾಶ್ಚ ಜಗುಃ ಕಲಮ್ ।

---

೪೫೩. "ಮಹಾಪರಾಕ್ರಮಶಾಲಿಯೇ! ನೀನು ಶ್ರುತಕೀರ್ತಿಯ ಕೈಯ್ಯನ್ನು ಹಿಡಿ." ಎಂದು ಶತ್ರುಘ್ನನಿಗೂ ಅಂದನು ಧರ್ಮಾತ್ಮನಾದ ಜನಕನು.

೪೫೪. ವಸಿಷ್ಠನ ಇಷ್ಟದಂತೆ ನಡೆದುಕೊಳ್ಳುವ ನಾಲ್ವರು ರಾಜಪುತ್ರರೂ ಜನಕನ ಮಾತನ್ನು ಕೇಳಿ ನಾಲ್ಕು ಜನ ರಾಜಕುಮಾರಿಯರ ಕೈಗಳನ್ನು ತಮ್ಮ ಕೈಗಳಿಂದ ಹಿಡಿದರು.

೪೫೫. ಬಳಿಕ ಹೆಂಡತಿಯರೊಡನೆ ಮಹಾತ್ಮರಾದ ರಘುಕುಲದವರಲ್ಲಿ ಶ್ರೇಷ್ಠರೆನಿಸಿದ ಅವರು ಅಗ್ನಿಯನ್ನು, ವೇದಿಕೆಯನ್ನು, ರಾಜನನ್ನು ಮತ್ತು ಮಹರ್ಷಿಗಳನ್ನು ಪ್ರದಕ್ಷಿಣೆಮಾಡಿ ಶಾಸ್ತ್ರೋಕ್ತವಾದ ರೀತಿಯಿಂದ ಕ್ರಮವಾಗಿ ಮದುವೆಮಾಡಿಕೊಂಡರು.

೪೫೬. ಆಗ ಆಕಾಶದಿಂದ ಹೊಳೆಯುವ ಹೂವಿನ ಮಳೆ ಕರೆಯಿತು. ಹಾಡು ಮತ್ತು ವಾದ್ಯಗಳ ಇಂಪಾದ ಶಬ್ದಗಳೊಂದಿಗೆ ದೇವಲೋಕದ ದುಂದುಭಿಗಳು ಮೊಳಗಿದವು.

೪೫೭. ಅಪ್ಸರೆಯರ ಗುಂಪುಗಳು ನರ್ತನಮಾಡಿದವು. ಗಂಧರ್ವರು ಇಂಪಾಗಿ ಹಾಡಿದರು. ರಘುಶ್ರೇಷ್ಠರ ಅಂದಿನ ವಿವಾಹಸಮಯದಲ್ಲಿ ಅದೆಲ್ಲ

ವಿವಾಹೇ ರಘುಮುಖ್ಯಾನಾಂ ತದದ್ಭುತಮದೃಶ್ಯತ || ೪೫೭ ||
ಅಥ ರಾತ್ರ್ಯಾಂ ವ್ಯತೀತಾಯಾಂ ವಿಶ್ವಾಮಿತ್ರೋ ಮಹಾಮುನಿಃ |
ಆಪೃಷ್ಟ್ವಾ ತೌ ಚ ರಾಜಾನೌ ಜಗಾಮೋತ್ತರಪರ್ವತಮ್ |
ಆಶೀರ್ಭಿಃ ಪೂರಯಿತ್ವಾ ಚ ಕುಮಾರಾಂಶ್ಚ ಸರಾಘವಾನ್ || ೪೫೮ ||
ರಾಜಾಪ್ಯಯೋಧ್ಯಾಧಿಪತಿಃ ಸಹ ಪುತ್ರೈರ್ಮಹಾತ್ಮಭಿಃ |
ಋಷೀನ್ ಸರ್ವಾನ್ ಪುರಸ್ಕೃತ್ಯ ಜಗಾಮ ಸಬಲಾನುಗಃ || ೪೫೯ ||
ಗಚ್ಛಂತಂ ತಂ ನರವ್ಯಾಘ್ರಂ ಸರ್ಷಿಸಂಘಂ ಸರಾಘವಮ್ |
ಘೋರಾಃ ಸ್ಮ ಪಕ್ಷಿಣೋ ವಾಚೋ ವ್ಯಾಹರಂತಿ ತತಸ್ತತಃ || ೪೬೦ ||
ತಮಸಾ ಸಂವೃತಃ ಸೂರ್ಯಃ ಸರ್ವಾ ನ ಪ್ರಬಭುರ್ದಿಶಃ |
ಭಸ್ಮನಾ ಚಾವೃತಂ ಸರ್ವಂ ಸಂಮೂಢಮಿವ ತದ್ಬಲಮ್ || ೪೬೧ ||

ವೂ ಆಶ್ಚರ್ಯಕರವಾಗಿ ಕಾಣುತ್ತಿತ್ತು.

೪೫೮. ಅನಂತರ ಅಂದಿನ ರಾತ್ರಿ ಕಳೆಯಲು ಮಾರನೆಯ ದಿನ ವಿಶ್ವಾಮಿತ್ರಮಹಾಮುನಿಯು ರಾಮ ಲಕ್ಷ್ಮಣ ಭರತ ಶತ್ರುಘ್ನರನ್ನು ಆಶೀರ್ವದಿಸಿ ದಶರಥ ಜನಕರ ಅನುಮತಿಯನ್ನು ಪಡೆದು ಉತ್ತರದಿಕ್ಕಿನಲ್ಲಿರುವ ಹಿಮಾಲಯಪರ್ವತಕ್ಕೆ ಹೊರಟು ಹೋದನು.

೪೫೯. ಅಯೋಧ್ಯಾಧಿಪತಿಯಾದ ದಶರಥರಾಜನೂ ಸಹ ಮಹಿಮಾಸಂಪನ್ನರಾದ ಮಕ್ಕಳೊಡನೆ ಸೇನಾಪರಿವಾರಗಳಿಂದ ಕೂಡಿ ಮಹರ್ಷಿಗಳನ್ನು ಮುಂದುಮಾಡಿಕೊಂಡು ಅಯೋಧ್ಯೆಗೆ ಪ್ರಯಾಣ ಬೆಳೆಸಿದನು.

೪೬೦. ಋಷಿಗಳಗುಂಪಿನೊಡನೆಯೂ ಮಕ್ಕಳೊಡನೆಯೂ ಪ್ರಯಾಣ ಮಾಡುತ್ತಿರುವ ದಶರಥನನ್ನು ಕುರಿತು ಪಕ್ಷಿಗಳು ಅಲ್ಲಲ್ಲೇ ಭಯಂಕರವಾಗಿ ಕೂಗಿಕೊಳ್ಳುತ್ತಿದ್ದವು.

೪೬೧. ಕತ್ತಲೆಯು ಸೂರ್ಯನನ್ನು ಮರೆಮಾಡಿತು. ದಿಕ್ಕುಗಳೆಲ್ಲವೂ ಕಾಂತಿಹೀನವಾದವು. ಪ್ರತಿಯೊಂದೂ ಬೂದಿಯಿಂದ ಮುಚ್ಚಲ್ಪಟ್ಟ ಹಾಗಾಯಿತು. ರಾಜನ ಆ ಸೈನ್ಯಕ್ಕೆ ದಿಕ್ಕುತೋಚದಂತಾಯಿತು.

ತಸ್ಮಿಂಸ್ತಮಸಿ ಘೋರೇ ತು ಭಸ್ಮಚ್ಛನ್ನೇವ ಸಾ ಚಮೂಃ ।
ದದರ್ಶ ಭೀಮಸಂಕಾಶಂ ಜಟಾಮಂಡಲಧಾರಿಣಮ್ ॥ ೪೬೨ ॥

ಭಾರ್ಗವಂ ಜಾಮದಗ್ನ್ಯಂ ತಂ ರಾಜರಾಜವಿಮರ್ದಿನಮ್ ।
ಜ್ವಲಂತಮಿವ ತೇಜೋಭಿರ್ದುರ್ನಿರೀಕ್ಷ್ಯಂ ಪೃಥಗ್ಜನೈಃ ॥ ೪೬೩ ॥

ಸ್ಕಂಧೇ ಚಾಸಾದ್ಯ ಪರಶುಂ ಧನುರ್ವಿದ್ಯುದ್ಗಣೋಪಮಮ್ ।
ಪ್ರಗೃಹ್ಯ ಶರಮುಖ್ಯಂ ಚ ತ್ರಿಪುರಘ್ನಂ ಯಥಾ ಶಿವಮ್ ॥ ೪೬೪ ॥

ತಂ ದೃಷ್ಟ್ವಾ ಭೀಮಸಂಕಾಶಂ ಜ್ವಲಂತಮಿವ ಪಾವಕಮ್ ।
ಸಂಗತಾ ಮುನಯಃ ಸರ್ವೇ ಸಂಜಜಲ್ಪುರಥೋ ಮಿಥಃ ॥ ೪೬೫ ॥

ಪೂರ್ವಂ ಕ್ಷತ್ರವಧಂ ಕೃತ್ವಾ ಗತಮನ್ಯುರ್ಗತಜ್ವರಃ ।
ಕ್ಷತ್ರಸ್ಯೋತ್ಸಾದನಂ ಭೂಯೋ ನ ಖಲ್ವಸ್ಯ ಚಿಕೀರ್ಷಿತಮ್ ॥ ೪೬೬ ॥

೪೬೨-೪೬೪. ಆ ಭಯಂಕರವಾದ ಕತ್ತಲಿನಲ್ಲಿ ಬೂದಿಯಿಂದ ಮುಚ್ಚಲ್ಪಟ್ಟಂತಾದ ಆ ಸೈನ್ಯವು, ಭಯಂಕರ ಪ್ರಕಾಶವುಳ್ಳ, ಜಟಾಮಂಡಲಧಾರಿಯಾದ, ಭೃಗುವಂಶದಲ್ಲಿ ಜನಿಸಿದ, ಕುಬೇರನನ್ನೂ ಸಹ ಸೋಲಿಸಿದ, ತೇಜಸ್ಸಿನಿಂದ ಉರಿಯುವಂತಿರುವ, ಸಾಧಾರಣ ಜನರಿಂದ ನೋಡಲೂ ಸಹ ಆಗದವನಾದ, ಮಿಂಚುಗಳ ಗುಂಪಿನಂತೆ ಹೊಳೆಯುತ್ತಿರುವ ಕೊಡಲಿಯನ್ನು ಮತ್ತು ಬಿಲ್ಲನ್ನು ಹೆಗಲಿನ ಮೇಲೆ ಇಟ್ಟುಕೊಂಡು, ಕೈಯ್ಯಲ್ಲಿ ಉತ್ತಮವಾದ ಬಾಣವನ್ನು ಹಿಡಿದು ತ್ರಿಪುರ ಸಂಹಾರಮಾಡಿದ ಶಂಕರನಂತೆ ಕಾಣಿಸುವ, ಜಮದಗ್ನಿಯ ಮಗನಾದ ಪರಶುರಾಮನನ್ನು ಕಂಡಿತು.

೪೬೫-೪೬೬. ಉರಿಯುವ ಬೆಂಕಿಯಂತಿರುವ, ಭಯಂಕರ ರೂಪವುಳ್ಳ ಅವನನ್ನು ಕಂಡು ಅಲ್ಲಿ ಒಟ್ಟಿಗಿದ್ದ ಮುನಿಗಳೆಲ್ಲರೂ "ಹಿಂದೆ ಇವನು ಕ್ಷತ್ರಿಯರನ್ನು ಕೊಂದು ಕೋಪವನ್ನು ಬಿಟ್ಟು ಶಾಂತನಾದವನು. ಪುನಃ ಕ್ಷತ್ರಿಯರನ್ನು ನಾಶಮಾಡುವ ಅಭಿಲಾಷೆಯು ಇವನಿಗಿರಲಾರದಷ್ಟೆ" ಎಂದು ಒಬ್ಬರಿಗೊಬ್ಬರು ಮಾತನಾಡಿಕೊಂಡರು.

ಏವಮುಕ್ತ್ವಾರ್ಘ್ಯಮಾದಾಯ ಭಾರ್ಗವಂ ಭೀಮದರ್ಶನಮ್ ।
ಋಷಯೋ ರಾಮ ರಾಮೇತಿ ವಚೋ ಮಧುರಮಬ್ರುವನ್ ॥

ಪ್ರತಿಗೃಹ್ಯ ತು ತಾಂ ಪೂಜಾಮೃಷಿದತ್ತಾಂ ಪ್ರತಾಪವಾನ್ ।
ರಾಮಂ ದಾಶರಥಿಂ ರಾಮೋ ಜಾಮದಗ್ನ್ಯೋಽಭ್ಯಭಾಷತ॥ ೪೭೮ ॥

ರಾಮ ದಾಶರಥೇ ರಾಮ ವೀರ್ಯಂ ತೇ ಶ್ರೂಯತೇಽದ್ಭುತಮ್ ।
ಅದ್ಯತೂತ್ತಮವೀರ್ಯೇಣ ತ್ವಯಾ ರಾಮ ಮಹಾಬಲಮ್ ।
ಶ್ರುತವಾನ್ ಧನುಷೋ ಭೇದಂ ತತೋಽಹಂ ದ್ರುತಮಾಗತಃ ॥

ತದಿದಂ ವೈಷ್ಣವಂ ರಾಮ ಪಿತೃಪೈತಾಮಹಂ ಮಹತ್ ।
ಕ್ಷತ್ರಧರ್ಮಂ ಪುರಸ್ಕೃತ್ಯ ಗೃಹ್ಣೀಷ್ವ ಧನುರುತ್ತಮಮ್ ॥ ೪೮೦ ॥

---

೪೭೭. ಹೀಗೆ ಮಾತನಾಡಿ ಋಷಿಗಳು ಪೂಜಾಸಾಮಗ್ರಿಗಳನ್ನು ಕೈಯ್ಯಲ್ಲಿ ತೆಗೆದುಕೊಂಡು "ರಾಮ ! ರಾಮ ! ಸತ್ಕಾರವನ್ನು ಸ್ವೀಕರಿಸಬೇಕು" ಎಂದು ಭಯಂಕರ ನೋಟವುಳ್ಳ ಪರಶುರಾಮನನ್ನು ಕುರಿತು ಮಧುರವಾದ ಮಾತುಗಳಿಂದ ವಿಜ್ಞಾಪಿಸಿಕೊಂಡರು.

೪೭೮. ಋಷಿಗಳು ಕೊಟ್ಟ ಸತ್ಕಾರವನ್ನು ಸ್ವೀಕರಿಸಿ ಜಮದಗ್ನಿಯ ಮಗ ಪರಶುರಾಮನು ಪ್ರತಾಪಶಾಲಿಯಾದ, ದಶರಥನ ಮಗನಾದ ರಾಮನನ್ನು ಸಂಬೋಧಿಸಿ ಹೇಳಲು ತೊಡಗಿದನು.

೪೭೯. "ಎಲಾ ರಾಮ ! ದಶರಥನ ಮಗನೇ ! ರಾಮ ! ನಿನ್ನ ಪರಾಕ್ರಮವು ಅತ್ಯಾಶ್ಚರ್ಯಕರವಾದುದೆಂದು ಕೇಳಲ್ಪಡುತ್ತದೆ. ಮಹಾಬಲವುಳ್ಳವನೇ ! ರಾಮ ! ಮಹಾ ವೀರನಾದ ನೀನು ಶಿವಧನುಸ್ಸನ್ನು ಮುರಿದೆಯೆಂಬ ಸಮಾಚಾರವನ್ನು ಇಂದು ಕೇಳಿ ನಾನಿಲ್ಲಿಗೆ ಓಡಿ ಬಂದಿರುವೆನು.

೪೮೦. ಇದು ತಂದೆ ತಾತನ ಕಾಲದಿಂದ ಕ್ರಮವಾಗಿ ಬಂದ ಪ್ರಸಿದ್ಧವಾದ ವೈಷ್ಣವ ಧನುಸ್ಸು. ಕ್ಷತ್ರಿಯರ ಧರ್ಮವನ್ನನುಸರಿಸಿ ಈ ಶ್ರೇಷ್ಠ ಬಿಲ್ಲನ್ನು ಕೈಯ್ಯಲ್ಲಿ ಹಿಡಿ.

ಯೋಜಯಸ್ವ ಧನುಶ್ರೇಷ್ಠೇ ಶರಂ ಪರಪುರಂಜಯಮ್ ।
ಯದಿ ಶಕ್ನೋಷಿ ಕಾಕುತ್ಸ್ಥ ದ್ವಂದ್ವಂ ದಾಸ್ಯಾಮಿ ತೇ ತತಃ ॥

ಶ್ರುತ್ವಾ ತಜ್ಜಾಮದಗ್ನ್ಯಸ್ಯ ವಾಕ್ಯಂ ದಾಶರಥಿಸ್ತದಾ ।
ಗೌರವಾದ್ಯನ್ತ್ರಿತಕಥಃ ಪಿತೂ ರಾಮಮಥಾಬ್ರವೀತ್ ॥ ೪೭೨ ॥

ವೀರ್ಯಹೀನಮಿವಾಶಕ್ತಂ ಕ್ಷತ್ರಧರ್ಮೇಣ ಭಾರ್ಗವ ।
ಅವಜಾನಾಸಿ ಮೇ ತೇಜಃ ಪಶ್ಯ ಮೇಽದ್ಯ ಪರಾಕ್ರಮಮ್ ॥ ೪೭೩ ॥

ಇತ್ಯುಕ್ತ್ವಾ ರಾಘವಃ ಕ್ರುದ್ಧೋ ಭಾರ್ಗವಸ್ಯ ಶರಾಸನಮ್ ।
ಶರಂ ಚ ಪ್ರತಿಜಗ್ರಾಹ ಹಸ್ತಾಲ್ಲಘುಪರಾಕ್ರಮಃ ॥ ೪೭೪ ॥

ಆರೋಪ್ಯ ಸ ಧನೂ ರಾಮಃ ಶರಂ ಸಜ್ಯಂ ಚಕಾರ ಹ ।
ಜಾಮದಗ್ನ್ಯಂ ತತೋ ರಾಮಂ ರಾಮಃ ಕ್ರುದ್ಧೋಽಬ್ರವೀದ್ವಚಃ ॥

---

೪೭೧. ನಿನಗೆ ಸಾಮರ್ಥ್ಯವಿದ್ದರೆ ಈ ಶ್ರೇಷ್ಠ ಬಿಲ್ಲಿನಲ್ಲಿ ಶತ್ರುಗಳ ಪಟ್ಟಣವನ್ನು ಜಯಿಸುವ ಸಾಮರ್ಥ್ಯವುಳ್ಳ ಈ ಬಾಣವನ್ನು ತೊಡು. ರಾಮ! ಇದು ನಿನ್ನಿಂದಾಗುವುದಾದರೆ ಬಳಿಕ ನನ್ನೊಡನೆ ದ್ವಂದ್ವಯುದ್ಧ ಮಾಡುವಿಯಂತೆ"

೪೭೨. ಪರಶುರಾಮನ ಆ ಜಂಬದ ಮಾತನ್ನು ಕೇಳಿ ದಾಶರಥಿ ರಾಮನು ಹತ್ತಿರವಿದ್ದ ತಂದೆಗಾಗಿ ಸಂಕೋಚಪಟ್ಟು ಮೆಲ್ಲಗೆ ಪರಶುರಾಮನನ್ನು ಕುರಿತು ಹೀಗೆ ಹೇಳಿದನು.

೪೭೩. "ಭಾರ್ಗವ ! ನನ್ನನ್ನು ಪರಾಕ್ರಮವಿಲ್ಲದವನನ್ನಾಗಿಯೂ, ಬಿಲ್ಲು ಹಿಡಿಯುವುದು, ದ್ವಂದ್ವಯುದ್ಧಮಾಡುವುದು ಮೊದಲಾದ ಕ್ಷತ್ರಿಯರಿಗೆ ಧರ್ಮವಾದ ವ್ಯಾಪಾರದಲ್ಲಿ ಅಸಮರ್ಥನನ್ನಾಗಿಯೂ ಅಪಮಾನ ಮಾಡುತ್ತಿರುವೆ. ನನ್ನ ಶಕ್ತಿಯನ್ನೂ ಪರಾಕ್ರಮವನ್ನೂ ಈಗ ನೋಡು."

೪೭೪. ಎಂದಿಷ್ಟನ್ನು ಹೇಳಿ ಕೋಪವನ್ನು ತಾಳಿದ ರಘುರಾಮನು ಬಿಲ್ಲು ಬಾಣಗಳನ್ನು ಪರಶುರಾಮನ ಕೈಯ್ಯಿಂದ ಸರ್ರನೆ ಸೆಳೆದುಕೊಂಡನು.

೪೭೫-೪೭೬. ಬಿಲ್ಲನ್ನು ಬಗ್ಗಿಸಿ ಹಗ್ಗ ಕಟ್ಟಿ ಬಾಣವನ್ನು ಅದರಲ್ಲಿ ತೊಟ್ಟನು. ಮತ್ತು ಪರಶುರಾಮನನ್ನು ಕುರಿತು "ರಾಮ ! ನೀನು ಬ್ರಾಹ್ಮಣ

ಬ್ರಾಹ್ಮಣೋಽಸೀತಿ ಪೂಜ್ಯೋ ಮೇ ವಿಶ್ವಾಮಿತ್ರಕೃತೇನ ಚ ।
ತಸ್ಮಾಚ್ಛಕ್ತೋ ನ ತೇ ರಾಮ ಮೋಕ್ತುಂ ಪ್ರಾಣಹರಂ ಶರಮ್ ॥
ಇತಿ ಬ್ರುವತಿ ಕಾಕುತ್ಸ್ಥೇ ಭಾರ್ಗವಂ ಪ್ರತಿ ರೋಷಿತೇ ।
ನಿರ್ವೀರ್ಯೋ ಜಾಮದಗ್ನ್ಯೋಽಸೌ ರಾಮೋ ರಾಮಮುದೈಕ್ಷತ ॥
ತೇಜೋಭಿಹತವೀರ್ಯತ್ವಾಜ್ಜಾಮದಗ್ನ್ಯೋ ಜಡೀಕೃತಃ ।
ರಾಮಂ ಕಮಲಪತ್ರಾಕ್ಷಂ ಮಂದಂ ಮಂದಮುವಾಚ ಹ ॥ ೪೭೪ ॥
ಅಕ್ಷಯಂ ಮಧುಹಂತಾರಂ ಜಾನಾಮಿ ತ್ವಾಂ ಸುರೋತ್ತಮಮ್ ।
ಧನುಷೋಽಸ್ಯ ಪರಾಮರ್ಶಾತ್ ಸ್ವಸ್ತಿ ತೇಽಸ್ತು ಪರಂತಪ ॥ ೪೭೯ ॥
ನ ಚೇಯಂ ಮಮ ಕಾಕುತ್ಸ್ಥ ವ್ರೀಡಾ ಭವಿತುಮರ್ಹತಿ ।

ನಾಗಿರುವುದರಿಂದ ನನಗೆ ಪೂಜ್ಯನಾಗಿರುವೆ. ಅದರಿಂದಲೂ; ವಿಶ್ವಾಮಿತ್ರನ ಬಂಧುವಾಗಿರುವೆಯೆಂಬ ಕಾರಣದಿಂದಲೂ, ನಿನ್ನ ಪ್ರಾಣ ತೆಗೆಯುವಂತೆ ಈ ಬಾಣವನ್ನು ಬಿಡಲು ಅವಕಾಶವಿಲ್ಲದವನಾಗಿದೇನೆ."

೪೭೭. ಎಂದು ಕೋಪದಿಂದ ಕಾಕುತ್ಸ್ಥ ರಾಮನು ಪರಶುರಾಮನನ್ನು ಕುರಿತು ಹೇಳುತ್ತಿರಲು ಅವನು ಸಾಮರ್ಥ್ಯವೆಲ್ಲವನ್ನೂ ಕಳೆದುಕೊಂಡು ಆಶ್ಚರ್ಯದಿಂದ ರಾಮನನ್ನು ನೋಡುತ್ತಾ ನಿಂತನು.

೪೭೮-೪೮೦. ರಾಮನ ತೇಜಸ್ಸಿನಿಂದ ಸಾಮರ್ಥ್ಯವೆಲ್ಲವೂ ಅಡಗಿ ಹೋದುದರಿಂದ ಏನು ಮಾಡುವುದೆಂದು ತೋಚದೇ ಸ್ತಬ್ಧನಾದ ಪರಶು ರಾಮನು ಬಳಿಕ ತಾವರೆಹೂವಿನ ದಳದಂತೆ ಅಂದವಾದ ಕಣ್ಣುಳ್ಳ ರಾಮನನ್ನು ಕುರಿತು "ಶತ್ರುಗಳನ್ನು ಸುಡುವ ಸಾಮರ್ಥ್ಯವುಳ್ಳವನೇ ! ರಾಮ ! ಇಂತಹ ಈ ಧನುಸ್ಸನ್ನು ಹಿಡಿದೆತ್ತಿದಿಯಾದಕಾರಣ ನಿನ್ನನ್ನು, ಮಧು ರಾಕ್ಷಸನನ್ನು ಸಂಹಾರಮಾಡಿದ, ನಾಶರಹಿತನಾದ ದೇವದೇವನನ್ನಾಗಿ ಅರಿಯುತ್ತೇನೆ. ನಿನಗೆ ಶುಭವಾಗಲಿ. ಕಕುತ್ಸ್ಥವಂಶದಲ್ಲವತರಿಸಿರುವ ರಾಮ ! ಮೂರು ಲೋಕಕ್ಕೂ ಸ್ವಾಮಿಯಾದ ನಿನ್ನಿಂದ ನನಗೆ ಅವಮಾನವಾದುದಕ್ಕಾಗಿ ನಾನು

ತ್ವಯಾತ್ರೈಲೋಕ್ಯನಾಥೇನ ಯದಹಂ ವಿಮುಖೀಕೃತಃ ॥ ೪೮೦ ॥
ತತೋ ವಿತಿಮಿರಾಃ ಸರ್ವಾ ದಿಶಶ್ಚೋಪದಿಶಸ್ತಥಾ ।
ಸುರಾಃ ಸರ್ಷಿಗಣಾ ರಾಮಂ ಪ್ರಶಶಂಸುರುದಾಯುಧಮ್ ॥ ೪೮೧ ॥
ರಾಮಂ ದಾಶರಥಿಂ ರಾಮೋ ಜಾಮದಗ್ನ್ಯಃ ಪ್ರಶಸ್ಯ ಚ ।
ತತಃ ಪ್ರದಕ್ಷಿಣಂ ಕೃತ್ವಾ ಜಗಾಮಾತ್ಮಗತಿಂ ಪ್ರಭುಃ ॥ ೪೮೨ ॥
ಗತೋ ರಾಮ ಇತಿ ಶ್ರುತ್ವಾ ಹೃಷ್ಟಃ ಪ್ರಮುದಿತೋ ನೃಪಃ ।
ಪುನರ್ಜಾತಂ ತದಾ ಮೇನೇ ಪುತ್ರಮಾತ್ಮಾನಮೇವ ಚ ॥ ೪೮೩ ॥
ಚೋದಯಾಮಾಸ ತಾಂ ಸೇನಾಂ ಜಗಾಮಾಶು ತತಃ ಪುರೀಮ್ ।
ಪತಾಕಾಧ್ವಜಿನೀಂ ರಮ್ಯಾಂ ತೂರ್ಯೋದ್ಘುಷ್ಟನಿನಾದಿತಾಮ್ ॥

ನಾಚಿಕೆಪಡಬೇಕಾದುದೇನೂ ಇಲ್ಲ" ಎಂದು ಮೆಲ್ಲಗೆ ವಿಜ್ಞಾಪಿಸಿಕೊಂಡನು.

೪೮೧. ಬಳಿಕ ಎಲ್ಲ ದಿಕ್ಕುಗಳೂ ಕತ್ತಲು ಹೋಗಿ ಬೆಳಗಲಾರಂಭಿಸಿದವು. ದೇವತೆಗಳೂ, ಋಷಿಗಳೂ ವೈಷ್ಣವ ಧನುಸ್ಸನ್ನು ಧರಿಸಿದ್ದ ದಶರಥ ರಾಮನನ್ನು ಬಹಳವಾಗಿ ಕೊಂಡಾಡಿದರು.

೪೮೨. ತುಂಬ ಸಾಮರ್ಥ್ಯವುಳ್ಳ ಪರಶುರಾಮನೂ ದಾಶರಥಿ ರಾಮನನ್ನು ಶ್ಲಾಘಿಸಿ, ಪ್ರದಕ್ಷಿಣೆಮಾಡಿ ತನ್ನ ವಾಸಸ್ಥಾನಕ್ಕೆ ಹೊರಟುಹೋದನು.

೪೮೩. ಪರಶುರಾಮನು ಹೊರಟು ಹೋದನೆಂಬುದನ್ನು ಕೇಳಿ ಸಂತೋಷಾತಿಶಯದಿಂದ ರೋಮಾಂಚಗೊಂಡ ದಶರಥರಾಜನು ತನ್ನನ್ನೂ ಮಗ ರಾಮನನ್ನೂ ಮರಳಿ ಹುಟ್ಟಿದಂತೆ ಭಾವಿಸಿದನು.

೪೮೪. ಅನಂತರ ಸೈನ್ಯವನ್ನು ಹೊರಡುವಂತೆ ಹೇಳಿ ಎಲ್ಲರೊಡನೆ ತಾನೂ ಹೊರಟು ಧ್ವಜಪತಾಕೆಗಳಿಂದ ಅಲಂಕೃತವಾಗಿ ತೂರ್ಯವಾದ್ಯಗಳ ನಾದದಿಂದ ತುಂಬಿ ಎಲ್ಲರ ಮನಸ್ಸಿಗೂ ಆನಂದವನ್ನುಂಟುಮಾಡುತ್ತಿರುವ ಅಯೋಧ್ಯಾಪಟ್ಟಣವನ್ನು ಬೇಗ ಸೇರಿದನು.

ಪುತ್ರೈರನುಗತಃ ಶ್ರೀಮಾನ್ ಶ್ರೀಮದ್ಭಿಶ್ಚ ಮಹಾಯಶಾಃ |
ನನನ್ದ ಸಜನೋ ರಾಜಾ ಗೃಹೇ ಕಾಮೈಃ ಸುಪೂಜಿತಃ ॥ ೪೮೫ ॥

ಅಭಿವಾದ್ಯಾಭಿವಾದ್ಯಾಂಶ್ಚ ಸರ್ವಾ ರಾಜಸುತಾಸ್ತದಾ |
ರೇಮಿರೇ ಮುದಿತಾಃ ಸರ್ವಾ ಭರ್ತೃಭಿಃ ಸಹಿತಾ ರಹಃ ॥ ೪೮೬ ॥

ಕುಮಾರಾಶ್ಚ ಮಹಾತ್ಮಾನೋ ವೀರ್ಯೇಣಾಪ್ರತಿಮಾ ಭುವಿ |
ಶುಶ್ರೂಷಮಾಣಾಃ ಪಿತರಂ ವರ್ತಯಂತಿ ನರರ್ಷಭಾಃ ॥ ೪೮೭ ॥

ಕಸ್ಯಚಿತ್ತ್ವಥ ಕಾಲಸ್ಯ ರಾಜಾ ದಶರಥಃ ಸುತಮ್ |
ಭರತಂ ಕೈಕೆಯೀಪುತ್ರಮಬ್ರವೀದ್ರಘುನಂದನಃ ॥ ೪೮೮ ॥

ಅಯಂ ಕೇಕಯರಾಜಸ್ಯ ಪುತ್ರೋ ವಸತಿ ಪುತ್ರಕ |
ತ್ವಾಂ ನೇತುಮಾಗತೋ ವೀರ ಯುಧಾಜಿನ್ಮಾತುಲಸ್ತವ ॥ ೪೮೯ ॥

೪೮೫. ಮಹಾಯಶಸ್ವಿಯೂ, ಐಶ್ವರ್ಯವಂತನೂ ಆದ ದಶರಥರಾಜನು ಭಾಗ್ಯವಂತರಾದ ಮಕ್ಕಳೊಡನೆ ಮತ್ತು ಬಂಧುಗಳೊಡನೆ ಕೂಡಿ ತನ್ನ ಮನೆಯಲ್ಲಿ ಬೇಕಾದ ಭೋಗಗಳನ್ನನುಭವಿಸುತ್ತಾ ಆನಂದಪಟ್ಟನು.

೪೮೬. ನಮಸ್ಕರಿಸತಕ್ಕವರನ್ನು ನಮಸ್ಕರಿಸಿ ಎಲ್ಲ ರಾಜಪುತ್ರಿಯರು (ಸೀತಾ, ಊರ್ಮಿಳೆ, ಮಾಂಡವಿ, ಶ್ರುತಕೀರ್ತಿಯರು) ತಮ್ಮ ತಮ್ಮ ಗಂಡಂದಿರೊಡನೆ ಕೂಡಿ ಸಂತೋಷದಿಂದ ವಿಹರಿಸುತ್ತಿದ್ದರು.

೪೮೭. ಪರಾಕ್ರಮದಿಂದ ಅಸಮಾನರಾದ, ಮಹಾತ್ಮರಾದ ಆ ಶ್ರೇಷ್ಠ ರಾಜಕುಮಾರರು ನಾಲ್ವರೂ ಶುಶ್ರೂಷೆಮಾಡುತ್ತಾ ತಂದೆಯನ್ನು ಆನಂದಗೊಳಿಸುತ್ತಿದ್ದರು.

೪೮೮-೪೮೯. ಹೀಗೆ ಕೆಲವುಕಾಲ ಕಳೆಯಲು ಒಂದು ದಿನ ದಶರಥ ರಾಜನು ಕೈಕೇಯಿಯ ಮಗ ಭರತನಿಗೆ "ಅಪ್ಪ ಮಗ! ವೀರನೇ! ನೋಡು ಕೇಕಯರಾಜನ ಮಗ ನಿನ್ನ ಮಾವ ಯುಧಾಜಿತ್ತು ನಿನ್ನನ್ನು ಕರೆದುಕೊಂಡು ಹೋಗಲು ಬಂದು ಇಲ್ಲೇ ಇರುವನು" ಎಂದು ಹೇಳಿದನು.

ಶ್ರುತ್ವಾ ದಶರಥಸ್ಯೈತದ್ಭರತಃ ಕೈಕಯೀಸುತಃ ।
ಆಪೃಚ್ಛ್ಯ ಪಿತರಂ ಶೂರೋ ರಾಮಂ ಚಾಕ್ಲಿಷ್ಟಕಾರಿಣಮ್ ।
ಮಾತೄಶ್ಚಾಪಿ ನರಶ್ರೇಷ್ಠಃ ಶತ್ರುಘ್ನಸಹಿತೋ ಯಯೌ ॥ ೪೯೦ ॥

ಪಿತುರಾಜ್ಞಾಂ ಪುರಸ್ಕೃತ್ಯ ಪೌರಕಾರ್ಯಾಣಿ ಸರ್ವಶಃ ।
ಚಕಾರ ರಾಮೋ ಧರ್ಮಾತ್ಮಾ ಪ್ರಿಯಾಣಿ ಚ ಹಿತಾನಿ ಚ ॥ ೪೯೧ ॥

ಮಾತೃಭ್ಯೋ ಮಾತೃಕಾರ್ಯಾಣಿ ಕೃತ್ವಾ ಪರಮಯನ್ತ್ರಿತಃ ।
ಗುರೂಣಾಂ ಗುರುಕಾರ್ಯಾಣಿ ಕಾಲೇ ಕಾಲೇಽನ್ವವೈಕ್ಷತ ॥ ೪೯೨ ॥

ಏವಂ ದಶರಥಃ ಪ್ರೀತೋ ಬ್ರಾಹ್ಮಣಾ ನೈಗಮಾಸ್ತದಾ ।
ರಾಮಸ್ಯ ಶೀಲವೃತ್ತೇನ ಸರ್ವೇ ವಿಷಯವಾಸಿನಃ ॥ ೪೯೩ ॥

---

೪೯೦. ದಶರಥನ ಈ ಮಾತನ್ನು ಕೇಳಿ ಶೂರನಾದ ಕೈಕೇಯಿಯ ಮಗ ಭರತನು ಯಾರಿಗೂ ನೋವನ್ನುಂಟುಮಾಡದ ಸ್ವಭಾವವುಳ್ಳ ರಾಮನಿಗೂ, ತಂದೆಗೂ, ತಾಯಂದಿರಿಗೂ 'ಹೋಗಿಬರುವೆನೆಂದು' ಹೇಳಿ ಶತ್ರುಘ್ನನೊಂದಿಗೆ ಹೊರಟುಹೋದನು.

೪೯೧-೪೯೨. ಶ್ರುತಿಸ್ಮೃತಿಗಳಿಗೆ ಅಧೀನನಾದ, ಧರ್ಮಶ್ರದ್ಧೆಯುಳ್ಳ ರಾಮನು ತಂದೆಯ ಅಪ್ಪಣೆಯನ್ನು ಮನ್ನಿಸಿ ಪುರಜನರಿಗೆ ಪ್ರಿಯವಾದ ಮತ್ತು ಹಿತವಾದ ಎಲ್ಲ ಕಾರ್ಯಗಳನ್ನೂ ನಡೆಸುತ್ತಿದ್ದನಲ್ಲದೇ ಆಯಾಯ ಕಾಲಗಳಲ್ಲಿ ತಾಯಂದಿರಿಗೆ ಬೇಕಾದ ಕೆಲಸಗಳನ್ನು ಗುರುಗಳಿಗವಶ್ಯಕವಾದ ಕೆಲಸಗಳನ್ನು ಸರಿಯಾಗಿ ನಡೆಯುವಂತೆ ನೋಡಿಕೊಳ್ಳುತ್ತಿದ್ದನು.

೪೯೩. ರಾಮನ ಈರೀತಿಯಾದ ಸ್ವಭಾವ ನಡತೆಗಳಿಂದ ದಶರಥನುಮಾತ್ರವಲ್ಲದೇ ಬ್ರಾಹ್ಮಣರೂ, ವರ್ತಕರೂ, ಎಲ್ಲ ಅಯೋಧ್ಯಾವಾಸಿಗಳೂ ಬಹಳ ಸಂತೋಷಪಡುತ್ತಿದ್ದರು.

ತಯಾ ಸ ರಾಜರ್ಷಿಸುತೋಽಭಿರಾಮಯಾ
ಸಮೇಯಿವಾನುತ್ತಮರಾಜಕನ್ಯಯಾ ।
ಅತೀವ ರಾಮಃ ಶುಶುಭೇಽತಿಕಾಮಯಾ
ವಿಭುಃ ಶ್ರಿಯಾ ವಿಷ್ಣುರಿವಾಮರೇಶ್ವರಃ ॥ ೪೯೪ ॥

ಇತಿ ಶ್ರೀಮದಾತ್ರೇಯ ತಿರುನಾರಣಾರ್ಯತನೂಜ
ಶ್ರೀನಿವಾಸದಾಸೇನ ಸಂಘಟಿತೇ ಸಂಗ್ರಹರಾಮಾಯಣೇ
ಬಾಲಕಾಂಡಃ ಸಂಪೂರ್ಣಃ

ಶ್ರೀರಾಮಾಯಣಖನಿತೋ ರಾಘವ ! ಸಂಗೃಹ್ಯ ಪದ್ಯರತ್ನಾನಿ ।
ಭಕ್ತಿವಶಾತ್ ಸಂಘಟಿತಾಂ ಸಂಗ್ರಹಮಾಲಾಂ ಸಮರ್ಪಯೇ ತುಭ್ಯಮ್ ॥

---

೪೯೪. ಆನಂದವನ್ನುಂಟುಮಾಡಲು ಸಮರ್ಥನಾದ, ರಾಜರ್ಷಿಯ ಮಗನಾದ ರಾಮನು ಅತಿಶಯವಾದ ಆನಂದವನ್ನುಂಟುಮಾಡುವ, ಅನುರಾಗಾತಿಶಯವುಳ್ಳ, ಮಹಾರಾಜನ ಮಗಳಾದ ಸೀತೆಯೊಡನೆ ಕೂಡಿ ಸರ್ವವ್ಯಾಪಿಯೂ, ದೇವದೇವನೂ ಆದ ಶ್ರೀಮಹಾವಿಷ್ಣುವು ಲಕ್ಷ್ಮಿಯೊಂದಿಗೆ ಶೋಭಿಸುವಂತೆ ಬಹಳವಾಗಿ ಶೋಭಿಸುತ್ತಿದ್ದನು.

ಇಂತು ಆತ್ರೇಯ ತಿರುನಾರಣಾರ್ಯರ ಪುತ್ರ
ಶ್ರೀನಿವಾಸದಾಸನಿಂದ ಸಂಗ್ರಹಿಸಲ್ಪಟ್ಟ ಸಂಗ್ರಹರಾಮಾಯಣದ
ಬಾಲಕಾಂಡವು ಸಂಪೂರ್ಣವು.

ರಾಮ ! ಶ್ರೀರಾಮಾಯಣವೆಂಬ ಗಣಿಯಿಂದ ಉತ್ತಮ ಪದ್ಯಗಳೆಂಬ ರತ್ನಗಳನ್ನಾರಿಸಿ ಭಕ್ತಿಪರವಶತೆಯಿಂದ ಜೋಡಿಸಿದ ಸಂಗ್ರಹರಾಮಾಯಣವೆಂಬ ಹಾರವನ್ನು ನಿನಗೆ ಸಮರ್ಪಿಸುವೆನು.

ಶುಭಮ್